ನಾಡಿನ ಎಲ್ಲಾ ರೈತರಿಗೆ
ಯುಗಾದಿ ಹಬ್ಬದ
ಶುಭಾಶಯಗಳು

ರೈತರಿಗೋಸ್ಕರ ಏಕಮಾತ್ರ ಪತ್ರಿಕೆ

ಕರ್ನಾಟಕ ವ್ಯವಸಾಯ ಪತ್ರಿಕೆ

ಸಂಪುಟ - 06 ಮಾರ್ಚ್ 2020 ಸಂಚಿಕೆ - 03 ರೂ. 9.50/-

09.02.2020ರಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರನ್ನು ಹಾಗೂ ಶಿವಮೊಗ್ಗ ಲೋಕಸಭಾ ಸದಸ್ಯರಾದ ಶ್ರೀ ಬಿ.ವೈ.ರಾಘವೇಂದ್ರ ರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್. ಮಹೇಂದ್ರನಾಥ್‌ರವರು ಭೇಟಿ ಮಾಡಿ ಸನ್ಮಾನಿಸಿ ಅಭಿನಂದಿಸಿದರು ಹಾಗೂ ನೂತನ ಕೃಷಿಭವನ ಕಟ್ಟಡಕ್ಕೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು. ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಡಿ.ಎಲ್.ನಾಗರಾಜರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್‌ರವರು, ರಾಜ್ಯ ಪ್ರತಿನಿಧಿಗಳಾದ ಶ್ರೀ ಜಿ.ಶಿವನಗೌಡರವರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

13.02.2020ರಂದು ನೂತನ ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್‌ರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರುಗಳು ಭೇಟಿ ನೀಡಿ ಸನ್ಮಾನಿಸಿ ಅಭಿನಂದಿಸಿದರು.

12.10.2019ರಂದು ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರಾದ ಶ್ರೀ ಲಕ್ಷ್ಮಣ ಸವದಿರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಹಾಗೂ ಮಾಜಿ ಆಡಳಿತ ಅಧ್ಯಕ್ಷರುಗಳಾದ ಡಾ.ಸಿದ್ರಾಮಪ್ಪ ಪಾಟೀಲ್ ಧಂಗಪೂರ್‌ರವರು, ಶ್ರೀ ವಡಗೂರು ಡಿ.ಎಲ್.ನಾಗರಾಜರವರು, ಶ್ರೀ ಹೆಚ್.ಲಕ್ಷ್ಮೀಕಾಂತರೆಡ್ಡಿರವರು, ಶ್ರೀ ಬಾಳಪ್ಪ ಬಸಪ್ಪ ಬೆಳಕೊಡರವರು, ಸದಸ್ಯರಾದ ಶ್ರೀ ಚಿಕ್ಕಸ್ವಾಮಿರವರು, ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು, ಶ್ರೀ ಶಿವಣ್ಣ ಮೂಲಿಮನಿರವರು ಹಾಗೂ ಬೆಂಗಳೂರು ಕೃಷಿ ವಿಶ್ವವಿಧ್ಯಾಲಯದ ಕುಲಪತಿಗಳಾದ ಶ್ರೀ ರಾಜೇಂದ್ರ ಪ್ರಸಾದ್‌ರವರು ಭೇಟಿ ಮಾಡಿ ಅಭಿನಂದಿಸಿದರು.

01.01.2020ರಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರು ಮತ್ತು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಲಕ್ಷ್ಮಣ ಸವದಿರವರ ಸಮ್ಮುಖದಲ್ಲಿ 2020ನೇ ಸಾಲಿನ ಸಮಾಜದ ಕೃಷಿ ಕೈಪಿಡಿ ಮತ್ತು ಕ್ಯಾಲೆಂಡರನ್ನು ಬಿಡುಗಡೆ ಮಾಡಲಾಯಿತು. ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್, ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಡಿ.ಎಲ್.ನಾಗರಾಜ, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್, ಬೀದರ್ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ರಾಜಕುಮಾರ್ ಎನ್. ಹಜಾರಿ ಹಾಗೂ ಕ.ಪ್ರ.ಯು.ರೈ. ಸಮಾಜ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ವಿ.ಮಂಜುನಾಥಗೌಡರವರು ಉಪಸ್ಥಿತರಿದ್ದರು.

26.11.2019ರಂದು ಮಾನ್ಯ ಶಿವಮೊಗ್ಗ ಲೋಕಸಭಾ ಸದಸ್ಯರಾದ ಶ್ರೀ ಬಿ.ವೈ. ರಾಘವೇಂದ್ರರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್ ಹಾಗೂ ಮಾಜಿ ಆಡಳಿತ ಅಧ್ಯಕ್ಷರುಗಳಾದ ಶ್ರೀ ವಡಗೂರು ಡಿ.ಎಲ್. ನಾಗರಾಜ, ಶ್ರೀ ಬಿ.ಕೆ.ಮಂಜುನಾಥಗೌಡ ಮತ್ತು ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್ ಅವರುಗಳು ಭೇಟಿ ಮಾಡಿ ಡಿಸೆಂಬರ್ 23ರ ರೈತ ದಿನಾಚರಣೆ ಕಾರ್ಯಕ್ರಮವನ್ನು ಸರ್ಕಾರದ ಮಟ್ಟದಲ್ಲಿ ಆಚರಿಸುವಂತೆ ಮನವಿ ಸಲ್ಲಿಸಿದರು.

12.10.2019ರಂದು ಮಾನ್ಯ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್ ಹಾಗೂ ಮಾಜಿ ಆಡಳಿತ ಅಧ್ಯಕ್ಷರುಗಳಾದ ಡಾ.ಸಿದ್ರಾಮಪ್ಪ ಪಾಟೀಲ್ ಧಂಗಪೂರ್, ಶ್ರೀ ವಡಗೂರು ಡಿ.ಎಲ್.ನಾಗರಾಜ, ಶ್ರೀ ಹೆಚ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಬಾಳಪ್ಪ ಬಸಪ್ಪ ಬೆಳಕೊಡ, ಸದಸ್ಯರಾದ ಶ್ರೀ ಚಿಕ್ಕಸ್ವಾಮಿ, ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್, ಶ್ರೀ ಶಿವಣ್ಣ ಮೂಲಿಮನಿ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ರಾಜೇಂದ್ರ ಪ್ರಸಾದ್ ಭೇಟಿ ಮಾಡಿ ಅಭಿನಂದಿಸಿದರು.

23.12.2019ರಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರಾದ ಶ್ರೀ ಲಕ್ಷ್ಮಣ್ ಸವದಿರವರು ಶಿವಮೊಗ್ಗ ಜಿಲ್ಲೆಗೆ ಬೇಟಿ ನೀಡಿದ ಸಂದರ್ಭದಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಆಯನೂರು ಮಂಜುನಾಥರವರು, ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್. ಮಹೇಂದ್ರನಾಥ್‌ರವರು ಹಾಗೂ ರೈತ ಮುಖಂಡರು ಸ್ವಾಗತಿಸಿದರು.

ದಿನಾಂಕ:12.10.2019ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಾದ (ಶಾಸಕರು) ಶ್ರೀ ಆಯನೂರು ಮಂಜುನಾಥ್‌ರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್ ಹಾಗೂ ಮಾಜಿ ಆಡಳಿತ ಅಧ್ಯಕ್ಷರುಗಳಾದ ಡಾ.ಸಿದ್ರಾಮಪ್ಪ ಪಾಟೀಲ್ ಧಂಗಪೂರ್, ಶ್ರೀ ವಡಗೂರು ಡಿ.ಎಲ್.ನಾಗರಾಜ, ಶ್ರೀ ಹೆಚ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಬಾಳಪ್ಪ ಬಸಪ್ಪ ಬೆಳಕೊಡ, ಸದಸ್ಯರಾದ ಶ್ರೀ ಚಿಕ್ಕಸ್ವಾಮಿ, ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್, ಶ್ರೀ ಶಿವಣ್ಣ ಮೂಲಿಮನಿ ಭೇಟಿ ಮಾಡಿ ಅಭಿನಂದಿಸಿದರು.

ನೂತನ ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್‌ರವರನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಭೇಟಿ ಮಾಡಿದರು.

ಕರ್ನಾಟಕ ವ್ಯವಸಾಯ ಪತ್ರಿಕೆ

ಸಂಪುಟ 06 ಮಾರ್ಚ್ 2020 ಸಂಚಿಕೆ 03

ಕರ್ನಾಟಕ ಪ್ರದೇಶ ಕೃಷಿಕ ಸಮಾಜ

ನೃಪತುಂಗ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22105032

Email: kpks2009@rediffmail.com

www.krishiksamaj.com

ಅಧ್ಯಕ್ಷರು

ಬಿ.ಸಿ.ಪಾಟೀಲ್

ಕೃಷಿ ಸಚಿವರು, ಕರ್ನಾಟಕ ಸರ್ಕಾರ

ಆಡಳಿತ ಅಧ್ಯಕ್ಷರು

ಎಂ. ಎಸ್. ಮಹೇಂದ್ರನಾಥ್

ಅಧಿಕಾರಿ ಕಾರ್ಯದರ್ಶಿಗಳು ಹಾಗೂ ಸಂಪಾದಕರು

ಜಿ. ಎಸ್. ಜಯಸ್ವಾಮಿ

ಒಳಪುಟಗಳಲ್ಲಿ...

ಅಧ್ಯಕ್ಷರ ಪರಿಚಯ 02

ಆಡಳಿತ ಅಧ್ಯಕ್ಷರ ನುಡಿ 03

ಸಂಪಾದಕೀಯ 04

ಜಲಾನಯನ ಅಭಿವೃದ್ಧಿ ಇಲಾಖೆ 05

ಕೃಷಿಗೆ ನೀರುಣಿಸಲು ರೈನ್ ಪೈಪ್ ಮಾದರಿ 09

ಕೃಷಿ ವಿಸ್ತರಣಾ ನಿರ್ದೇಶನಾಲಯದ ಕಿರುಪರಿಚಯ 10

ಮಲೆನಾಡು ಕೃಷಿಗಿರುವ ಸವಾಲುಗಳು ಮತ್ತು ಆತಂಕ 14

ಮಣ್ಣು ಮತ್ತು ನೀರು ಕೃಷಿಯ ಜೀವಾಳು 16

ರೇಷ್ಮೆ ಗೂಡಿಗೆ ಡಿಜಿಟಲ್ ಮಾರುಕಟ್ಟೆ! 19

ಬೀಜ ಗ್ರಾಮ ಯೋಜನೆ: ವಿನೂತನ ಪರಿಕಲ್ಪನೆ 22

ರೈತರ ಆದಾಯ ದ್ವಿಗುಣಗೊಳಿಸಲು ಸಾಧ್ಯ ! 25

ಬಂಪರ್ ಬದನೆ 27

ಚಿತ್ರಗಳು 29

ಸೂಚನೆ

ಕರ್ನಾಟಕ ವ್ಯವಸಾಯ ಪತ್ರಿಕೆಯು ಪ್ರಕಟಿಸಿದ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಲೇಖಕರದೇ ಹೊರತು ಅದಕ್ಕೆ ಸಂಪಾದಕರು ಅಥವಾ ಪ್ರಕಾಶಕರು ಹೊಣೆಗಾರರಲ್ಲ.

ಕರ್ನಾಟಕ ವ್ಯವಸಾಯ ಪತ್ರಿಕೆಯ ಯಶಸ್ಸಿಗಾಗಿ ಪತ್ರಿಕೆಗೆ ಲೇಖನಗಳನ್ನು ವಿಶ್ವವಿದ್ಯಾಲಯದ ವಿಜ್ಞಾನಿಗಳು / ಸಂಶೋಧಕರು / ವಿಸ್ತರಣಾ ಸಿಬ್ಬಂದಿ / ಸಹ ಸಂಶೋಧಕರು / ಪ್ರಗತಿಪರ ರೈತರು ಕಳುಹಿಸಬಹುದು ಮತ್ತು ನಮ್ಮ ಇ-ಅಂಚೆ kpks2009@rediffmail.com ಗೆ ಸಾಫ್ಟ್ ಕಾಪಿ ಕಳುಹಿಸಬಹುದು.

ಅಧ್ಯಕ್ಷರ ಪರಿಚಯ

ಶ್ರೀ ಬಿ.ಸಿ.ಪಾಟೀಲ್
ಕೃಷಿ ಸಚಿವರು, ಕರ್ನಾಟಕ ಸರ್ಕಾರ
ಹಾಗೂ ಅಧ್ಯಕ್ಷರು,
ಕರ್ನಾಟಕ ಪ್ರದೇಶ ಕೃಷಿಕ ಸಮಾಜ

ಕರ್ನಾಟಕ ರಾಜ್ಯ ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್ ಇವರು 1956ರ ನವೆಂಬರ್ 14ರಂದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಯಲಿವಾಳ ಗ್ರಾಮದ ಕೃಷಿ ಕುಟುಂಬದ ಶ್ರೀಮತಿ ಶಿವಮ್ಮ ಮತ್ತು ಶ್ರೀ ಚನ್ನಬಸವಣ್ಣಗೌಡ ಇವರುಗಳ ಸುಪುತ್ರರಾಗಿ ಜನಿಸಿರುತ್ತಾರೆ.

ಶ್ರೀಯುತರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಯಲಿವಾಳ ಮತ್ತು ಚಿಕ್ಕೆರೂರಿನಲ್ಲಿ ಪೂರೈಸಿ, ಕಾಲೇಜು ವ್ಯಾಸಂಗವನ್ನು ದಾವಣಗೆರೆ ಡಿಆರ್‌ಎಂ ಮತ್ತು ಶಿವಮೊಗ್ಗದ ಡಿವಿಎಸ್ ಮಹಾವಿದ್ಯಾಲಯದಲ್ಲಿ ಪಡೆದಿರುತ್ತಾರೆ. ನಂತರ 1979ರಿಂದ ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್ ಹುದ್ದೆಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಸುಮಾರು ಎರಡು ದಶಕಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಜೊತೆಗೆ ಪ್ರತಿಭಾವಂತ ಚಲನಚಿತ್ರ ಕಲಾವಿದರಾಗಿಯೂ ವಿವಿಧ ಪಾತ್ರಗಳಿಂದ ಕನ್ನಡ ನಾಡಿನ ಜನಮನದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ.

ಶ್ರೀಯುತರು ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ದನಿಯಾಗಲು ಸಕ್ರಿಯ ರಾಜಕೀಯ ಪ್ರವೇಶ ಪಡೆದು 2004, 2008, 2018 ಮತ್ತು 2019ರಲ್ಲಿ ಹಿರೇಕೆರೂರು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿ, ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಹಿರೇಕೆರೂರು ಕ್ಷೇತ್ರ ಅಭಿವೃದ್ಧಿಯ ಹರಿಕಾರರಾಗಿದ್ದಾರೆ.

ಶ್ರೀಯುತರು ಕೃಷಿ ಸಚಿವರಾದ ತಕ್ಷಣವೇ ತಮ್ಮ ಕ್ಷೇತ್ರದಲ್ಲಿ 285 ಕೋಟಿ ರೂ.ಗಳ ಅನುದಾನದಲ್ಲಿ ವಿವಿಧ ಕಾಮಗಾರಿಗಳ ಶಿಲಾನ್ಯಾಸ ಹಾಗೂ ಉದ್ಘಾಟನಾ ಕಾರ್ಯಕ್ರಮಗಳನ್ನು ದಿನಾಂಕ: 07.03.2020ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಮೃತ ಹಸ್ತದಿಂದ ಶಿಲಾನ್ಯಾಸ ನೆರವೇರಿಸಿ, ಮೊರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಲೋಕಾರ್ಪಣೆಗೊಳಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಶ್ರೀಯುತರು ಕ್ರಿಯಾಶೀಲತೆ ಮತ್ತು ಉತ್ಸಾಹಶೀಲತೆಯಿಂದ ನಮ್ಮ ಕೃಷಿ ಇಲಾಖೆಯ ನವೀನ ಕ್ರಿಯಾ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ, ರೈತ–ಬಾಂಧವರ ಸರ್ವತೋಮುಖ ಅಭಿವೃದ್ಧಿಗಾಗಿ ನವಚೈತನ್ಯ ತುಂಬಲೆಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜವು ಇವುರನ್ನು ಅಭಿನಂದಿಸುತ್ತದೆ.

ಆಡಳಿತ ಅಧ್ಯಕ್ಷರ ನುಡಿ

ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳ ಮಂತ್ರಿಮಂಡಳದಲ್ಲಿ ನೂತನವಾಗಿ ಕೃಷಿ ಖಾತೆ ಹೊಂದಿರುವ ಮಾನ್ಯ ಕೃಷಿ ಸಚಿವರು ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷರೂ ಆದ ಶ್ರೀ ಬಿ.ಸಿ.ಪಾಟೀಲ್‌ರವರಿಗೆ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಹಾಗೂ ಕಾರ್ಯಕಾರಿ ಮಂಡಳಿಯ ಪರವಾಗಿ ತುಂಬು ಹೃದಯದ ಸ್ವಾಗತವನ್ನು ಬಯಸುತ್ತೇನೆ.

ಇತ್ತೀಚೆಗೆ ರಾಜ್ಯ ಸರ್ಕಾರವು ಬಜೆಟ್‌ಗೆ ಪೂರ್ವಭಾವಿಯಾಗಿ ಕೃಷಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ರೈತ ಮುಖಂಡರುಗಳ ಸಭೆಯನ್ನು ವಿಧಾನಸೌಧದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯಲ್ಲಿ ಮಾನ್ಯ ಕೃಷಿ ಸಚಿವರು ಸಹ ಹಾಜರಿದ್ದು, ಜಿಲ್ಲಾವಾರು ರೈತರ ಸಮಸ್ಯೆಗಳ ಕುರಿತಂತೆ ಮುಖಂಡರುಗಳು ನೀಡಿದ ಹಲವು ಸಲಹೆ ಸೂಚನೆಗಳನ್ನು ಪಡೆದು ಅವುಗಳನ್ನು ಈ ಬಾರಿಯ 2020–21ನೇ ಸಾಲಿನ ಬಜೆಟ್‌ನಲ್ಲಿ ಅನುಷ್ಠಾನಗೊಳಿಸಿರುವುದು ಸಂತೋಷದ ಸಂಗತಿ.

ರಾಜ್ಯ ಸರ್ಕಾರವು ರೈತರಿಗಾಗಿ ಹಮ್ಮಿಕೊಂಡಿರುವ ಹಲವು ಯೋಜನೆಗಳಾದ ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ್ ಯೋಜನೆ ಅಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೇಂದ್ರ ಸರ್ಕಾರದ ನೆರವಿನೊಂದಿಗೆ 4 ಸಾವಿರ ರೂ.ಗಳನ್ನು ಹೆಚ್ಚುವರಿಯಾಗಿ ನೆರವು ನೀಡಿರುವುದು. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರತಿವರ್ಷ 10 ಸಾವಿರ ರೂ.ಗಳವರೆಗೆ ವಾರ್ಷಿಕ ಹಣಕಾಸು ನೆರವು, ರಾಜ್ಯದಲ್ಲಿ ಬರನಿರೋಧಕ ಬೆಳೆಗಳನ್ನು ಪ್ರೋತ್ಸಾಹಿಸಲು 'ರೈತ ಸಿರಿ' ಯೋನೆಯನ್ನು ಘೋಷಿಸಿರುವುದು, ಕೃಷಿಯಲ್ಲಿ ಕಾಲಕಾಲಕ್ಕೆ ಮಣ್ಣು/ನೀರು ಪರೀಕ್ಷೆ ಮತ್ತು ಇತರೆ ತಾಂತ್ರಿಕ ನೆರವಿಗಾಗಿ ಸಂಚಾರಿ 'ಕೃಷಿ ಹೆಲ್ತ್ ಕ್ಲಿನಿಕ್'ಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವುದು. ರಾಜ್ಯದ ಹಲವು ತಾಲ್ಲೂಕುಗಳಲ್ಲಿ ಅಂತರ್ಜಲ ಸ್ಥಿತಿ ಗಂಭೀರವೆಂದು ಪರಿಗಣಿಸಲಾದ ತಾಲ್ಲೂಕುಗಳಲ್ಲಿ ಜಲ ಸಂರಕ್ಷಣೆ ಮತ್ತು ಮಳೆನೀರು ಕೊಯ್ಲು ಚಟುವಟಿಕೆಗಾಗಿ ಸುಮಾರು 100 ಜಲಾನಯನ ನಿರ್ವಹಣಾ ಯೋಜನೆಗಳನ್ನು ಮಂಜೂರು ಮಾಡಿರುವುದು ಸೇರಿದಂತೆ ಇನ್ನೂ ಅನೇಕ ಯೋಜನೆಗಳನ್ನು ಜಾರಿಗೆ ತಂದಿರುವುದು ಅನ್ನದಾತ ರೈತರ ಮೇಲೆ ಇರುವ ಕಾಳಜಿಗೆ ಸಾಕ್ಷಿಯಾಗಿದೆ.

ಸರ್ಕಾರದ ಈ ಎಲ್ಲಾ ಯೋಜನೆಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಲು ಮಾನ್ಯ ಕೃಷಿ ಸಚಿವರು ಸಹ ಉತ್ಸುಕರಾಗಿರುವುದು ತುಂಬಾ ಹೆಮ್ಮೆಯ ಸಂಗತಿ. ಇವರ ಕಾಲಾವಧಿಯಲ್ಲಿ ಉತ್ತಮವಾಗಿ ರೈತ ಪರ ಕಾರ್ಯಕ್ರಮಗಳನ್ನು ಕೈಗೊಂಡು ಯಶಸ್ವಿಯಾಗಿ ಸೇವೆ ಸಲ್ಲಿಸಲಿ ಎಂಬ ಆಶಯದೊಂದಿಗೆ ಸಮಸ್ತ ರೈತ ಬಾಂಧವರ ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಎಲ್ಲಾ ಸದಸ್ಯರ ಪರವಾಗಿ ಅಭಿನಂದನೆಗಳು.

(ಎಂ.ಎಸ್.ಮಹೇಂದ್ರನಾಥ್)
ಆಡಳಿತ ಅಧ್ಯಕ್ಷರು

ಸಂಪಾದಕೀಯ

ಫಲವತ್ತಾದ ಭೂಮಿಯಲ್ಲಿ ವಿವಿಧ ಬೆಳೆಗಳು:

ರೈತರು ಸಿರಿಧಾನ್ಯಗಳನ್ನು ಬೆಳೆಯುವುದರ ಜೊತೆಗೆ ಶೂನ್ಯ ಬಂಡವಾಳದಲ್ಲಿ ವಿವಿಧ ಬೆಳೆಗಳನ್ನು ಬೆಳೆಯುವ ಮೂಲಕ ಹೆಚ್ಚಿನ ಆದಾಯ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಾರಂಭದಲ್ಲಿ ಕಡಿಮೆ ಆದಾಯ ಇತ್ತಾದರೂ ಕ್ರಮೇಣ ಭೂಮಿಯ ಫಲವತ್ತತೆಗೆ ಹೆಚ್ಚಿನ ಗಮನ ನೀಡುತ್ತಿರುವುದರಿಂದ ಅಧಿಕ ಇಳುವರಿ ಬರಲು ಆರಂಭಿಸಿದೆ.

ಮುಖ್ಯ ಬೆಳೆಗಳಾದ ಈರುಳ್ಳಿ, ಬಾಳೆ, ಅರಿಶಿನ, ಪಡವಲ, ಹೀರೆ, ಸಬ್ಬಿಗೆ, ಕೊತ್ತಂಬರಿ, ಪಾಲಕ್ ಹಾಗೂ ಟೊಮೇಟೊ ಇತ್ಯಾದಿ ತರಕಾರಿಗಳಿವೆ. ಸೊಪ್ಪುಗಳು ಸುಮಾರು 25 ರಿಂದ 40 ದಿನಗಳಲ್ಲಿ ಕಟಾವಿಗೆ ಬರುತ್ತದೆ. ನಂತರ ತರಕಾರಿಗಳು ಕಟಾವಿಗೆ ಬರುವ ಸರದಿ, ಇವುಗಳ ನಡುವೆ ಗೋವಿನ ಜೋಳ ಇತ್ಯಾದಿಗಳನ್ನು ನಾಟಿ ಮಾಡಿದಲ್ಲಿ ಸುಮಾರು 70 ದಿನಗಳಲ್ಲಿ ಕಟಾವಿಗೆ ಬರುತ್ತದೆ. ತರಕಾರಿ ತ್ಯಾಜ್ಯ, ಜೀವನಾಮೃತ ಹಾಗೂ ಸಾವಯವ ಗೊಬ್ಬರದಿಂದ ಬೆಳೆಯು ಸಮೃದ್ಧವಾಗಿ ನಳಿನಳಿಸುತ್ತದೆ.

ರಾಸಾಯನಿಕ ಕ್ರಿಮಿನಾಶಕ ಬಳಕೆಗೆ ಮೊದಲು:

ಕೃಷಿ ಪದ್ಧತಿಯಲ್ಲಿ ಕೀಟನಾಶಕಗಳ ಬಳಕೆ ಸಾಮಾನ್ಯವಾಗಿದೆ. ಇದಕ್ಕೆ ಪರ್ಯಾಯವಾಗಿ ಟ್ರೈಕೊಗ್ರಾಮ ಒಂದು ಒಳ್ಳೆಯ ಪದ್ಧತಿ. ರಾಸಾಯನಿಕ ಕ್ರಿಮಿನಾಶಕ ಬಳಸದೇ ಹಾನಿಕಾರಕ ಕೀಟಗಳ ಸ್ವಾಭಾವಿಕ ಶತೃವನ್ನು ಬಳಸಿಕೀಟ ನಿಯಂತ್ರಿಸುವ ವಿಧಾನವೇ ಜೈವಿಕ ಕೀಟ ಹತೋಟಿ ಪದ್ಧತಿ. ಸಾಮಾನ್ಯವಾಗಿ ಬೆಳೆಗಳ ಸುಳಿ, ಕಾಯಿ ಕೊರೆಯುವ ಹುಳುಗಳೇ ಬೆಳೆಯನ್ನು ಹೆಚ್ಚು ಹಾಳು ಮಾಡುತ್ತದೆ. ಇದು ಒಂದು ಸೂಕ್ಷ್ಮ ಕೀಟಾಣುವಾಗಿದ್ದು, ಹುಳುಗಳ ಹತೋಟಿಗೆ ಜೈವಿಕ ಕೀಟ ಪದ್ಧತಿ ಹೆಚ್ಚು ಪ್ರಭಾವಿಯಾಗಿದೆ.

ಟ್ರೈಕೊಗ್ರಾಮ ಅತೀ ಸಣ್ಣ ಕೀಟವಾಗಿದ್ದು, ಬೆಳೆಗಳಿಗೆ ಭಾದಿಸುವ ಸುಮಾರು 200 ವಿವಿಧ ಕೀಟಗಳ ಮೊಟ್ಟೆಗಳನ್ನು ನಾಶಪಡಿಸುತ್ತದೆ. ಒಂದು ಎಕರೆಗೆ ಸಣ್ಣ ಗಾತ್ರದ ಸುಮಾರು 2000 ಮೊಟ್ಟೆಗಳಿರುವ 4 ಕಾರ್ಡ್‌ಗಳು ಬೇಕಾಗಬಹುದು. ಮೊಟ್ಟೆಗಳಿರುವ ಕಾರ್ಡ್‌ನಿಂದ ಹುಟ್ಟಿಕೊಳ್ಳುವ ಪತಂಗ 45 ದಿನಗಳವರೆಗೆ ಬದುಕುತ್ತದೆ. ಬೆಳೆ ಹಾಲುಗೆಡವುವ ಕೀಟಗಳೇ ಇವುಗಳ ಪ್ರಮುಖಾಹಾರ ಗದ್ದೆಯಲ್ಲಿ ಇದ್ದ ಎಲ್ಲಾ ಕೀಟನಾಶಕ ಪತಂಗ ಹುಳುಗಳ ಮೊಟ್ಟೆಯನ್ನು ತಿಂದುಹಾಕುತ್ತದೆ. ಇದರಿಂದ ಸುಲಭವಾಗಿ ಕೀಟಗಳು ಕಣ್ಮರೆಯಾಗುವುದು. 4 ವಾರಕ್ಕೊಂದು ಬಾರಿಯಂತೆ ಕಾರ್ಡ್ ಕಟ್ಟುತ್ತಿರಬೇಕು. ಇದಕ್ಕೂ ಒಂದು ವಾರ ಮುಂಚಿತವಾಗಿ ಯಾವುದೇ ರಾಸಾಯನಿಕ ಕೀಟನಾಶಕವನ್ನು ಸಿಂಪಡಿಸಬಾರದು.

ಇದರಿಂದ ಆಗುವ ಪ್ರಯೋಜನಗಳು:

ಶೇ.50ರಷ್ಟು ಕಡಿಮೆ ಖರ್ಚು, ಸುಲಭ ಬಳಕೆ, ರಾಸಾಯನಿಕ ಮುಕ್ತ, ಪರಿಸರ ಹಾಗೂ ಫಲವತ್ತತೆಗೆ ಸ್ನೇಹಿ. ಮುಂದಿನ ಪೀಳಿಗೆಗೆ ಫಲವತ್ತತೆ ಉಳಿಸುವಲ್ಲಿ ದಿಟ್ಟ ಕ್ರಮ. ಆರೋಗ್ಯ ದೃಷ್ಟಿಯಿಂದಲೂ ಉತ್ತಮ.

ಇದಕ್ಕೆ ಸೂಕ್ತವಾದ ಬೆಳೆಗಳು:

ಇದು ಎಲ್ಲಾ ಬೆಳೆಗಳಿಗೂ ಸೂಕ್ತ, ಟೊಮೇಟೊ, ಬದನೆ, ಮೆಣಸಿನಕಾಯಿ, ಕಬ್ಬು, ಹತ್ತಿ, ಭತ್ತ, ಶೇಂಗಾ, ಗುಲಾಬಿ, ನಿಂಬೆ, ಜೋಳ ಮುಂತಾದ ಬೆಳೆಗಳನ್ನು ಕಾಡುವ ಸಸಿಗಳ ಕಾಂಡ ಕೊರೆವ, ಎಲೆ ಮಡಚುವ, ಕೊಳವೆ ಕಟ್ಟುವ ಮೊಗ್ಗು ಮತ್ತು ಹೂ ಕೊರೆಯುವ ಎಲೆ ತಿನ್ನುವ ಕೀಟಗಳನ್ನು ಈ ಪತಂಗಗಳು ತಿಂದು ಮುಗಿಸುತ್ತದೆ.

ಟ್ರೈಕೊಗ್ರಾಮ ಮೊಟ್ಟೆಗಳು ದೊರೆಯುವ ಸ್ಥಳ:

ಸಾಮಾನ್ಯವಾಗಿ ಕೃಷಿ ಇಲಾಖೆಯಲ್ಲಿ ಮೊಟ್ಟೆಯ ಕಾರ್ಡ್‌ಗಳು ದೊರೆಯುತ್ತದೆ. ಇವುಗಳನ್ನು ಕೊಂಡೊಯ್ಯುವುದು ಸುಲಭ. ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಪ್ರಯೋಗಾಲಯಗಳನ್ನು ತೆರೆದಿರುತ್ತದೆ. ಬೆಳೆಗಳಿಗೆ ಈಗಾಗಲೇ ರಾಸಾಯನಿಕ ಬಳಸಿದ್ದರೆ ಜೈವಿಕ ಹತೋಟಿ ಕ್ರಮವನ್ನು ಕೈಗೊಳ್ಳಬಹುದೇ ಎಂಬುದನ್ನು ವಿಚಾರಿಸುವುದು ಸೂಕ್ತ. ಕೆಲವು ರೈತರ ಈ ಪದ್ಧತಿ ಅಳವಡಿಕೆಯಿಂದ ಪ್ರಗತಿ ಕಂಡಿದ್ದು, ಇತರರಿಗೆ ಮಾದರಿಯಾಗಿದ್ದಾರೆ.

(ಜಿ.ಎಸ್.ಜಯಸ್ವಾಮಿ)
ಸಂಪಾದಕರು

ಜಲಾನಯನ ಅಭಿವೃದ್ಧಿ ಇಲಾಖೆ

ಪರಿಕಲ್ಪನೆ ಮತ್ತು ಅವಶ್ಯಕತೆ

ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.49 ಲಕ್ಷ ಹೆಕ್ಟೇರ್‌ಗಳಿದ್ದು ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ 107.9 ಲಕ್ಷ ಹೆಕ್ಟೇರ್‌ನಷ್ಟಿದೆ. ಶೇಕಡ 70 ರಷ್ಟು ಜನ ಸಂಖ್ಯೆ ಕೃಷಿ ಮೇಲೆ ಅವಲಂಬಿತವಾಗಿದ್ದು, ಕೃಷಿಯಿಂದ ಶೇಕಡ 30 ಜಿಡಿಪಿ ಬರುತ್ತದೆ. ರಾಜ್ಯದಲ್ಲಿ ಶೇಕಡ 75 ರಷ್ಟು ಭಾಗವು ಮಳೆ ಆಶ್ರಯದಲ್ಲಿ ಬರುವ ಕ್ಷೇತ್ರವಾಗಿದ್ದು, ಈ ಕ್ಷೇತ್ರದ ಅಭಿವೃದ್ಧಿಯೇ ಇಂದಿನ ಪ್ರಮುಖ ಉದ್ದೇಶವಾಗಿದೆ. ಬರುವಂತಹ ಮಳೆ ಏರುಪೇರಿನಿಂದ ಭೂ ಸವಕಳಿ ಉಂಟಾಗಿ, ಜನಸಂಖ್ಯೆಯ ಒತ್ತಡದಿಂದ ಕಾಡು ಕಡಿಮೆಯಾಗಿ ಮಳೆ ಅನಿಶ್ಚಿತತೆ ಉಂಟಾಗಿ ಕೃಷಿ ಅಭಿವೃದ್ಧಿಯು ಕುಂಠಿತವಾಗುವ ಸಂಭವವನ್ನು ತಪ್ಪಿಸಲು ಜಲಾನಯನ ಅಭಿವೃದ್ಧಿ ಬಹಳ ಪ್ರಾಮುಖ್ಯತೆ ಪಡೆದಿದೆ.

ಜಲಾನಯನ:

ಮಳೆಯಾದಾಗ ದಿಬ್ಬದಿಂದ ಕಣಿವೆಯತ್ತ ಒಂದು ನಿರ್ದಿಷ್ಟ ಬಿಂದುವಿಗೆ ಬರುವಂತಹ ನೀರಿನ ಪ್ರದೇಶವನ್ನು ಜಲಾನಯನ ಎಂದು ಕರೆಯಲಾಗುತ್ತದೆ. ಒಟ್ಟಾರ ನಾಲಾ ಅತವಾ ಹಳ್ಳದಲ್ಲಿ ಆಯ್ಕೆ ಮಾಡಿದ ಬಿಂದುವಿಗೆ ಮಳೆ ನೀರು ಒದಗಿಸುವ ಭೂಪ್ರದೇಶಕ್ಕೆ ಜಲಾನಯನ ಪ್ರದೇಶ ಎಂದು ಕರೆಯಬಹುದಾಗಿದೆ.

ದಿಬ್ಬದಿಂದ ಕಣಿವೆಯತ್ತ ನೀರು ಚಲಾಯಿಸುವಾಗ ಮಣ್ಣು ಮತ್ತು ಮಣ್ಣಿನ ತೇವಾಂಶ, ಜೀವರಾಶಿ ಮತ್ತು ಅರಣ್ಯಗಳನ್ನು ಸಂರಕ್ಷಿಸಿ ಮಾನವನಿಗೆ ದೈನಂದಿನ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಸಮಗ್ರ ರೀತಿಯ ಅಭಿವೃದ್ಧಿಯನ್ನು ಜಲಾನಯನ ಯೋಜನೆಗಳ ಮುಖಾಂತರ ಕೈಗೊಳ್ಳುವುದು ಈ ದಿನದ ಮಹತ್ವದ ಕೆಲಸವಾಗಿದೆ.

ಅತಿವೃಷ್ಟಿ ಮತ್ತು ಅನಾವೃಷ್ಟಿಯ ಪರಿಣಾಮ ನೈಸರ್ಗಿಕ ಸಂಪತ್ತಿನ ನಾಶದಿಂದ ಮಣ್ಣಿನ ಸವಕಳಿ ಹೆಚ್ಚಾಗಿ ಭೂ ಫಲವತ್ತತೆ ಕಡಿಮೆಯಾಗುತ್ತದೆ. ಇದರೊಂದಿಗೆ ಕೃಷಿ ಉತ್ಪನ್ನದ ಮೇಲೆ ದುಷ್ಪರಿಣಾಮ ಆಗುತ್ತದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ದಿನ ನಿತ್ಯದ ಆಹಾರ ಬೇಡಿಕೆ, ಜಾನುವಾರುಗಳ ಮೇವು ಮತ್ತು ಕೃಷಿ ಆಧಾರಿತ ಗುಡಿ ಕೈಗಾರಿಕೆಗಳನ್ನು ಸುಸ್ಥಿತಿಯಲ್ಲಿಡಲು ಸರ್ವತೋಮುಖವಾದ ಸಮಗ್ರ ಜಲಾನಯನ ಅಭಿವೃದ್ಧಿಯ ಅವಶ್ಯಕತೆ ಬಹಳಷ್ಟಿದೆ.

ಜಲಾನಯನ ಅಭಿವೃದ್ಧಿಯ ಮುಖ್ಯ ಉದ್ದೇಶಗಳು:

- **ನೈಸರ್ಗಿಕ ಸಂಪನ್ಮೂಲ ರಕ್ಷಣೆಯೊಂದಿಗೆ ತಕ್ಕಂತೆ ಬಳಸಲು ಉತ್ತೇಜನ.**
- **ಬೀಳುವ ಪ್ರತಿಯೊಂದು ಮಳೆಹನಿಯನ್ನು ಕೊಯ್ಲು ಮಾಡಿ ಸಮರ್ಪಕ ಬಳಕೆಗೆ ಪ್ರೇರೇಪಣೆ.**
- **ಗ್ರಾಮದಲ್ಲಿ ಸುಸ್ಥಿತ ಆದಾಯದ ಮೂಲಗಳನ್ನು ಸೃಷ್ಟಿಸುವುದು.**
- **ಆನರ ಸಹಭಾಗಿತ್ವದ ಮೂಲಕ ಸಮುದಾಯ ಸಂಘಟನೆ.**
- **ಭೂಮಿ, ನೀರು, ಸಸ್ಯೋತ್ಪಾದನೆ ಅಭಿವೃದ್ಧಿ ಮೂಲಕ ಪರಿಸರ ಸಮತೋಲನೆಗೆ ಜಾಗೃತಿ.**
- **ಮಳೆ ಆಶ್ರಿತ ಪ್ರದೇಶಗಳನ್ನು ನೀರಾವರಿ ಪ್ರದೇಶಗಳಾಗಿ ಮಾರ್ಪಡಿಸುವ ವ್ಯವಸ್ಥೆ.**

- **ಮಳೆ ನೀರನ್ನು ವಿವಿಧ ಉಪಕರಗಳ ಮೂಲಕ ಸಂಗ್ರಹಿಸಿ ಭೂಮಿಯ ಅಂತರ್ಜಲ ಸುಧಾರಣೆ.**
- **ಗ್ರಾಮೀಣ ಸಮುದಾಯಕ್ಕೆ ಅದರಲ್ಲೂ ಭೂರಹಿತ ವರ್ಗಕ್ಕೆ ಉದ್ಯೋಗ ಮತ್ತು ಗುಡಿ ಕೈಗಾರಿಕೆಗಳ ಸುಸ್ಥಿರ ಉದ್ಯೋಗ ಸೃಷ್ಟಿಯಾಗಿ ಚಾಲನೆ.**
- **ಸುಲಭ ಹಾಗೂ ಹೊಂದುವ ಸುಧಾರಿತ ತಂತ್ರಜ್ಞಾನವನ್ನು ಅಳವಡಿಸಿ ಕಡಿಮೆ ಮತ್ತು ಅತೀ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ಹಾಗೂ ರೈತರೇ ನಿರ್ಮಿಸಿಕೊಳ್ಳುವಂತೆ ತಂತ್ರಜ್ಞಾನದ ಪರಿಚಯ.**
- **ಬತ್ತಿ ಹೋಗುವ ತೆರೆದ ಬಾವಿಗಳ ಪುನರುಜ್ಜೀವನ.**
- **ವಿಫಲವಾದ ಕೊಳವೆ ಬಾವಿಗಳ ಪುನರುಜ್ಜೀವನ.**
- **ಮೇಲ್ಭಾವಣೆ ಮಳೆ ನೀರು ಕೊಯ್ಲು ಮಾಡಿ ಆರ್ಥಿಕ ಹೊರೆ ಇಳಿಕೆ.**

ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಲಾನಯನ ತತ್ವದ ಆಧಾರದ ಮೇಲೆ ದಿಬ್ಬದಿಂದ ಕಣಿವೆ (Ridge to Valley) ನಿವ್ವಳ ಯೋಜನೆಯನ್ನು (Net Planning) ತಯಾರಿಸಿ ಆಯ್ಕೆಯಾಗಿರುವ ಜಲಾನಯನ ವ್ಯಾಪ್ತಿಗೆ ಒಳಪಡುವ ಎಲ್ಲಾ ರೈತ ಫಲಾನುಭವಿಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ.

ಕರ್ನಾಟಕ ವ್ಯವಸಾಯ ಪತ್ರಿಕೆಗೆ ಸುಜಲ–III ಯೋಜನೆಯ

ಜಲಾನಯನ ಅಭಿವೃದ್ಧಿ ಇಲಾಖೆಯ ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ–II (ಸುಜಲ– III) 2013–14ನೇ ಸಾಲಿನಿಂದ ರಾಜ್ಯದಲ್ಲಿ ಚಾಮರಾಜನಗರ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ಗದಗ, ಬೀದರ್, ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳ 2531 ಕಿರುಜಲಾನಯನಗಳಲ್ಲಿ ಡಿಸೆಂಬರ್ 2019 ರವರೆಗೆ ಅನುಷ್ಠಾನಗೊಳಿಸಲಾಗುತ್ತಿದೆ. ತೋಟಗಾರಿಕೆ ಘಟಕದ ಕಾರ್ಯಕ್ರಮಗಳನ್ನು ತೋಟಗಾರಿಕೆ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆ ಅನುಷ್ಠಾನಕ್ಕಾಗಿ ವಿವಿಧ 15 ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.

ಯೋಜನೆಯ ಧ್ಯೇಯೊದ್ದೇಶ:

ಮಣ್ಣು ಸಮೀಕ್ಷೆ ಮತ್ತು ನೀರಿನ ಸಂಪನ್ಮೂಲ ಮಾಹಿತಿ ಸಂಗ್ರಹಿಸಿ ನವೀನ ಹಾಗೂ ವೈಜ್ಞಾನಿಕ ಆಧಾರಿತ ಯೋಜನೆ ತಯಾರಿಸಲಾಗುವುದು, ಸಾಂಸ್ಥಿಕ ಬಲವರ್ಧನೆ ಮತ್ತು ಪಾಲುದಾರರ ಸಮರ್ಥ ಅಭಿವೃದ್ಧಿ ಹಾಗೂ ಮಳೆಯಾಶ್ರಿತ ಪ್ರದೇಶಗಳ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಜಲಾನಯನ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವುದನ್ನು ನಿರೂಪಿಸುವುದಾಗಿರುತ್ತದೆ.

ಜಲಾನಯನ ಅಭಿವೃದ್ಧಿಗೆ ಸಂಬಂಧಿಸಿದಂತೆ ಸುಜಲ– III ಯೋಜನೆಯನ್ನು ವೈಜ್ಞಾನಿಕ ತಾಂತ್ರಿಕತೆಗಳನ್ನು ಬಳಸಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನಾ ಕ್ಷೇತ್ರಗಳಲ್ಲಿ ಭೂ ಮತ್ತು ಜಲ ಸಂಪನ್ಮೂಲ, ಸಾಮಾಜಿಕ–ಆರ್ಥಿಕ, ಮಳೆಯ ಪ್ರಮಾಣ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ದತ್ತಾಂಶ/ಮಾಹಿತಿಯನ್ನು ವಿವಿಧ ವೈಜ್ಞಾನಿಕ ವಿಧಾನಗಳ ಮೂಲಕ ಸಂಗ್ರಹಿಸಿ ಕಿರು ಜಲಾನಯನಗಳ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ನಿಖರವಾಗಿ ತಯಾರಿಸಲು ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬಳಸುವುದು ಯೋಜನೆಯ ಚಟುವಟಿಕೆಗಳ ಮುಖ್ಯ ಗುರಿಯಾಗಿರುತ್ತದೆ.

ಆದಕಾರಣ, ಯೋಜನಾ ಪ್ರದೇಶದಲ್ಲಿ ಎನ್.ಬಿ.ಎಸ್.ಎಲ್ & ಎಲ್.ಯು.ಪಿ ಸಂಸ್ಥೆಯ ಮುಂದಾಳತ್ವದಲ್ಲಿ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಮೂಲಕ ಭೂ ಸಂಪನ್ಮೂಲ ಸಮೀಕ್ಷೆ (Land Resource Inventory-LRI) ಕೈಗೊಂಡಿದ್ದು ಭೂ–ಕೇಂದ್ರಿತ ಡಿಜಿಟಲ್ ಕೆಡಸ್ಟ್ರಾಲ್ ಮಾಹಿತಿಯೊಂದಿಗೆ ದೂರ ಸಂವೇದಿ ಕಾರ್ಟೋಸ್ಯಾಟ್ / ಕ್ವಿಕ್ ಬರ್ಡ್ ಇಮೇಜರಿಗಳನ್ನು ಬಳಸಿ, ಪ್ರತಿ ಹಿಡುವಳಿಯಲ್ಲಿನ ಭೂಮಿಯ ಇಳಿಜಾರು, ಸವಕಳಿ, ಬಸಿಯುವಿಕೆ, ಉಪ್ಪಿನ ಅಂಶ, ಕಲ್ಲುಬಂಡೆ ಪ್ರಮಾಣ ಇತ್ಯಾದಿ ಹಾಗೂ ಮಣ್ಣಿನ ಗುಣ ಧರ್ಮಗಳಾದ ಮಣ್ಣಿನ ರಚನೆ, ಆಳ, ಕಣ ಗಾತ್ರ, ಬಣ್ಣ, ಕಣ ಜೋಡಣೆ, ನೀರು ಇಂಗುವಿಕೆ, ಮಣ್ಣಿನ ರಸಸಾರ, ಫಲವತ್ತತೆ, ಪೋಷಕಾಂಶ ಮುಂತಾದವುಗಳ ವಿಶ್ಲೇಷಣೆ ಕೈಗೊಂಡು ಸಮಾನ ಗುಣಧರ್ಮಗಳಿರುವ ಮಣ್ಣುಗಳನ್ನು ಗುರುತಿಸಿ, ಹಿಡುವಳಿಗಳ ಭೂ ಸಂಪನ್ಮೂಲ ನಕ್ಷೆಗಳನ್ನು ತಯಾರಿಸಲಾಗುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆ (ಐ.ಐ.ಎಸ್.ಸಿ)ಮುಂದಾಳತ್ವದಲ್ಲಿ ಅಂತರ್ಜಲ ಮಟ್ಟ, ಮಣ್ಣಿನ ತೇವಾಂಶ, ಬಾವಿಗಳ ನೀರಿನ ಪ್ರಮಾಣ, ನೀರಿನ ಮಾದರಿಗಳ ವಿಶ್ಲೇಷಣೆ ಇತ್ಯಾದಿ ಹೈಡ್ರೋಲಾಜಿಕಲ್ ಅಧ್ಯಯನವನ್ನು ಕೈಗೊಂಡು ಹೈಡ್ರೋಲಾಜಿಕಲ್ ನಕ್ಷೆಗಳನ್ನು ತಯಾರಿಸಲಾಗುತ್ತಿದೆ.

ಅಲ್ಲದೆ, KVAFSU ಸಂಸ್ಥೆಯ ಮುಖೇನ ಸಣ್ಣ ಜಾನುವಾರುಗಳ ವೀರ್ಯಾಣು ಬ್ಯಾಂಕ್ ಸ್ಥಾಪಿಸಲಾಗಿದ್ದು, ರೈತರು ಮತ್ತು ಭೂರಹಿತರಿಗೆ ಉಪಯುಕ್ತವಾಗುವ ವಿವಿಧ ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಕುರಿತ ಕಾರ್ಯಕ್ರಮ ಹಾಗೂ ನವೀನ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

ಭೂ ಸಂಪನ್ಮೂಲ ಮಾಹಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಪ್ರತಿ ಸರ್ವೆ ನಂಬರ್‌ವಾರು ಜಮೀನುಗಳಿಗೆ ವೈಜ್ಞಾನಿಕ ಸಲಹೆಗಳನ್ನು / ಮಾಹಿತಿಯನ್ನು ರೈತರಿಗೆ ಒದಗಿಸುವುದರಿಂದ ತಮ್ಮ ಜಮೀನಿನಲ್ಲಿ ಸೂಕ್ತ ಮಣ್ಣು, ನೀರು ನಿರ್ವಹಣೆ ಮಾಡುವ ಕುರಿತು ಸೂಕ್ತ ಬೆಳೆ ಆಯ್ಕೆ ಮಾಡಿ ಬೆಳೆಸುವ ಕುರಿತು ರೈತರಿಗೆ ಪರಿಣಾಮಕಾರಿಯಾದ ಮತ್ತು ಸಮಯೋಚಿತವಾದ ನಿರ್ಧಾರಗಳನ್ನು ಕೈಗೊಳ್ಳಲು ಸಹಾಯವಾಗುತ್ತದೆ.

ಈ ನಿಟ್ಟಿನಲ್ಲಿ, ಭೂ ಸಂಪನ್ಮೂಲ ಮಾಹಿತಿಯು ರೈತರಿಗೆ, ಕೃಷಿ ಹಾಗೂ ಸಂಬಂಧಿತ ಎಲ್ಲಾ ಅಭಿವೃದ್ಧಿ ಇಲಾಖೆಗಳಿಗೂ ಸಹ ತಮ್ಮ ಇಲಾಖಾ ಯೋಜನೆಗಳನ್ನು ಉತ್ತಮವಾಗಿ ಯೋಜಿಸಲು ಮತ್ತು ಅನುಷ್ಠಾನಗೊಳಿಸಲು ಅಗತ್ಯ ಮಾಹಿತಿ ಲಭ್ಯವಾಗುವಂತೆ ಮತ್ತು ರೈತರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುವಾಗುವಂತೆ ವ್ಯವಸ್ಥೆ ಕಲ್ಪಿಸಲು ಯೋಜಿಸಿ, ಯೋಜನೆಯಡಿ ಸಂಗ್ರಹಿಸಿದ ವೈಜ್ಞಾನಿಕ ದತ್ತಾಂಶ / ಮಾಹಿತಿಗಳ ಡಿಜಿಟಲ್ ಗ್ರಂಥಾಲಯ (Digital Library) ನಿರ್ಣಯ ಬೆಂಬಲ ವ್ಯವಸ್ಥೆ (Decision Support System) ಮತ್ತು ಭೂ ಸಂಪನ್ಮೂಲ ಪೋರ್ಟಲ್ (LRI Portal) ಗಳನ್ನು ಮತ್ತು ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗುತ್ತಿದ್ದು, ಇದರಿಂದ ನೇರವಾಗಿ ರೈತರು ಮತ್ತು ಸಂಬಂಧಿತ ಅಭಿವೃದ್ಧಿ ಇಲಾಖೆಗಳು ಭೂ ಹಿಡುವಳಿಗಳ ಕುರಿತು ಅಗತ್ಯವಿರುವ ಮಾಹಿತಿ ಪಡೆಯಬಹುದಾಗಿರುತ್ತದೆ.

ಆದ್ದರಿಂದ, ಭೂ ಸಂಪನ್ಮೂಲ ಮಾಹಿತಿ ಸಮೀಕ್ಷೆ ಹಾಗೂ ಯೋಜನೆಯಡಿ ಹೊರತರುತ್ತಿರುವ ತಾಂತ್ರಿಕತೆಗಳು, ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ ಮತ್ತು ಭೂ ಸಂಪನ್ಮೂಲ ಪೋರ್ಟಲ್ ಉಪಯುಕ್ತತೆ ಹಾಗೂ ಬಳಕೆ ಕುರಿತು ರೈತರಿಗೆ, ವಿವಿಧ

ಅಭಿವೃದ್ಧಿ ಇಲಾಖೆಗಳಿಗೆ, ಕೃಷಿ ಸಂಬಂಧಿತ ಸಂಸ್ಥೆಗಳಿಗೆ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸಲಾಗಿದ್ದು, ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ರೈತರಿಗಾಗಿ ಗ್ರಾಮ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಪ್ರತಿ ಹಿಡುವಳಿವಾರು ಭೂ ಸಂಪನ್ಮೂಲ (ಎಲ್.ಆರ್.ಐ) ಕಾರ್ಡ್‌ಗಳನ್ನು ಮುದ್ರಿಸಿ ರೈತರಿಗೆ ವಿತರಿಸಲಾಗುತ್ತಿದೆ. ಎಲ್.ಆರ್.ಐ ಕಾರ್ಡ್ ಮೂಲಕ ರೈತರು ತಮ್ಮ ಜಮೀನಿನ ಫಲವತ್ತತೆ ಮಟ್ಟ, ಬಳಸಬೇಕಾದ ಪೋಷಕಾಂಶಗಳು, ಸೂಕ್ತ ಬೆಳೆಗಳು, ಸೂಕ್ತ ಭೂ ಮತ್ತು ಜಲ ಸಂರಕ್ಷಣೆ ಕ್ರಮಗಳು, ಇತ್ಯಾದಿ ಮಾಹಿತಿ ಪಡೆಯಬಹುದಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆ.ಎಸ್.ಎನ್.ಡಿ.ಎಂ.ಸಿ) ಸಹಯೋಗದೊಂದಿಗೆ, ದೈನಂದಿನ ಹವಾಮಾಣ ವಿವರಗಳನ್ನು ರೈತರಿಗೆ ನೇರವಾಗಿ ತಲುಪಿಸುವ ಉದ್ದೇಶ ಹೊಂದಲಾಗಿರುತ್ತದೆ. ಇದಕ್ಕಾಗಿ ಯೋಜನಾ ಪ್ರದೇಶ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಮತ್ತು ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಎಲ್‌ಇಡಿ ಟಿವಿಗಳನ್ನು ಅಳವಡಿಸಲಾಗುತ್ತಿದ್ದು, ಈ ಮೂಲಕ ದೈನಂದಿನ ಹವಾಮಾನ ಮತ್ತಿತರೆ ರೈತರಿಗೆ ಅಗತ್ಯವಿರುವ ಮಾಹಿತಿ ಬಿತ್ತರಿಸುವ ಉದ್ದೇಶ ಹೊಂದಲಾಗಿರುತ್ತದೆ.

ಸ್ವ-ಸಹಾಯ ಸಂಘಗಳ ಸದಸ್ಯರುಗಳಿಗೆ NACER ಸಂಸ್ಥೆಯ ಮೂಲಕ ಆದಾಯೋತ್ಪನ್ನ ಚಟುವಟಿಕೆಗಳ ಕುರಿತು ಕೌಶಲ್ಯ ತರಬೇತಿ ನೀಡಿ ಬ್ಯಾಂಕ್ ಲಿಂಕೇಜ್ ಮತ್ತು ಇತರೆ ನೆರವು ಒದಗಿಸಲು ಕ್ರಮವಹಿಸಲಾಗುತ್ತಿದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ – ಸಮಗ್ರ ಕೃಷಿ ಅಭಿವೃದ್ಧಿ

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಿತ್ತನೆಯ ಹಂತದಿಂದ ಹಿಡಿದು ಬಳಕೆಯ ಹಂತದವರೆಗೂ ಸಂಪೂರ್ಣ ಮೌಲ್ಯ ಸರಪಳಿಯನ್ನು ನಿರ್ವಹಿಸಲಾಗುವುದು. ಸರ್ಕಾರದ ಮಧ್ಯಸ್ಥಿಕೆಯಲ್ಲಿ ಖಾಸಗಿ ಸಂಸ್ಥೆಗಳು ನೀಡುವ ತಾಂತ್ರಿಕತೆಗಳನ್ನು ರೈತರು ಅಳವಡಿಸಿ ಕೊಳ್ಳುವುದರ ಮೂಲಕ ಕೃಷಿಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವುದು ಹಾಗೂ ಕೊಯ್ಲಿನೋತ್ತರ ನಷ್ಟವನ್ನು ಕಡಿಮೆಗೊಳಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯಿಂದ ರೈತರು ತಮ್ಮ ಬೆಳೆಗೆ ಪೂರ್ವ ನಿಗದಿತ ಬೆಲೆಯನ್ನು ಹಾಗೂ ಖಚಿತವಾದ ಮಾರುಕಟ್ಟೆಯನ್ನು ಈ ಯೋಜನೆಯಡಿ ಪಡೆಯಬಹುದಾಗಿದೆ. ಖಾಸಗಿ ಸಂಸ್ಥೆಗಳು ಸರ್ಕಾರದಿಂದ ವಿವಿಧ ಯೋಜನೆಗಳಡಿ ರಿಯಾಯಿತಿಯಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಪಡೆದುಕೊಂಡು ತಮಗೆ ಬೇಕಾದ ನಿಖರವಾದ ಗುಣಮಟ್ಟದ ಹಾಗೂ ಪ್ರಮಾಣದ ಕೃಷಿ ಉತ್ಪನ್ನಗಳನ್ನು ಸಕಾಲದಲ್ಲಿ ರೈತರಿಂದ ಪಡೆದುಕೊಳ್ಳಬಹುದು.

ಸದರಿ ಯೋಜನೆಯಡಿ 2018-19 ನೇ ಸಾಲಿನಲ್ಲಿ 8 ಖಾಸಗಿ ಸಂಸ್ಥೆಗಳು 12 ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯ ಅವಧಿ 3 ರಿಂದ 5 ವರ್ಷಗಳಾಗಿದ್ದು, 75000 ರೈತರನ್ನು ನೊಂದಾಯಿಸುವ ಗುರಿ ಹೊಂದಿದ್ದು, ಇಲ್ಲಿಯವರೆಗೆ 32550 ರೈತರನ್ನು ನೊಂದಾಯಿಸಲಾಗಿರುತ್ತದೆ. ಯೋಜನಾ ಪ್ರದೇಶದ ರೈತರಿಗೆ ಬಿತ್ತನೆಯ ಹಂತದಿಂದ ಹಿಡಿದು ಬಳಕೆಯ ಹಂತದವರೆಗೂ ಸಂಪೂರ್ಣ ಮೌಲ್ಯ ಸರಪಳಿಯ ಕುರಿತು ಸಾಮರ್ಥ್ಯ ಬಲವರ್ಧನೆ ಮತ್ತು ಅರಿವು ಮೂಡಿಸಲು 3000 ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗಿದ್ದು, 667 ಹೆಕ್ಟೇರ್ ರೈತರ ತಾಕುಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗಿದೆ ರೂ.209.64 ಲಕ್ಷಗಳಿಗೆ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ. 40000 MT ರೈತರ ಉತ್ಪನ್ನಗಳಾದ ದ್ವಿದಳ ಸಿರಿಧಾನ್ಯಗಳನ್ನು ಖಾಸಗಿ ಸಂಸ್ಥೆಯವರು ರೈತರಿಂದ ನೇರವಾಗಿ ಖರೀದಿಸುತ್ತಾರೆ.

ರೈತ ಉತ್ಪಾದಕರ ಸಂಸ್ಥೆ

ರೈತರನ್ನು ಅದರಲ್ಲಿಯೂ ಮುಖ್ಯವಾಗಿ ಸಣ್ಣ ರೈತರನ್ನು ಬೇರೆ ಬೇರೆ ಗುಂಪಾಗಿಸುವುದು, ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ವರ್ಗಾಯಿಸುವುದು, ಉತ್ಪಾದಕತೆಯನ್ನು ಸುಧಾರಿಸುವುದು, ರೈತರಿಗೆ ಅವಶ್ಯಕತೆವಿರುವ ಸಾಮಾಗ್ರಿಗಳು ಹಾಗೂ ಸೇವೆಗಳಿಗೆ ಸೌಲಭ್ಯ ಕಲ್ಪಿಸುವುದು ಹಾಗೂ ರೈತರ ಆದಾಯವನ್ನು ಹೆಚ್ಚಿಸುವುದು ತನ್ಮೂಲಕ ಕೃಷಿ ಆಧಾರಿತ ಸುಸ್ಥಿರ ಜೀವನೋಪಾಯ ಕ್ರಮಗಳನ್ನು ಬಲಪಡಿಸುವುದು. ರಾಜ್ಯ ಸರ್ಕಾರವು ಮುಂದಿನ 5 ವರ್ಷಗಳ ಅವಧಿಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಪ್ರತಿ ಹೋಬಳಿ ಮಟ್ಟದಲ್ಲಿ ಕನಿಷ್ಠ ಒಂದು ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸುಮಾರು 5 ಲಕ್ಷ ರೈತರನ್ನು ಸಂಘಟಿಸುವ ಗುರಿಯನ್ನು ಹೊಂದಿದೆ.

ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾಯಿಸುವ ಮೂಲಕ ರೈತರನ್ನು ಸಂಘಟಿಸಿ ಅವರ ಸಾಮರ್ಥ್ಯವನ್ನು ಬಲವರ್ಧನೆಗೊಳಿಸುವ ಮೂಲಕ ಸಾಮೂಹಿಕವಾಗಿ ಅವರ ಉತ್ಪಾದನಾ ಮಾರುಕಟ್ಟೆ ಬಲಗಳನ್ನು ಅಭಿವೃದ್ಧಿ ಪಡಿಸುವುದಾಗಿದೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರವು ರೈತ ಉತ್ಪಾದಕರ ಸಂಸ್ಥೆಯ ರಚನೆಗೆ ಮತ್ತು ಬಲವರ್ಧನೆಗೆ ಕರ್ನಾಟಕ ರೈತ ಉತ್ಪಾದಕರ ಸಂಸ್ಥೆ ನೀತಿ 2018 ನ್ನು ಜಾರಿಗೆ ತರಲಾಗಿರುತ್ತದೆ. 2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಸಂಪನ್ಮೂಲ ಸಂಸ್ಥೆಗಳ ಎಂಪ್ಯಾನಲ್ ಮಾಡಲು ಟೆಂಡರ್ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ.

ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸ್ವ ಸಹಾಯ ಗುಂಪುಗಳು

ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ – ಜಲಾನಯನ ಅಭಿವೃದ್ಧಿ ಘಟಕ ಕಾರ್ಯಕ್ರಮದ ಯಶಸ್ಸಿಗೆ ಸಮುದಾಯದ ಸಹಭಾಗಿತ್ವವು ಅತೀ ಮುಖ್ಯ ಪಾತ್ರ ವಹಿಸುತ್ತದೆ. ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಆದಾಯ ಉತ್ಪನ್ನ ಚಟುವಟಿಕೆಗಳ ಅನುಷ್ಠಾನದ ಮೂಲಕ ಸಮಾಜದ ದುರ್ಬಲ ವರ್ಗದ ಭೂರಹಿತ ಮಹಿಳಾ ಸ್ವಸಹಾಯ ಗುಂಪುಗಳನ್ನು ರಚಿಸಿ, ಸ್ವಸಹಾಯ ಸಂಘದ ಸದಸ್ಯರುಗಳ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಲು ತಮ್ಮಲ್ಲಿರುವ ಕೌಶಲ್ಯವನ್ನು ವೃದ್ಧಿಸಿಕೊಂಡು, ಭೂರಹಿತರು ಆದಾಯ ಉತ್ಪನ್ನ ಕಾರ್ಯಕ್ರಮಗಳ ಮೂಲಕ ಹೆಚ್ಚಿನ ಆದಾಯ ಗಳಿಸುವಂತೆ ಮಾಡುವುದು ಕಾರ್ಯಕ್ರಮದ ಒಂದು ಮುಖ್ಯ ಉದ್ದೇಶವಾಗಿದೆ. ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳಿಗೆ ಜೀವನ ನಿರ್ವಹಣೆಗೆ ಸಹಾಯವಾಗುವಂತಹ ವಿವಿಧ ಚಟುವಟಿಕೆಗಳ ಬಗ್ಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದರ

ಮೂಲಕ ಸ್ವಾವಲಂಬನೆ ಸಾಧಿಸಲು ಮಾರ್ಗದರ್ಶನ ನೀಡಲಾಗುತ್ತದೆ. ಸ್ವಸಹಾಯ ಗುಂಪುಗಳಿಗೆ ರೂ.25000.00 ಸುತ್ತು ನಿಧಿಯನ್ನು ನೀಡಲಾಗುತ್ತದೆ. ಸ್ವಸಹಾಯ ಗುಂಪಿನ ಸದಸ್ಯರುಗಳು ಈ ಸುತ್ತು ನಿಧಿಯನ್ನು ಬಳಸಿಕೊಂಡು ಬ್ಯಾಂಕ್‌ಗಳ ಸಹಕಾರದಿಂದ ಹೈನುಗಾರಿಕೆ, ಹೊಲಿಗೆ, ಕುರಿ ಸಾಕಣೆ, ಅಡಿಕೆ ತಟ್ಟೆ ತಯಾರಿಕೆ, ಕಸೂತಿ ಬಟ್ಟೆ ಹಾಗೂ ಇತರೆ ಹಲವಾರು ಆದಾಯ ಉತ್ಪನ್ನ ಚಟುವಟಿಕೆಗಳನ್ನು ಕೈಗೊಂಡಿರುತ್ತಾರೆ.

ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ: ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ (NMSA-RAD)

1. ಯೋಜನೆಯ ಬಗ್ಗೆ ಸಂಕ್ಷಿಪ್ತ ವಿವರಣೆ :

ಕೇಂದ್ರ ಸರ್ಕಾರವು 2014–15ನೇ ಸಾಲಿನ ಆರ್ಥಿಕ ವರ್ಷದಿಂದ "ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ" (NMSA) ಕಾರ್ಯಕ್ರಮವನ್ನು ವಿಶೇಷವಾಗಿ ಮಳೆಯಾಶ್ರಿತ ಪ್ರದೇಶದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಜಾರಿಗೆ ತಂದಿದೆ. ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಅಡಿಯಲ್ಲಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮವನ್ನು (NMSA-RAD) ರೂಪಿಸಲಾಗಿದ್ದು, ಕಾರ್ಯಕ್ರಮದಡಿ ರೈತರಿಗೆ ಸಮಗ್ರ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಪ್ರೋತ್ಸಾಹಿಸುವುದು, ಅದರಲ್ಲೂ ಬಹು ಬೆಳೆ ಪದ್ಧತಿ, ಮಿಶ್ರ ಬೆಳೆ, ಅಂತರ ಬೆಳೆ, ಬೆಳೆ ಪರಿವರ್ತನೆ, ತೋಟಗಾರಿಕೆ, ಕೃಷಿ ಅರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ಜೇನು ಸಾಕಣೆ ಘಟಕಗಳನ್ನೊಳಗೊಂಡ ಸಮಗ್ರ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಪ್ರೋತ್ಸಾಹಿಸಿ ಆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವುದಲ್ಲದೆ, ಬರ, ನೆರ ಅಥವಾ ಇತರೆ ಸಂಕಷ್ಟ ಪರಿಸ್ಥಿತಿಗಳನ್ನು ಎದುರಿಸಲು ಸಹಕಾರಿಯಾಗುತ್ತದೆ.

ಈ ಯೋಜನೆಯನ್ನು ರಾಜ್ಯದಲ್ಲಿ 2014–15ನೇ ಸಾಲಿನಿಂದ ಜಲಾನಯನ ಅಭಿವೃದ್ಧಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸ ಲಾಗುತ್ತಿದ್ದು, ಕೇಂದ್ರ ಹಾಗೂ ರಾಜ್ಯದ ಅನುದಾನ 60:40 ಅನುಪಾತದಲ್ಲಿರುತ್ತದೆ.

2. ಯೋಜನೆಯ ಉದ್ದೇಶ ಹಾಗೂ ಅನುಷ್ಠಾನಗೊಳಿಸುವ ಘಟಕದ ವಿವರಗಳು :

ಈ ಯೋಜನೆಯ ಮೂಲಕ ಆಹಾರ ಮತ್ತು ಜೀವನೋಪಾಯ ಭದ್ರತೆ ಹೆಚ್ಚಿಸುವ, ಕೃಷಿ ಆದಾಯ ಹೆಚ್ಚಿಸುವ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ರೈತರು ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು, ರೈತ ಮಹಿಳೆಯರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.

ಮಳೆಯಾಶ್ರಿತ ಕೃಷಿ ಅಭಿವೃದ್ಧಿ ಪಡಿಸಲು ಸಮಗ್ರ ಕೃಷಿ ಪದ್ಧತಿ ಅಳವಡಿಸುವುದು, ರೈತರ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು ಹವಾಮಾನ ಮತ್ತು ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ, ಕೃಷಿ, ತೋಟಗಾರಿಕೆ, ಆಗ್ರೋ ಫಾರೆಸ್ಟ್ರಿ, ಜಾನುವಾರು ಸಾಕಾಣಿಕೆ, ಮೀನುಗಾರಿಕೆ, ಜೇನು ಹುಳು ಸಾಕಾಣಿಕೆ ಚಟುವಟಿಕೆಗಳನ್ನು ಅಳವಡಿಸುವುದು ಯೋಜನೆಯ ಕಾರ್ಯಕ್ರಮವಾಗಿರುತ್ತದೆ.

ಯೋಜನೆಯಡಿ ಅನುಷ್ಠಾನಗೊಳಿಸಲಾಗುವ ಘಟಕಗಳು ಹಾಗೂ ಸಹಾಯಧನ ಪ್ರಮಾಣದ ವಿವರಗಳು :

ಕ್ರ.ಸಂ	ಘಟಕಗಳು	ಸಹಾಯಧನ (ರೂ.ಗಳಲ್ಲಿ ಪ್ರತಿ.ಹೆ)
	1. ಸಮಗ್ರ ಕೃಷಿ ಪದ್ಧತಿಗಳು	
1	ತೋಟಗಾರಿಕಾ ಸಂಬಂಧಿತ ಬೇಸಾಯ ಪದ್ಧತಿಗಳು	25000
2	ಪಶುಸಂಗೋಪನೆ ಆಧಾರಿತ ಬೇಸಾಯ ಪದ್ಧತಿಗಳು (ಹಸು/ಎಮ್ಮೆ+ಬೆಳೆ ಪದ್ಧತಿ)	40000
3	ಅರಣ್ಯ ಹುಲ್ಲುಗಾವಲು ಪದ್ಧತಿ / ಸಾಂಪ್ರದಾಯಕವಲ್ಲದ ಅರಣ್ಯ ಉತ್ಪನ್ನಗಳು	15000
4	ಮರ / ಅರಣ್ಯ ಸಂಬಂಧಿತ ಬೇಸಾಯ ಪದ್ಧತಿ (ಬೆಳೆ ಪದ್ಧತಿ: ಏಕದಳ, ದ್ವಿದಳ, ಎಣ್ಣೆಕಾಳು, ನಾರು ಬೆಳೆ ಮತ್ತು ಬೇಲಿಸಾಲು ಬೆಳೆ – ನುಗ್ಗೆ, ಪರಂಗಿ ಮುಂತಾದವು	15000
	2. ಮೌಲ್ಯವರ್ಧನೆ ಮತ್ತು ಸಂಪನ್ಮೂಲ ಸಂರಕ್ಷಣೆ	
1	ಜೇನು ಸಾಕಾಣಿಕೆ ಘಟಕ (ಪ್ರತಿ ಘಟಕಕ್ಕೆ)	800
2	ರಸಮೇವು ಸಂಸ್ಕರಣಾ ಘಟಕ (ಪ್ರತಿ ಘಟಕಕ್ಕೆ)	125000
3	ಸಮುದಾಯ ಕೆರೆ	2000000
4	ನೀರು ಹಾಯಿಸುವ ಘಟಕಗಳು	10000
5	ನೀರು ಎತ್ತುವ ಘಟಕಗಳು	15000
6	ಸ್ಥಳೀಯ ತೇವಾಂಶ ಸಂರಕ್ಷಣಾ ಕ್ರಮಗಳು	4000
7	ಎರೆಹುಳು ಗೊಬ್ಬರ ಘಟಕ (ಪ್ರತಿ ಘಟಕಕ್ಕೆ)	8000
8	ಸಮಗ್ರ ಕೃಷಿ ಪದ್ಧತಿ ಮತ್ತು ಸಂಪನ್ಮೂಲ ಸಂರಕ್ಷಣೆ ತರಬೇತಿ (ಪ್ರತಿ ತರಬೇತಿಗೆ)	10000

✍ ಜಗದೀಶ ವಿರಕ್ತಮಠ

ಕೃಷಿಗೆ ನೀರುಣಿಸಲು ರೈನ್ ಪೈಪ್ ಮಾದರಿ

ಬೆಳಗಾವಿ ತಾಲೂಕಿನ ಕಡೋಲಿ, ದೇವಗಿರಿ, ಅಗಸಗಿ, ಮೊದಲಾದ ಗ್ರಾಮಗಳಲ್ಲಿ ತರಕಾರಿ ಬೆಳೆಯೋರು ಹೆಚ್ಚು. ಆಲೂಗಡ್ಡೆ, ಎಲೆಕೋಸು, ಹೂ ಕೋಸು, ಕೊತ್ತಂಬರಿ, ಪಾಲಾಕ್, ಟೊಮೆಟೊ, ಕಡಲೆ ಇತ್ಯಾದಿ ತರಕಾರಿಗಳನ್ನು ಬೆಳೆಯುತ್ತಾರೆ. ಇಲ್ಲಿ ಆರಂಭದಲ್ಲಿ ಸಾಂಪ್ರದಾಯಿಕ ರೂಪದಲ್ಲಿ ನೀರುಣಿಸುತ್ತಿದ್ದರು. ಇದರಿಂದ ನೀರು ಪೋಲಾಗುತ್ತಿತ್ತು. ಹೆಚ್ಚು ಶ್ರಮವನ್ನೂ ಬೇಡುತ್ತಿತ್ತು.

ರೈನ್‌ಪೈಪ್ ಮಾದರಿ:

ಇದೀಗ ಇಲ್ಲಿನ ತರಕಾರಿ ಬೆಳೆಯುವ ರೈತರು ರೈನ್‌ಪೈಪ್ ಎಂಬ ಹೊಸ ತಂತ್ರಜ್ಞಾನದ ಮೂಲಕ ನೀರುಣಿಸುತ್ತಿದ್ದಾರೆ. ಪೈಪ್ ಮೂಲಕ ಮಳೆ ಅಥವಾ ಕಾರಂಜಿ ಸ್ವರೂಪದಲ್ಲಿ ನೀರನ್ನು ಬೆಳೆಗಳಿಗೆ ನೀಡಲಾಗುತ್ತದೆ. ಇಡೀ ಜಮೀನಿಗೆ ನೈಜ ಮಳೆಯ ಅನುಭವವನ್ನು ಇದು ನೀಡುತ್ತದೆ. ಇದಕ್ಕೆಂದೇ ಸಿದ್ದಪಡಿಸಲಾದ ಪೈಪ್‌ಗೆ ಲೇಸರ್ ತಂತ್ರಜ್ಞಾನದ ಮೂಲಕ ಅನೇಕ ಸಣ್ಣ ಸಣ್ಣ ರಂಧ್ರಗಳನ್ನು ಮಾಡಲಾಗಿದೆ. ಒಂದೇ ಸಮಯದಲ್ಲಿ ಒಂದು ಪೈಪಿನ ಮೂಲಕ ನೂರು ಅಡಿ ಉದ್ದ ಹಾಗೂ 30 ಅಡಿ ಅಗಲ ಕೃಷಿ ಭೂಮಿಗೆ ನೀರುಣಿಸಬಹುದಾಗಿದೆ. ಈ ವಿಧಾನ ಅಳವಡಿಸಲು ಪಿವಿಸಿ ಪೈಪ್, ರೈನ್ ವಾಟರ್ ಪೈಪ್ ಹಾಗೂ ಟ್ಯಾಪ್ಸ್ ಇದ್ದರೆ ಸಾಕು. ನೂರು ಅಡಿ ಪೈಪ್‌ಗೆ ರೂ. 1500.00 ವೆಚ್ಚವಾಗುತ್ತದೆ. ಒಂದು ಎಕರೆ ಜಮೀನಿಗೆ ರೂ. 20 ಸಾವಿರ ಬೇಕು. ಸುಲಭವಾಗಿ ಅಳವಡಿಸಿಕೊಳ್ಳಬಹುದು. ಒಂದಕ್ಕಿಂತ ಹೆಚ್ಚಿನ ಬೆಳೆಗಳಿಗೂ ಬಳಕೆ ಮಾಡಬಹುದು.

ಕಡಿಮೆ ನೀರು, ಕಡಿಮೆ ಸಮಯದಲ್ಲಿ ಹೆಚ್ಚು ಜಾಗಕ್ಕೆ ನೀರಾವರಿ.

ಕೃಪೆ: ಕನ್ನಡಪ್ರಭ

"ಎಲೆಕೋಸ್ ಬೆಳೆಗೆ ರೈನ್ ಪೈಪ್ ಮಾದರಿ ಪ್ರಥಮ ಬಾರಿಗೆ ಅಳವಡಿಸಿರುವೆ. ಸಾಂಪ್ರದಾಯಿಕವಾಗಿ ನೀರುಣಿಸಿದ ಬೆಳೆಗಳಿಗಿಂತ ರೈನ್ ಪೈಪ್ ಅಳವಡಿಸಿದ ಬೆಳೆ ಅತ್ಯಂತ ಉತ್ತಮವಾಗಿ ಬೆಳೆದಿದೆ. ನೀರು ಪೋಲಾಗುವುದು ತಪ್ಪಿದೆ. ಒಂದೂವರೆ ಗಂಟೆಯಲ್ಲಿ ಶ್ರಮವಿಲ್ಲದೆ, ಒಂದು ಎಕರೆ ಭೂಮಿಗೆ ನೀರುಣಿಸುತ್ತೇನೆ. ನಾನು ಅಳವಡಿಸಿಕೊಂಡಿರುವ ಪದ್ಧತಿಯನ್ನು ನೋಡಿದ ಅನೇಕ ರೈತರು ರೈನ್ ಪೈಪ್ ಪದ್ಧತಿಯನ್ನು ಅಳವಡಿಸಿಕೊಳ್ಳಲು ಮುಂದಾಗುತ್ತಿದ್ದಾರೆ"

– ರಮೇಶ ಮಾಯಣ್ಣಾಚೆ,
ಕಡೋಲಿ ಗ್ರಾಮದ ರೈತ



✍ ಡಾ.ಎಂ.ಎಸ್.ನಟರಾಜು, ವಿಸ್ತರಣಾ ನಿರ್ದೇಶಕರು ಮತ್ತು ಡಾ.ಹೆಚ್.ಕೆ.ಪಂಕಜ, ಸಹಾಯಕ ಪ್ರಾಧ್ಯಾಪಕರು
ವಿಸ್ತರಣಾ ನಿರ್ದೇಶನಾಲಯ, ಹೆಬ್ಬಾಳ, ಬೆಂಗಳೂರು

ಕೃಷಿ ವಿಸ್ತರಣಾ ನಿರ್ದೇಶನಾಲಯದ ಕಿರುಪರಿಚಯ

ವಿಶ್ವವಿದ್ಯಾನಿಲಯವು 1974ರಲ್ಲಿ ಕೃಷಿ ಉತ್ಪಾದನಾ ತಾಂತ್ರಿಕತೆಗಳನ್ನು ಸಾಕ್ಷರ ರೈತರಲ್ಲಿ ಮನವರಿಕೆ ಮಾಡಿಸಿ ಕ್ಷೇತ್ರ ಮಟ್ಟದಲ್ಲಿ ಅಳವಡಿಸಿಕೊಳ್ಳಲು ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ಪತ್ರವ್ಯವಹಾರದ ಕೋರ್ಸ್‌ನ್ನು ಪ್ರಾರಂಭಿಸಿತ್ತು. ವಿಶ್ವವಿದ್ಯಾನಿಲಯವು ದೂರ ಶಿಕ್ಷಣಕ್ಕೆ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ಅರಿತು 2012ರಲ್ಲಿ ವಿಸ್ತರಣಾ ನಿರ್ದೇಶನಾಲಯದ ಅಡಿಯಲ್ಲಿ ಎಲ್ಲಾ ಅನೌಪಚಾರಿಕ ಶೈಕ್ಷಣಿಕ ಚಟುವಟಿಕೆಗಳನ್ನು ಒಂದೆ ಸೂರಿನಡಿ ಕಾರ್ಯನಿರ್ವಹಿಸುವಂತೆ ದೂರ ಶಿಕ್ಷಣ ಘಟಕವನ್ನು ಪ್ರಾರಂಭಿಸಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 1963ರ ಜೂನ್ 6 ರಂದು ಅಂದಿನ ಮೈಸೂರು ಸರ್ಕಾರದ ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು. 1964ರ ಆಗಸ್ಟ್ 21 ರಂದು ಅಂದಿನ ಉಪ ರಾಷ್ಟ್ರಪತಿಗಳಾಗಿದ್ದ ಡಾ॥ ಝಾಕಿರ್ ಹುಸೇನ್‌ರವರು ಉದ್ಘಾಟಿಸಿದರು. ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣವನ್ನು 1969 ಜುಲೈ 12 ರಂದು ಭಾರತದ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಉದ್ಘಾಟಿಸಿದರು.

ಕೃಷಿ ಕ್ಷೇತ್ರದಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳನ್ನು ನಡೆಸುವುದು ವಿಶ್ವವಿದ್ಯಾನಿಲಯದ ಪ್ರಮುಖ ಕಾರ್ಯಕ್ಷೇತ್ರಗಳಾಗಿರುತ್ತವೆ. ಈ ದಿಸೆಯಲ್ಲಿ ವಿಸ್ತರಣಾ ನಿರ್ದೇಶನಾಲಯವು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 10 ರಾಜ್ಯಗಳಲ್ಲಿ ಕ್ಷೇತ್ರ ವಿಸ್ತರಣಾ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಾಹಿತಿ ಪೂರೈಕೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ರೈತ, ರೈತ ಮಹಿಳೆ ಮತ್ತು ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ಅನುಕೂಲವಾಗುವಂತೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ವಿಶ್ವವಿದ್ಯಾನಿಲಯದ ವಿಸ್ತರಣಾ ಸೇವೆಯು ಮೂರು ಹಂತದ ಉದ್ದೇಶಗಳನ್ನು ಹೊಂದಿರುತ್ತದೆ.

- ವಿಸ್ತರಣಾ ಬಳಕೆಗಾಗಿ ನವೀನ, ವಿಶ್ವಾಸನೀಯ, ಲಾಭಕರ, ಸಾಮಾಜಿಕ ವಾಗಿ ಸ್ವೀಕಾರಾರ್ಹ, ಪರಿಸರಕ್ಕೆ ಸುಸ್ಥಿರವಾದ ಮತ್ತು ಆಯಾ ಹಂಗಾಮುಗಳಿಗೆ ಸೂಕ್ತವಾದಂತಹ ಮಾಹಿತಿಯನ್ನು ನೀಡುವಿಕೆ.
- ರೈತರು ಹೊಸ ಬಗೆಯ ತಾಂತ್ರಿಕತೆಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಹಿಮ್ಮಾಹಿತಿ ಒದಗಿಸುವಿಕೆ, ಅನುಸರಣೆಯಲ್ಲಿನ ಸಮಸ್ಯೆ ಗಳನ್ನು ಪರಿಶೀಲಿಸುವಿಕೆ ಹಾಗೂ ಅವುಗಳಿಗೆ ಪರಿಹಾರವನ್ನು ಕಂಡುಹಿಡಿಯುವಿಕೆ.
- ವಿಸ್ತರಣಾ ಕಾರ್ಯದ ಗುಣಮಟ್ಟ ಮತ್ತು ಪರಿಣಾಮವನ್ನು ಸುಧಾರಿಸುವಂತೆ ಮಾರ್ಗೋಪಾಯವನ್ನು ನಿರೂಪಿಸುವಿಕೆ.

ವಿಸ್ತರಣಾ ನಿರ್ದೇಶನಾಲಯದಡಿ ವಿವಿಧ ಘಟಕಗಳು ರೈತರಿಗೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸುತ್ತಿದ್ದು ಅವುಗಳ ಕಾರ್ಯ ವೈಖರಿ ಈ ಕೆಳಕಂಡಂತಿದೆ.

ರೈತ ತರಬೇತಿ ಸಂಸ್ಥೆ

ಸಂಸ್ಥೆಯು 1967ರಲ್ಲಿ ಪ್ರಾರಂಭವಾಗಿದ್ದು, ಕೃಷಿ ಮತ್ತು ಸಂಬಂಧಿತ ವಿಷಯಗಳ ಕುರಿತಾಗಿ ರೈತ ಸಮುದಾಯಕ್ಕೆ ಬೋಧನಾ ತರಬೇತಿ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡುತ್ತಿದ್ದು, ಹಳ್ಳಿಗಳಲ್ಲಿ ರೈತರು ಹಾಗೂ ರೈತ ಮಹಿಳೆಯರಿಗೆ ಕೃಷಿ ತರಬೇತಿ

ಕಾರ್ಯಕ್ರಮಗಳು, ನೂತನ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ತಾಕುಗಳಿಗೆ ಶಿಕ್ಷಣಾರ್ಥಿಗಳ ಭೇಟಿ ಹಾಗೂ ಕ್ಷೇತ್ರ ಮಟ್ಟದ ತರಬೇತಿ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡುವುದರೊಂದಿಗೆ ತಳಮಟ್ಟದ ವಿಸ್ತರಣಾ ಕಾರ್ಯಕರ್ತರಿಗೆ ಕೌಶಲ್ಯವರ್ಧನೆ ತರಬೇತಿ ಮತ್ತು ನಿರ್ದಿಷ್ಟವಾದ ಕೃಷಿ ವಿಸ್ತರಣೆಯನ್ನು ಗ್ರಾಮೀಣ ಮಟ್ಟದಲ್ಲಿ ಆಯೋಜಿಸುವುದು ಸಂಸ್ಥೆಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ.

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ

ಕೇಂದ್ರವು 1999ರಲ್ಲಿ ರಾಷ್ಟ್ರೀಯ ಕೃಷಿ ತಂತ್ರಜ್ಞಾನ ಯೋಜನೆಯಡಿ ಪ್ರಾರಂಭವಾಗಿದ್ದು, ಏಕ ಗವಾಕ್ಷಿ ಮೂಲಕ ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆಗಳು, ಮಲ್ಟಿಮೀಡಿಯ ಡಿವಿಡಿಗಳು, ಪುಸ್ತಕಗಳು, ಕೃಷಿ ಪರಿಕರಗಳು, ಸುಧಾರಿತ ಬೇಸಾಯ ಕ್ರಮಗಳ ಕೈಪಿಡಿ ಹಾಗೂ ಇತರೆ ಉತ್ಪನ್ನಗಳ ವಿತರಣಾ ವ್ಯವಸ್ಥೆಯನ್ನು ರೈತರಿಗೆ ಕಲ್ಪಿಸಿದ್ದು, ಸಲಹಾ ಸೇವೆಯೊಂದಿಗೆ ಕೃಷಿಕರಿಗೆ ಉತ್ತೇಜನ ಹಾಗೂ ರೈತರ ಸಮಸ್ಯೆಗಳಿಗೆ ಅಂಚೆ ಮೂಲಕ ಸಲಹೆಗಳನ್ನು ನೀಡುವುದು, ಕೃಷಿ ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಪ್ರದರ್ಶನ ಮತ್ತು ಇತರೆ ಸಂಸ್ಥೆಗಳು ಆಯೋಜಿಸುವ ಕೃಷಿ ಮೇಳಗಳಲ್ಲಿ ಪುಸ್ತಕಗಳು, ಸುಧಾರಿತ ಬೇಸಾಯ ಕ್ರಮಗಳ ಕೈಪಿಡಿ ಪ್ರತಿಗಳು ಮತ್ತು ಮಲ್ಟಿಮೀಡಿಯ ಡಿವಿಡಿಗಳ ಮಾರಾಟ ಹಾಗೂ ರೈತರ ದೂರವಾಣಿ ಕರೆಗಳ ಮುಖೇನ ಸಲಹೆ ಸೂಚನೆಗಳನ್ನು ನೀಡುವುದು ಪ್ರಮುಖ ಚಟುವಟಿಕೆಗಳಾಗಿವೆ.

ನೂತನವಾಗಿ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದಲ್ಲಿ ಅಗ್ರಿ–ಟೆಕ್ ಪೋರ್ಟಲ್ ಸೌಲಭ್ಯವನ್ನು ಕಲ್ಪಿಸಲಾಗಿದ್ದು, 250 ಕ್ಕೂ ಹೆಚ್ಚು ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳ ಮಾಹಿತಿ, ಅದಕ್ಕೆ ಸಂಬಂಧಪಟ್ಟ ಛಾಯಾಚಿತ್ರಗಳು ಹಾಗೂ ವೀಡಿಯೋ ತುಣುಕುಗಳನ್ನು ರೈತರ ಮಾಹಿತಿಗಾಗಿ ಒದಗಿಸಲಾಗಿದೆ. ಹವಾಮಾನ ಮುನ್ಸೂಚನೆ, ಮಾರುಕಟ್ಟೆ ಧಾರಣೆ ಮತ್ತು ರೋಗ, ಕೀಟ ಹಾವಳಿ ಕುರಿತು ದಿನಂಪ್ರತಿ ಮಾಹಿತಿ ಪೂರೈಕೆ ಮಾಡಲಾಗುತ್ತಿದೆ. ಈ ಎಲ್ಲಾ ಮಾಹಿತಿಯನ್ನು ಸ್ಮಾರ್ಟ್ ಫೋನ್, ಟ್ಯಾಬ್ಲೆಟ್ ಮತ್ತು ಐ–ಫೋನ್ ಮುಖಾಂತರ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದು. ಕೇಂದ್ರದಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಏಳು ಕೃಷಿ ವಿಜ್ಞಾನ ಕೇಂದ್ರ ಮತ್ತು ಒಂದು ವಿಸ್ತರಣಾ ಶಿಕ್ಷಣ ಘಟಕವನ್ನು ಸಂಪರ್ಕಿಸಬಹುದಾಗಿದೆ.

ಸಿಬ್ಬಂದಿ ತರಬೇತಿ ಘಟಕ

ಸಿಬ್ಬಂದಿ ತರಬೇತಿ ಘಟಕವು 1974ರಲ್ಲಿ ಪ್ರಾರಂಭಗೊಂಡಿದ್ದು, ಅಭಿವೃದ್ಧಿ ಇಲಾಖೆಗಳ, ಅರೆ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಅಧಿಕಾರಿಗಳು/ಸಿಬ್ಬಂದಿಗೆ ಮತ್ತು ನೂತನವಾಗಿ ನೇಮಕವಾದ ಕೃಷಿ ವಿಶ್ವವಿದ್ಯಾನಿಲಯದ ಸಿಬ್ಬಂದಿಗೆ ಸಾಂಸ್ಥಿಕ ಮತ್ತು ಕ್ಷೇತ್ರ ಪೂರಕ ತರಬೇತಿ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡುವುದರೊಂದಿಗೆ ತರಬೇತಿ ಕಾರ್ಯಕ್ರಮಗಳ ಪರಿಣಾಮಕಾರತ್ವದ ಮೇಲ್ವಿಚಾರಣೆ ಮತ್ತು ಅವುಗಳ ಮರುವಿನ್ಯಾಸವನ್ನು ಅಳವಡಿಸಿಕೊಂಡಿದೆ. ಜೊತೆಗೆ ಕೃಷಿ ವಿಶ್ವವಿದ್ಯಾನಿಲಯ ಹಾಗೂ ತರಬೇತಿ ಪ್ರಾಯೋಜಿಸುವ ಸಂಸ್ಥೆಗಳ ನಡುವೆ ಸಮನ್ವಯತೆಯನ್ನು ನಿರ್ವಹಿಸುವುದು ಘಟಕದ ಮೂಲ ಉದ್ದೇಶವಾಗಿದೆ.

ನಿರುದ್ಯೋಗಿ ಕೃಷಿ ಪದವೀಧರರಿಗೆ ಅಗ್ರಿ ಕ್ಲಿನಿಕ್ ಹಾಗೂ ಅಗ್ರಿ ಬಿಸಿನೆಸ್ ಕುರಿತಾದ ಎರಡು ತಿಂಗಳ ತರಬೇತಿಯನ್ನು 2002ರಲ್ಲಿ ನಬಾರ್ಡ್ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಹಮ್ಮಿಕೊಳ್ಳಲಾಗಿತ್ತಿದೆ. ಈ ತರಬೇತಿಯನ್ನು ನವದೆಹಲಿಯ ಸಣ್ಣ ರೈತರ ಕೃಷಿ–ವ್ಯವಹಾರ ಒಕ್ಕೂಟವು ರೂಪಿಸಿದ್ದು, ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯು ಸಂಯೋಜನೆ ಮಾಡುತ್ತಿದೆ.

ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ ಸಂಸ್ಥೆ (ಸಮೇತಿ):

ಸದರಿ ಸಂಸ್ಥೆಯು ಸಿಬ್ಬಂದಿ ತರಬೇತಿ ಘಟಕದ ಒಂದು ಭಾಗವಾಗಿ ರಾಜ್ಯದ ದಕ್ಷಿಣ ಜಿಲ್ಲೆಗಳ ವಿವಿಧ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳಿಗೆ ಆತ್ಮ (ATMA) ಯೋಜನೆಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳನ್ನು ಸಂಘಟಿಸುವ ಮೂಲಕ ಜಿಲ್ಲೆಗೆ ಸೂಕ್ತವಾದ ಸಂಶೋಧನೆ ಮತ್ತು ವಿಸ್ತರಣೆ ಯೋಜನೆಗಳ ತಯಾರಿಕೆಯಲ್ಲಿ ಮಾರ್ಗದರ್ಶನ ನೀಡುವುದರೊಂದಿಗೆ ಆತ್ಮ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಯೋಜಿಸುವುದು ಮುಖ್ಯ ಕಾರ್ಯವಾಗಿದೆ. ನೂತನವಾಗಿ ಮ್ಯಾನೇಜ್, ಹೈದರಾಬಾದ್ ಸಂಸ್ಥೆಯ ಸಹಯೋಗದೊಂದಿಗೆ ರಾಜ್ಯದ ದಕ್ಷಿಣ ಜಿಲ್ಲೆಗಳ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ

ಕಾರ್ಯಕ್ರಮವನ್ನು ಆಯೋಜಿಸುವ ಹೊಣೆಗಾರಿಕೆಯನ್ನು ಹೊಂದಿದ್ದು, ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವೀಯಾಗಿದೆ.

ಬೇಕರಿ ತರಬೇತಿ ಘಟಕ

ಈ ಘಟಕವು ಬೇಕರಿ ತರಬೇತಿ ಶಾಲೆಯಾಗಿ 1968ರಲ್ಲಿ ಪ್ರಾರಂಭವಾಯಿತು. ಇದು ಗುಣಮಟ್ಟದ ಬೇಕಿಂಗ್ ಮತ್ತು ಬೇಕರಿ ಕುರಿತಾದ ತಂತ್ರಜ್ಞಾನವನ್ನು ನೀಡುವುದರ ಜೊತೆಗೆ ವೃತ್ತಿಪರ ನಿರ್ವಹಣೆಯ ಕೌಶಲ್ಯಗಳನ್ನು ಕಲಿಸುವುದು. ಬೇಕರಿ ಉದ್ಯಮದಲ್ಲಿ ತಾಂತ್ರಿಕ ಉದ್ಯೋಗಸ್ಥರಿಗೆ ಉತೇಜನ ಕೊಡುತ್ತಿದ್ದು, ಬೇಕರಿ ತಂತ್ರಜ್ಞಾನ ಕುರಿತಾದ ಒಂದು ವರ್ಷದ ಡಿಪ್ಲೊಮೊ ಹಾಗೂ ವಿವಿಧ ಅವಧಿಯ ಪ್ರಮಾಣ ಪತ್ರದ ಕೋರ್ಸುಗಳ ಆಯೋಜನೆಯನ್ನು ಮಾಡುತ್ತಿದೆ. ಮೌಲ್ಯವರ್ಧನೆ ಕುರಿತಾದ ನಿರಂತರ ಸಂಶೋಧನೆ, ತರಬೇತಿ, ಬೇಕರಿ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಈ ಘಟಕದ ನಿರಂತರ ಕಾರ್ಯಚಟುವಟಿಕೆಯಾಗಿರುತ್ತದೆ.

ಕ್ಷೇತ್ರ ವಾರ್ತಾ ಘಟಕ

1996ರಲ್ಲಿ ಘಟಕವು ಪ್ರಾರಂಭವಾಗಿದ್ದು, ಸುಧಾರಿತ ಬೇಸಾಯ ಪದ್ಧತಿಗಳ ಕುರಿತ ಪುಸ್ತಕಗಳು, ಕಿರುಹೊತ್ತಿಗೆಗಳು ಹಾಗೂ ಹಸ್ತಪ್ರತಿಗಳ ಪ್ರಕಟಣೆ, ಪ್ರಚಾರಕ್ಕಾಗಿ ವಾರ್ತಾ ಮಾಧ್ಯಮಗಳೊಂದಿಗೆ ಸಂಪರ್ಕ ಮತ್ತು ಸಮನ್ವಯತೆ, ಕೃಷಿಮೇಳ ಆಯೋಜನೆ ಮತ್ತು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕೃಷಿಮೇಳಗಳಲ್ಲಿ, ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸುವುದು, ವಿಶ್ವ ವಿದ್ಯಾನಿಲಯದ ಕಾರ್ಯ ಚಟುವಟಿಕೆಗಳ ಕುರಿತು ಮಾಧ್ಯಮಗಳ ಭೇಟಿ, ಪತ್ರಿಕಾ ಗೋಷ್ಠಿಗಳು, ಪತ್ರಿಕಾ ಪ್ರಕಟಣೆಗಳು ಮತ್ತು ಜನಪ್ರಿಯ ಲೇಖನಗಳು ಹಾಗೂ ಯಶೋಗಾಥೆಗಳನ್ನು ವೃತ್ತ ಪತ್ರಿಕೆಗಳಿಗೆ ಬರೆಯುವುದು ಪ್ರಮುಖವಾದ ಕಾರ್ಯಚಟುವಟಿಕೆಗಳಾಗಿರುತ್ತವೆ.

ದೂರ ಶಿಕ್ಷಣ ಘಟಕ

ವಿಶ್ವವಿದ್ಯಾನಿಲಯವು 1974ರಲ್ಲಿ ಕೃಷಿ ಉತ್ಪಾದನಾ ತಾಂತ್ರಿಕತೆಗಳನ್ನು ಸಾಕ್ಷರ ರೈತರಲ್ಲಿ ಮನವರಿಕೆ ಮಾಡಿಸಿ ಕ್ಷೇತ್ರ ಮಟ್ಟದಲ್ಲಿ ಅಳವಡಿಸಿಕೊಳ್ಳಲು ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ಪತ್ರವ್ಯವಹಾರದ ಕೋರ್ಸ್‌ನ್ನು ಪ್ರಾರಂಭಿಸಿತ್ತು. ವಿಶ್ವವಿದ್ಯಾನಿಲಯವು ದೂರ ಶಿಕ್ಷಣಕ್ಕೆ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ಅರಿತು 2012ರಲ್ಲಿ ವಿಸ್ತರಣಾ ನಿರ್ದೇಶನಾಲಯದ ಅಡಿಯಲ್ಲಿ ಎಲ್ಲಾ ಅನೌಪಚಾರಿಕ ಶೈಕ್ಷಣಿಕ ಚಟುವಟಿಕೆಗಳನ್ನು ಒಂದೆ ಸೂರಿನಡಿ ಕಾರ್ಯನಿರ್ವಹಿಸುವಂತೆ ದೂರ ಶಿಕ್ಷಣ ಘಟಕವನ್ನು ಪ್ರಾರಂಭಿಸಿತು. ಸದರಿ ಘಟಕವು ರೈತರಿಗೆ ಒಂದು ವರ್ಷದ ಕೃಷಿ ಡಿಪ್ಲೊಮೊ ಕೋರ್ಸ್, ಸಮಗ್ರ ಬೇಸಾಯ ಪದ್ಧತಿ ಮತ್ತು ಆಹಾರಧಾನ್ಯ, ಹಣ್ಣು &

ತರಕಾರಿಗಳ ಕೋಯ್ಲೋತ್ತರ ನಿರ್ವಹಣೆ ಪ್ರಮಾಣ ಪತ್ರ ಕೋರ್ಸುಗಳ ಆಯೋಜನೆಯನ್ನು ಮಾಡುತ್ತಿದ್ದು, ಸಾವಯವ ಕೃಷಿ ವಿಷಯದ ಅಂಚೆ ಶಿಕ್ಷಣವನ್ನು ಆಯೋಜನೆ ಮಾಡುತ್ತಿದೆ. ಇದರೊಂದಿಗೆ ಕೃಷಿಯಲ್ಲಿ ಸ್ನಾತಕೋತ್ತರ ಡಿಪ್ಲೊಮಾವನ್ನು ಆಯೋಜಿಸುತ್ತಿದ್ದು, ಮ್ಯಾನೇಜ್, ಹೈದರಾಬಾದ್‌ನ ಸಹಯೋಗದೊಂದಿಗೆ ಕೃಷಿ ವಿಸ್ತರಣಾ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಅಧ್ಯಯನ ಕೇಂದ್ರವಾಗಿ ಕಾರ್ಯ ನಿರ್ವಹಣೆಯನ್ನು ಮಾಡುತ್ತಿದೆ.

ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ

1992–93ರಲ್ಲಿ ವಲಯ 5 ಮತ್ತು 6ರಲ್ಲಿ ಪ್ರಾರಂಭಿಸಲಾಗಿದ್ದು, ನೋಡೆಲ್ ಸಂಸ್ಥೆಯಾಗಿ ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ಜ್ಞಾನ ಮತ್ತು ಕೌಶಲ್ಯಾಭಿವೃದ್ಧಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಜಿಲ್ಲಾಮಟ್ಟದ ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳನ್ನು, ಸರ್ವೇಕ್ಷಣ (Diagnostic) ಸಮೀಕ್ಷೆಗಳನ್ನು, ಕೃಷಿಕರ ಪರಸ್ಪರ ಚರ್ಚಿಸುವ ಅಧಿವೇಶನಗಳ ಆಯೋಜನೆ ಮಾಡುವುದು ಹಾಗೂ ಬೆಳೆಗಳ ಮತ್ತು ಆಯಾ ಜಿಲ್ಲೆಗಳಿಗೆ ಸೂಕ್ತವಾದ ಕೃಷಿ ಉದ್ಯಮಗಳ ಕುರಿತು ಪ್ರಕಟಣೆಗಳನ್ನು ತಯಾರಿಸುವುದು ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ.

ಕೃಷಿ ವಿಜ್ಞಾನಗಳ ವಸ್ತುಸಂಗ್ರಹಾಲಯ

ವಿಶ್ವವಿದ್ಯಾನಿಲಯವು ಕೃಷಿ ವಸ್ತುಸಂಗ್ರಹಾಲಯವನ್ನು ಹೆಬ್ಬಾಳದಲ್ಲಿ ಸ್ಥಾಪನೆ ಮಾಡಿತ್ತು, 2013ರಲ್ಲಿ ಜಿಕೆವಿಕೆ ಆವರಣದಲ್ಲಿ ಹೊಸದಾಗಿ ನಿರ್ಮಿಸಲಾದ ಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಯಿತು. ಈ ಸಂಗ್ರಹಾಲಯದ ಪ್ರಮುಖ ಉದ್ದೇಶ ದೇಶ ಮತ್ತು ರಾಜ್ಯದಲ್ಲಿನ ಕೃಷಿಯ ಐತಿಹಾಸಿಕ ಯಥಾ ದೃಶ್ಯಗಳ ರೂಪಣ, ಕೃಷಿ ಅಭಿವೃದ್ಧಿಯ ಸ್ಥಾನಮಾನ, ಸಮಕಾಲೀನ ವಿವಾದಾಂಶಗಳು ಮತ್ತು ಕೃಷಿ ವಿಜ್ಞಾನಗಳಲ್ಲಿ ಇತ್ತೀಚಿನ ಅಭಿವೃದ್ಧಿಗಳನ್ನು ಬಿಂಬಿಸುವುದು. ಇದರೊಂದಿಗೆ ಬೆಳೆಗಳಿಗೆ ಬೇಕಾಗುವ ಅಧಿಕ ಇಳುವರಿ ಕೊಡುವ ತಾಂತ್ರಿಕತೆಗಳ ಪ್ರದರ್ಶನ, ಕೀಟ, ರೋಗ ಬಾಧೆಗಳ ವಿವರ ಹಾಗೂ ಅವುಗಳ ಹತೋಟಿ, ಖುಷ್ಕಿ ಬೇಸಾಯ ಪದ್ಧತಿಗಳ ಪರಿಚಯ, ವಿಶ್ವವಿದ್ಯಾನಿಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳ ಆವಿಷ್ಕಾರಗಳ ಕುರಿತು ಮಾಹಿತಿ ನೀಡುವುದು.

ವಿಸ್ತರಣಾ ಶಿಕ್ಷಣ ಘಟಕ

1975ರಲ್ಲಿ ಮೈಸೂರಿನ ನಾಗೇನಹಳ್ಳಿ ಮತ್ತು 2015ರಲ್ಲಿ ಕೋಲಾರ ಜಿಲ್ಲೆಯಲ್ಲಿ ವಿಸ್ತರಣಾ ಶಿಕ್ಷಣ ಘಟಕಗಳು ಪ್ರಾರಂಭವಾಗಿದ್ದು, ಇವುಗಳ ಪ್ರಮುಖ ಕಾರ್ಯಚಟುವಟಿಕೆಗಳು ಸಂಶೋಧನ ಫಲಿತಾಂಶಗಳ ಕಾರ್ಯಕ್ಷಮತೆ ಕುರಿತು ರೈತರ ತಾಕುಗಳಲ್ಲಿ ಮೌಲ್ಯಮಾಪನೆ ಮಾಡುವುದು ಮತ್ತು ಸಾಬೀತಾದ ಸಂಶೋಧನಾ ಫಲಿತಾಂಶಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ರೈತರಲ್ಲಿ ಮನವರಿಕೆ ಮಾಡುವುದು ಹಾಗೂ ಅಭಿವೃದ್ಧಿ ಇಲಾಖೆಗಳು, ಪರಿಕರ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಮತ್ತಿತರ ಸಂಸ್ಥೆಗಳ ಸಹಭಾಗಿತ್ವದಲ್ಲಿ ತರಬೇತಿ ಮತ್ತು ಇತರ ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಕೃಷಿ ವಿಜ್ಞಾನ ಕೇಂದ್ರಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪ್ರಾಯೋಜಿತ ಏಳು ಕೃಷಿ ವಿಜ್ಞಾನ ಕೇಂದ್ರಗಳು ವಿಶ್ವ ವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಗ್ರಾಮಾಂತರ, ರಾಮನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಮೂಲ ಉದ್ದೇಶಗಳು ಕ್ಷೇತ್ರ ತಂತ್ರಜ್ಞಾನ ಪರಿಶೀಲನೆ ನಡೆಸುವುದು, ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಹಾಗೂ ರೈತ ಕ್ಷೇತ್ರ ಪಾಠಶಾಲೆಗಳನ್ನು ವ್ಯವಸ್ಥೆ ಮಾಡುವುದು, ಅವಶ್ಯಕತೆ ಆಧಾರದ ಮೇಲೆ ರೈತ ಮತ್ತು ವಿಸ್ತರಣಾ ಸಿಬ್ಬಂದಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸುಧಾರಿತ ಕೃಷಿ ತಂತ್ರಜ್ಞಾನಗಳ ಕುರಿತು ಅರಿವು ಮೂಡಿಸುವುದು, ಬೇಡಿಕೆ ಆಧಾರದ ಮೇಲೆ ಗುಣಮಟ್ಟದ ಬೀಜಗಳು, ಸಸಿಗಳು, ಜಾನುವಾರು ಸಂಕರಣಗಳು, ಪ್ರಾಣಿಜನ್ಯ ಉತ್ಪನ್ನಗಳು ಹಾಗೂ ಉಪಉತ್ಪನ್ನಗಳು ಮುಂತಾದವುಗಳ ಉತ್ಪಾದನೆ ಮತ್ತು ಪೂರೈಕೆಯೊಂದಿಗೆ ಜಿಲ್ಲೆಯ ಕೃಷಿ ತಂತ್ರಜ್ಞಾನ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು.

ವಿಸ್ತರಣಾ ನಿರ್ದೇಶನಾಲಯದ ಇತರೆ ಚಟುವಟಿಕೆಗಳು

- **ವಾರ್ಷಿಕವಾಗಿ ವಿಶ್ವ ವಿದ್ಯಾನಿಲಯದ ಮಟ್ಟದಲ್ಲಿ ಕೃಷಿಮೇಳ ಕಾರ್ಯಕ್ರಮವನ್ನು ಆಯೋಜನೆ ಮಾಡಿ ಅದೇ ಸಂದರ್ಭದಲ್ಲಿ ರಾಜ್ಯ ಮಟ್ಟದ ಡಾ. ಮರೀಗೌಡ ಅತ್ಯುತ್ತಮ ಪ್ರಗತಿಪರ ತೋಟಗಾರಿಕಾ ರೈತ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಹಾಗೂ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಕೆನರಾ ಬ್ಯಾಂಕ್ ಪ್ರಾಯೋಜಿತ ರಾಜ್ಯ ಮಟ್ಟದ ಕ್ಯಾನ್ ಬ್ಯಾಂಕ್‌ನ ಅತ್ಯುತ್ತಮ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ, ಸಿ. ಭೈರೇಗೌಡ ಸ್ಮಾರಕ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಸನ್ಮಾನ್ಯ ಮಾಜಿ ಪ್ರಧಾನಿಗಳ ಶ್ರೀ ಹೆಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ, ಜಿಲ್ಲಾ ಮಟ್ಟದ ಅತ್ಯುತ್ತಮ ಪ್ರಗತಿ ಪರ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ ಹಾಗೂ ತಾಲ್ಲೂಕು ಮಟ್ಟದ ಯುವ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗಳನ್ನು ನೀಡಿ ರೈತರನ್ನು ಉತ್ತೇಜಿಸುವುದು ಹಾಗೂ ನೂತನವಾಗಿ ಬಿಡುಗಡೆಯಾದ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ವಸ್ತು ಪ್ರದರ್ಶನದ ಮೂಲಕ ರೈತರಿಗೆ ಪರಿಚಯಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ.**
- **ರೈತರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ದಿನಾಚಾರಣೆಗಳಾದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ವಿಶ್ವ ನೀರಿನ ದಿನ, ವಿಶ್ವ ಪರಿಸರ ದಿನ, ವಿಶ್ವ ಆಹಾರ ದಿನ, ಕೃಷಿಯಲ್ಲಿ ಮಹಿಳಾ ದಿನಾಚರಣೆ ಹಾಗೂ ಕಿಸಾನ್ ಸಮ್ಮಾನ್ ದಿವಸ್ (ರೈತರ ದಿನಾಚರಣೆ) ಮುಂತಾದ ಆಚರಣೆಗಳನ್ನು ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಆಯೋಜಿಸುವುದು.**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರೈತರ ಹಾಗೂ ಕೃಷಿ ಅಭಿವೃದ್ಧಿಗೆ ಕಳೆದ 50 ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಿದ್ದು, ಮುಖ್ಯವಾಗಿ ವಿಸ್ತರಣಾ ನಿರ್ದೇಶನಾಲಯವು ರೈತರ ಆರ್ಥಿಕ ಸುಸ್ಥಿರತೆಗಾಗಿ ಸಂಶೋಧನೆಯಿಂದ ಹೊರಬಂದ ಹೊಸ ತಳಿಗಳ ಪರಿಚಯ, ಸುಧಾರಿತ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಹಾಗೂ ಇದಕ್ಕೆ ಪೂರಕವಾದ ವಿಸ್ತರಣಾ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಶ್ರಮಿಸುತ್ತದೆ. ಇದರ ಪ್ರತಿಫಲದಿಂದ ರಾಜ್ಯದಲ್ಲಿ ಎಕರೆವಾರು ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಾಗಿರುವುದು ಗಮನಾರ್ಹ.

✍ ಶ್ರೀ ಹಳೇಕೋಟೆ ರಮೇಶ್
ಸಾಹಿತಿಗಳು ಮತ್ತು ಪ್ರಗತಿಪರ ಕೃಷಿಕರು, ಮೂಡಿಗೆರೆ

ಮಲೆನಾಡು ಕೃಷಿಗಿರುವ ಸವಾಲುಗಳು ಮತ್ತು ಆತಂಕ

ಮಲೆನಾಡು ಪ್ರದೇಶವು ಪಶ್ಚಿಮ ಘಟ್ಟಗಳಲ್ಲಿ ವಿಲೀನವಾಗಿದ್ದು ಸಮುದ್ರ ಮಟ್ಟದಿಂದ ಸುಮಾರು ೯೦೦ ರಿಂದ 1200 ಮೀಟರ್ ಎತ್ತರ ಪ್ರದೇಶದಲ್ಲಿದ್ದು ನಿತ್ಯ ಹಸಿರಿನಿಂದ ಕೂಡಿದ್ದು, ಸಾಂಪ್ರದಾಯಿಕ ಬೆಳೆಗಳಾದ ಕಾಫಿ, ಏಲಕ್ಕಿ, ಕಾಳುಮೆಣಸು, ಅಡಿಕೆ, ಭತ್ತ ಮುಂತಾದವು ಮಲೆನಾಡು ರೈತರುಗಳಿಗೆ ಆರ್ಥಿಕತೆಗೆ ಬೆನ್ನೆಲುಬಾಗಿ ನಿಂತಿವೆ. ಈ ಕೃಷಿಯಲ್ಲಿ ಇತ್ತೀಚಿನ ದಿನಗಳಲ್ಲಿ ಹಲವಾರು ಸವಾಲು ಸಮಸ್ಯೆಗಳನ್ನು ರೈತರು ಎದುರಿಸುತ್ತಿರುವುದರಿಂದ ಕೃಷಿಯನ್ನು ಲಾಭದಾಯಕ ಉದ್ಯಮವನ್ನಾಗಿಸಲು ಆತಂಕದಲ್ಲಿದ್ದಾರೆ.

ಕೃಷಿಗಿರುವ ಸವಾಲುಗಳು:

1. **ಹವಾಮಾನ ವೈಪರಿತ್ಯ:** ಮಲೆನಾಡು ಪ್ರದೇಶದಲ್ಲಿ ಸರಾಸರಿ ವಾರ್ಷಿಕ ಮಳೆ 3500 ಮೀ (140 ಇಂಚುಗಳು) ಇರುವುದರಿಂದ ಸಾಂಪ್ರದಾಯಿಕ ಬೆಳೆಗಳು ಹೆಚ್ಚು ಹೆಚ್ಚು ರೋಗ ಕೀಟಗಳ ಹಾವಳಿಗೆ ತುತ್ತಾಗುತ್ತಿವೆ. ವಾಡಿಕೆ ಮಳೆಯು ಸರಾಸರಿ ಪ್ರಮಾಣದಲ್ಲಿ ಹಂಚಿಕೆಯಾಗದಿರುವುದರಿಂದ ಪ್ರಕೃತಿ ವಿಕೋಪಕ್ಕೆ ಕಾರಣವಾಗಿ ಕೃಷಿ, ಭೂಮಿ, ಮನೆ, ಬೆಳೆ ಮತ್ತು ಮಾನವ ಸಂಪನ್ಮೂಲಗಳಿಗೆ ತೊಂದರೆಯಾಗಿದೆ. ಅನಾವೃಷ್ಟಿ ಮಳೆಯಿಂದ ಹೆಚ್ಚು ಇಂಧನ ಬಳಕೆ, ಕೂಲಿ ಕಾರ್ಮಿಕರ ಬಳಕೆಯಿಂದ ಹೆಚ್ಚಿನ ಆರ್ಥಿಕ ಹೊರೆಯಾಗುತ್ತಿದೆ.

2. **ಫಲವತ್ತಾದ ಮಣ್ಣಿನ ಸವಕಳಿ ಮತ್ತು ಹೆಚ್ಚುತ್ತಿರುವ ಹುಳಿ ಮಣ್ಣಿನ ಸಮಸ್ಯೆಗಳು:** ಅತಿವೃಷ್ಟಿಯಿಂದ ಫಲವತ್ತಾದ ಮಣ್ಣು ಸವಕಳಿಯಾಗುತ್ತಿರುವುದರಿಂದ ಹಾಗೂ ಹೆಚ್ಚುತ್ತಿರುವ ಹುಳಿ ಮಣ್ಣಿನ ಸಮಸ್ಯೆಯಿಂದ ಮಣ್ಣಿನ ಆರೋಗ್ಯ ಕ್ಷೀಣಿಸುತ್ತಿದೆ ಹಾಗೂ ಇಳುವರಿಯ ಉತ್ಪಾದನೆಯಲ್ಲಿ ಕುಂಠಿತವಾಗಿದೆ ಮತ್ತು ಹೆಚ್ಚಿನ ಆರ್ಥಿಕ ಹೊರೆಯಾಗಿ ಮಲೆನಾಡು ಕೃಷಿ ನಷ್ಟದತ್ತ ದಾಪುಗಾಲು ಹಾಕುತ್ತಿದೆ.

3. **ಕೂಲಿ ಕಾರ್ಮಿಕರ ಸಮಸ್ಯೆಗಳು :** ಸಾಂಪ್ರದಾಯಿಕ ಬೆಳೆಗಳು ದೀರ್ಘಾವಧಿ ಬೆಳೆಗಳಾಗಿರುವುದರಿಂದ ಹೆಚ್ಚಿನ ಕೂಲಿಕಾರ್ಮಿಕರ ಅವಶ್ಯಕತೆಯಿರುವುದರಿಂದ ಸರಿಯಾದ ಸಮಯದಲ್ಲಿ ಅಗತ್ಯತೆಗೆ

ತಕ್ಕಂತೆ ದೊರೆಯದಿರುವುದು ಹಾಗೂ ಹೆಚ್ಚಿನ ವೇತನಕ್ಕೆ ಬೇಡಿಕೆ ಮತ್ತು ಕಡಿಮೆ ಅವಧಿಯ ಕೆಲಸ ನಿರ್ವಹಣೆ ಆಸಕ್ತಿ ತೋರುತ್ತಿರುವುದು.

4. **ಕಾಡು ಪ್ರಾಣಿ ಮತ್ತು ಪಕ್ಷಿಗಳ ಹಾವಳಿ :** ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳಾದ ಆನೆ, ಕಾಡು ಎಮ್ಮೆ, ಕಾಡು ಹಂದಿ, ಮಂಗಗಳು ಮತ್ತು ನವಿಲುಗಳು ಬೆಳೆ ಹಾನಿ ಹಾಗೂ ಜೀವಹಾನಿ ಆಗುತ್ತಿದ್ದೂ, ಇವುಗಳನ್ನು ಬೇದಿಸಿ ಕೃಷಿ ಮಾಡುವುದು ಸವಾಲಿನ ಕೆಲಸ.

5. **ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಏರಿಳಿತ :** ಮಾರುಕಟ್ಟೆಯಲ್ಲಿ ಉತ್ಪನ್ನಗಳಿಗೆ ಸ್ಥಿರ ಬೆಲೆ ಇಲ್ಲದಿರುವುದು ಮತ್ತು ನಿರ್ದಿಷ್ಟವಾದ ಬೆಲೆ ಗೊತ್ತುಪಡಿಸುವಿಕೆ ಇಲ್ಲದೆ ಇರುವುದರಿಂದ ಕೃಷಿಯು ಇತ್ತೀಚಿನ ದಿನಗಳಲ್ಲಿ ಸವಾಲಾಗಿ ಪರಿಣಮಿಸಿದೆ.

6. **ಕೃಷಿಯಲ್ಲಿ ಯಾಂತ್ರಿಕರಣವನ್ನು ಅಳವಡಿಸಿಕೊಳ್ಳಲು ಅಪರಿ ಪೂರ್ಣತೆ:** ನುರಿತ ಕಾರ್ಮಿಕರ ಕೊರತೆ, ಬೆಳೆಯ ವೈವಿಧ್ಯತೆ, ಗುಡ್ಡಗಾಡು ಪ್ರದೇಶ ಹಾಗೂ ಯಾಂತ್ರೀಕರಣಕ್ಕೆ ಮಲೆನಾಡಿನ ಕೃಷಿಯು ಹೊಂದಾಣಿಕೆಯಾಗದಿರುವುದು ಮತ್ತು ಯಾಂತ್ರೀಕರಣಕ್ಕೆ ಆಧುನಿಕ ಕೃಷಿಯನ್ನು ಅಳವಡಿಸದಿರುವುದು ಲಾಭದಾಯಕ ಕೃಷಿಗೆ ಸವಾಲಾಗಿದೆ.

7. **ಸರ್ಕಾರಿ ವರದಿ ಮತ್ತು ನೀತಿ ನಿಯಮಗಳು :** ಕೃಷಿಗೆ ಪೂರಕವಾದ ಮಲೆನಾಡು ರೈತರಿಗೆ ಅನುಕೂಲ ಕರವಲ್ಲದ ನೀತಿಗಳನ್ನು ಮತ್ತು ವರದಿಗಳನ್ನು ಸಮಗ್ರ ಮುಕ್ತ ಚರ್ಚೆಯಾಗದೆ ಆದೇಶಿ ಸುವುದು.

8. **ವಿದ್ಯುಚಕ್ತಿ ಸಮಸ್ಯೆ :** ಸಮರ್ಪಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಮತ್ತು ಹಳ್ಳಿ ಮತ್ತು ಪಟ್ಟಣ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಯಲ್ಲಿ ತಾರತಮ್ಯವಿರುವುದು ಸರಿಯಾದ ಸಮಯದಲ್ಲಿ ಸಾಂಪ್ರದಾಯಿಕ ಬೆಳೆಗಳಿಗೆ ನೀರನ್ನು ಪೂರೈಸದಿರುವುದು ಉತ್ಪಾದನೆಯಲ್ಲಿ ಕುಂಠಿತ.

9. **ಕೃಷಿಸಲಕರಣೆಗಳಹಾಗೂಉಪಕರಣಗಳಬೆಲೆಹೆಚ್ಚಳ:** ರಸಗೊಬ್ಬರಗಳು, ಕೀಟನಾಶಕಗಳು ಮತ್ತು ಕೃಷಿ ಯಂತ್ರೋಪ ಕರಣಗಳ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿರು ವುದರಿಂದ ಅವಶ್ಯ ಸಲಕರಣೆಗಳು ಮತ್ತು ಉಪಕರಣಗಳನ್ನು ಖರೀದಿ ಮಾಡುವುದು ಎಲ್ಲಾ ರೈತ ವರ್ಗಕ್ಕೆ ಕಷ್ಟಕರವಾಗಿದೆ.

10. **ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಕಾಲಕ್ಕೆ ಸಾಲ ಸೌಲಭ್ಯ ದೊರೆಯದಿರುವುದು :** ಬೆಳೆ ಸಾಲ, ಅಭಿವೃದ್ಧಿ ಸಾಲ ಮತ್ತು ಕೃಷಿ ಸಾಲಗಳು ಸಕಾಲಕ್ಕೆ ದೊರೆಯದಿರುವುದು ಮತ್ತು ಹೆಚ್ಚಿನ ಬಡ್ಡಿದರವು ಮಲೆನಾಡಿನ ರೈತರಿಗೆ ಹೊರೆಯಾಗಿದೆ. ಸಹಕಾರಿ ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಡ್ಡಿ ದರದಲ್ಲಿ ತಾರತಮ್ಯ ಮತ್ತು ರೈತರಿಗೆ ಪೂರಕವಾದಂತಹ ಸಾಲ ಮನ್ನಾ ಯೋಜನೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅನ್ವಹಿಸದಿರುವುದು.

11. **ಸಾಂಪ್ರದಾಯಿಕ ಬೆಳೆಗಳಿಗೆ ಅಂಟಿಕೊಂಡಿರುವ ಮಾರಕ ರೋಗ ಮತ್ತು ಕೀಟಗಳು :** ಕಾಳುಮೆಣಸಿನ ಸೊರಗು ರೋಗ, ಏಲಕ್ಕಿಯ ಕಟ್ಟೆರೋಗ, ಅಡಿಕೆಯ ಹಳದಿ ಎಲೆ ರೋಗ ಮತ್ತು ಬೇರು ಹುಳದ ಸಮಸ್ಯೆ ಕಾಫಿಯ ಕಾಂಡಕೊರಕ ಹಾಗೂ ಎಲೆ ತುಕ್ಕು ರೋಗ ಇಂತಹ ದೀರ್ಘ ಕಾಲದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯುವುದು ಸವಾಲಾಗಿದೆ.

12. **ದಲ್ಲಾಳಿಗಳ ಉಪಟಳ :** ಉತ್ತಮವಾಗಿ ಬೆಳೆದ ಉತ್ಪನ್ನಗಳಿಗೆ ಉತ್ತೇಜಿತ ಬೆಲೆ ನೀಡದೆ ಬೆಲೆಯಲ್ಲಿ ಅತಿ ಕಡಿಮೆ ದರ, ತೂಕದಲ್ಲಿ ವ್ಯತ್ಯಾಸ, ಗುಣಮಟ್ಟದಲ್ಲಿ ಕಳಪೆ ಎಂದು ದೂರುವುದು, ವರ್ತಕರಿಂದ ಪಡೆದ ಚೆಕ್‌ಗಳು ನಗದಾಗದೇ ರೈತರು ಆತ್ಮಹತ್ಯೆ ಮಾಡಿಕೊಂಡಂತಹ ನಿದರ್ಶನಗಳು ವೈಜ್ಞಾನಿಕ ಕೃಷಿ ಮಾಡುವುದು ಸವಾಲಾಗಿದೆ.

13. **ಅಸಮರ್ಪಕ ಮತ್ತು ಕಿರಿದಾದ ರಸ್ತೆಗಳು :** ಮಲೆನಾಡಿನ ಭೂಮಿಯಲ್ಲಿ ಉತ್ಪನ್ನಗಳನ್ನು ಕಣಕ್ಕೆ ಸಾಗಿಸಲು ಅಸಮರ್ಪಕ ಮತ್ತು ಕಿರಿದಾದ ರಸ್ತೆಗಳು ದೀರ್ಘಕಾಲಿನ ಸಮಸ್ಯೆಯಾಗಿ ಪರಿಣಮಿಸಿದೆ.

ಆತಂಕಗಳು:

1. ಕೃಷಿ ಉತ್ಪನ್ನಗಳಿಗೆ ನಿಖರ ಬೆಲೆ ಮತ್ತು ಸುಸಜ್ಜಿತ ಮಾರುಕಟ್ಟೆಯ ವ್ಯವಸ್ಥೆ ಇಲ್ಲದಿರುವುದು
2. ಉತ್ಪನ್ನಗಳನ್ನು ಸುಗ್ಗಿ ಕಾಲದಲ್ಲಿ ಶೇಖರಿಸಲು ವೈಜ್ಞಾನಿಕ ಶೈತ್ಯಾಗಾರಗಳ ಕೊರತೆ
3. ಕೂಲಿ ಕಾರ್ಮಿಕರ ಸಾಮರ್ಥ್ಯ ಮತ್ತು ನೈಪುಣ್ಯತೆ ಕ್ಷೀಣಿಸುತ್ತಿರುವುದು
4. ಯುವಕರು ಕೃಷಿಯಿಂದ ವಿಮುಕ್ತವಾಗುತ್ತಿರುವುದು ಹಾಗೂ ನಗರದೆಡೆಗೆ ಒಲವು ತೋರಿಸುತ್ತಿರುವುದು
5. ಕೃಷಿಯನ್ನು ಲಾಭದಾಯಿಕ ಉದ್ಯಮವೆಂದು ಪರಿಗಣಿಸುವುದು
6. ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿರುವ ಭತ್ತದ ಕೃಷಿಯಿಂದ ಅಂತರ್ಜಲದ ಮಟ್ಟ ಕುಸಿಯುತ್ತಿರುವುದು
7. ಸಮಗ್ರ ಕೃಷಿಗೆ ಹೆಚ್ಚು ಆಸಕ್ತಿವಹಿಸದಿರುವುದು
8. ಸಾಂಪ್ರದಾಯಿಕ ಬೆಳೆಗಳಾದ ಕಿತ್ತಳೆ, ನಿಂಬೆ, ಏಲಕ್ಕಿ ಮುಂತಾದವು ನಶಿಸುತ್ತಿರುವುದು
9. ಅತಿಯಾದ ಹಾಗೂ ಅವೈಜ್ಞಾನಿಕ ರಸಗೊಬ್ಬರ ಕೀಟನಾಶಕಗಳು ಮತ್ತು ಕಳೆ ನಾಶಕಗಳ ಬಳಕೆ ಹೆಚ್ಚು ಪರಿಸರ ಮಾಲಿನ್ಯಗೊಳಿಸುತ್ತಿರುವುದು
10. ಉತ್ತರ ಭಾರತ ಮತ್ತು ಈಶಾನ್ಯ ರಾಜ್ಯಗಳ ಕಾರ್ಮಿಕರು ಮಲೆನಾಡಿನಲ್ಲಿ ಕೂಲಿ ಮಾಡುತ್ತಿರುವುದು ಮತ್ತು ಇವರ ಮೇಲಿನ ಹೆಚ್ಚಿನ ಅವಲಂಬನೆ ಭೂ ಮಾಲೀಕರುಗಳಿಗೆ ಹಾಗೂ ಮುಂದಿನ ದಿನಗಳಲ್ಲಿ ಆತಂಕ ಒಡ್ಡುವುದು ಸಂಶಯವಿಲ್ಲ.
11. ವಿದ್ಯುಚಕ್ತಿ ಸರಬರಾಜಿನಲ್ಲಿ ವ್ಯತ್ಯಯ ಮುಂದುವರಿದಿರುವುದು ಹಾಗೂ ವಿದ್ಯುತ್‌ಚಕ್ತಿಗೆ ಸರಿಸಮಾನಾದ ಪರ್ಯಾಯ ಇಂಧನದ ಮೂಲವನ್ನು ಕೃಷಿಯಲ್ಲಿ ಬಳಸದಿರುವುದು ಆತಂಕವನ್ನು ತಂದು ಒಡ್ಡಬಲ್ಲದು.

ಯು. ಕೆ. ಶಾನವಾಡ ಮತ್ತು ಬಿ. ಎನ್. ಅರವಿಂದ ಕುಮಾರ
ನೀರು ನಿರ್ವಹಣಾ ಮತ್ತು ಸಂಶೋಧನಾ ಕೇಂದ್ರ, ಬೆಳವಟಗಿ – 582 208

ಮಣ್ಣು ಮತ್ತು ನೀರು ಕೃಷಿಯ ಜೀವಾಳು

ಪ್ರಮುಖವಾಗಿ ಫಲವತ್ತಾದ ಮಣ್ಣು ಮತ್ತು ಅಗತ್ಯವಾದಷ್ಟು ನೀರು ಇದ್ದಾಗ ಕ್ಷೇತ್ರಗಳಲ್ಲಿ ಬಿತ್ತುವ ಪ್ರತಿ ಬೀಜದಿಂದಲೂ ಸೂಕ್ತ ಇಳುವರಿ ನಿರೀಕ್ಷಿಸಬಹುದು. ಉತ್ತಮ ಬೀಜಯಿದ್ದಾಗ್ಯೂ ಮಣ್ಣು ಮತ್ತು ನೀರು ಯೋಗ್ಯವಾಗಿರದಿದ್ದರೆ ಶ್ರಮವೆಲ್ಲವು ವ್ಯರ್ಥ. ಕೃಷಿಯ ಜೀವಾಳುಗಳಾಗಿರುವ ಇವುಗಳ ಮಹತ್ವ ಕುರಿತು ಲೇಖನ ಮಾಹಿತಿ ನೀಡುತ್ತದೆ.

ಮಣ್ಣು ಮತ್ತು ನೀರು ಅತ್ಯಮೂಲ್ಯವಾದ ನೈಸರ್ಗಿಕ ಸಂಪನ್ಮೂಲಗಳು. ಇವು ದೇಶದ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಜೀವನದ ಮೇಲೆ ಮಹತ್ತರ ಪ್ರಭಾವವನ್ನು ಬೀರುತ್ತವೆ. ಈ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿ ಸುಸ್ಥಿತಿಯಲ್ಲಿ ನಮ್ಮ ಮುಂದಿನ ಪೀಳಿಗೆಗೆ ನೀಡುವ ಜವಾಬ್ದಾರಿ ನಮ್ಮ ಮೇಲೆ ಇದೆ. 1950ರ ದಶಕದಲ್ಲಿ ನಮ್ಮ ದೇಶದಲ್ಲಿ ಪ್ರತಿ ಒಬ್ಬರಿಗೆ ಸರಾಸರಿ ಸುಮಾರು 2 ಎಕರೆ ಭೂ ಪ್ರದೇಶ ಲಭ್ಯವಿತ್ತು. ಆದರೆ ಈಗ ಅದು ಕೇವಲ 14 ಗುಂಟೆಗೆ ಇಳಿದಿದೆ. ಅದೇ ರೀತಿ ವಿಶ್ವಸಂಸ್ಥೆಯ ಪ್ರಕಾರ ಪ್ರತಿ ಒಬ್ಬರಿಗೆ ದಿನಕ್ಕೆ 40 ಲೀಟರ್ ಶುದ್ಧ ನೀರಿನ ಅವಶ್ಯಕತೆ ಇದೆ. ಆದರೆ ಅದು ನಮ್ಮ ದೇಶದಲ್ಲಿ ಕೇವಲ 20 ಲೀಟರ್ ಲಭ್ಯವಿದ್ದರೆ, ಸಂಪದ್ಭರಿತ ರಾಷ್ಟ್ರವಾದ ಅಮೆರಿಕದಲ್ಲಿ ಪ್ರತಿ ಒಬ್ಬರಿಗೆ 620 ಲೀಟರ್ ಲಭ್ಯವಿದೆ. ಹೀಗಾಗಲು ಅನೇಕ ಕಾರಣಗಳಿವೆ. ನೈಸರ್ಗಿಕ ಸಂಪನ್ಮೂಲಗಳ ಕೊರತೆ ಹೆಚ್ಚುತ್ತಿರುವ ಜನಸಂಖ್ಯೆಯೇ ಪ್ರಮುಖ ಕಾರಣವಾಗಿದೆ. ಇದಲ್ಲದೇ ಅಡತಡೆಯಿಲ್ಲದ ಅರಣ್ಯ ಹಾಗೂ ಹುಲ್ಲುಗಾವಲು ಪ್ರದೇಶಗಳ ನಾಶದಿಂದ ಮಣ್ಣು ಮತ್ತು ನೀರು ಕೊಚ್ಚಿಹೋಗುವ ಪ್ರಮಾಣ ಹೆಚ್ಚುತ್ತಿದೆ. ಈ ಕಾರಣಗಳಿಂದ ದೇಶದ ಒಂದು ಭಾಗದಲ್ಲಿ ಅತಿವೃಷ್ಟಿಯಾದರೆ ಇನ್ನೊಂದು ಕಡೆ ಭೀಕರ ಬರಗಾಲ ಪರಿಸ್ಥಿತಿಯಿರುತ್ತದೆ. ಈ ವರ್ಷದ ಮುಂಗಾರು ಮಳೆಯ ವಿಳಂಬ ಹಾಗೂ ವಿವಿಧ ರಾಜ್ಯಗಳಲ್ಲಿಯ ಬರಗಾಲ ಇದಕ್ಕೆಲ್ಲ ಒಂದು ನಿದರ್ಶನ.

ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಲು ಹಸಿರುಕ್ರಾಂತಿಯ ತಂತ್ರಜ್ಞಾನಗಳನ್ನು ಬಳಸಲಾಯಿತು ಅಂದರೆ ಅಧಿಕ ಇಳುವರಿ ನೀಡುವ ತಳಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಬಳಕೆಯಿಂದ ಭೂಮಿಯ ಫಲವತ್ತತೆ ಹಾಗೂ ನೀರಿನ ಗುಣಧರ್ಮಗಳ ಇಳಿಮುಖವಾಗಿದೆ. ಇದರ ಪರಿಣಾಮವಾಗಿ ವರ್ಷದಿಂದ ವರ್ಷಕ್ಕೆ ಬೆಳೆಗಳ ಉತ್ಪಾದನೆ ಕಡಿಮೆಯಾಗುತ್ತಿದೆ. ಮಣ್ಣು ಮತ್ತು ನೀರಿನ ಅಸಮರ್ಪಕ ನಿರ್ವಹಣೆ ಹಾಗೂ ಅಧಿಕ ರಾಸಾಯನಿಕಗಳ ಬಳಕೆ ಹಲವಾರು ದುಷ್ಪರಿಣಾಮಗಳಿಗೆ ದಾರಿ ಮಾಡಿಕೊಟ್ಟಿವೆ. ಅವ್ಯವಸ್ಥಿತ ನಿರ್ವಹಣೆಯ ದುಷ್ಪರಿಣಾಮಗಳು. ಫಲವತ್ತಾದ ಮಣ್ಣಿನ ಸಾರ ಹಾಗೂ ಮಣ್ಣಿನ ಫಲವತ್ತತೆಯಲ್ಲಿ ಇಳಿಮುಖ; ಹಳ್ಳ, ಕರೆ, ನದಿ ಮತ್ತು ಜಲಾಶಯಗಳ ಹೂಳುತುಂಬುವಿಕೆ ಮತ್ತು ನೆರೆಹಾವಳಿ ಹಾಗೂ ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಭೂಮಿ ಸವಳುಗುಟ್ಟುವಿಕೆ ಅಲ್ಲದೇ ಭೂಮಿಯ ಅಂತರ್ಜಲ ಮಟ್ಟದಲ್ಲಿ ಇಳಿತ.

ಮಣ್ಣಿನ ಸವಕಳಿಯ ಪ್ರಮಾಣ ಸಂಶೋಧನಾ ಕೇಂದ್ರಗಳಲ್ಲಿ ಕೈಗೊಂಡ ಪ್ರಯೋಗದ ಪ್ರಕಾರ, ಯಾವುದೇ ಸಂರಕ್ಷಣ ಪದ್ಧತಿ ಅನುಸರಿಸದೇ ಇರುವ ಭೂಮಿಯಲ್ಲಿ ಪ್ರತಿ ವರ್ಷ ಪ್ರತಿ ಹೆಕ್ಟೇರಿನಿಂದ 40ರಿಂದ 80 ಟನ್ ಮಣ್ಣು ಹರಿದು ಹೋಗುತ್ತವೆ. ಈ ಮಣ್ಣಿನ ಜೊತೆಗೆ ಅಮೂಲ್ಯವಾದ ಸಸ್ಯ ಪೋಷಕಾಂಶಗಳಗಳೂ ಪೋಲಾಗುತ್ತವೆ. ಸುಮಾರು 60 ಕಿ.ಗ್ರಾಂ ಸಾರಾಜನಕ, 60 ಕಿ.ಗ್ರಾಂ ರಂಜಕ, 580 ಕಿ.ಗ್ರಾಂ ಪೋಟ್ಯಾಷ್ ಮತ್ತು 3900 ಕಿ.ಗ್ರಾಂ ಸುಣ್ಣ ಹರಿದು ಹೋಗುವ ಮಣ್ಣಿನೊಂದಿಗೆ ನಷ್ಟವಾಗುತ್ತವೆ. ಈ ಹಿನ್ನೆಲೆಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಗಾಗಿ ಎರಡನೇ

ಹಸಿರುಕ್ರಾಂತಿಯನ್ನು ನಿರೀಕ್ಷಿಸುತ್ತಿರುವ ಒಣ ಬೇಸಾಯದಲ್ಲಿ ಅನುಸರಿಸಬೇಕಾದ ಮೂಲ ತತ್ವಗಳು ಹೀಗಿವೆ. ಮಣ್ಣು ಮತ್ತು ನೀರಿನ ಸವಕಳಿಯನ್ನು ನಿಯಂತ್ರಿಸುವುದು; ಸಾಧ್ಯವಾದಷ್ಟು ಮಳೆ ನೀರನ್ನು ಭೂಮಿಯಲ್ಲಿ ಶೇಖರಿಸುವುದು; ಭೂಮಿಯಲ್ಲಿ ಶೇಖರಿಸಿದ್ದ ನೀರು ಬೆಳೆಗಳಿಗೆ ಸದುಪಯೋಗವಾಗುವಂತಹ ಬೇಸಾಯ ಕ್ರಮಗಳನ್ನು ಅಳವಡಿಸುವುದು ಹಾಗೂ ಹೆಚ್ಚಾದ ಮಳೆ ನೀರನ್ನು ಕೃಷಿ ಹೊಂಡಗಳಲ್ಲಿ ಸಂಗ್ರಹಿಸಿ ಬೆಳೆಗಳಿಗೆ ನೀಡುವುದು.

ಈ ದಿಶೆಯಲ್ಲಿ ಅನುಸರಿಸಬೇಕಾದ ಪದ್ಧತಿಗಳು ಹೀಗಿವೆ. ಕೃಷಿ ಪದ್ಧತಿಗಳು, ಯಾಂತ್ರೀಕ ರಚನೆಗಳು ಹಾಗೂ ಅರಣ್ಯೀಕರಣ, ಕೃಷಿ ಪದ್ಧತಿಗಳಲ್ಲಿ ಅತೀ ಮಹತ್ವದ್ದು

ಸಮಪಾತಳಿ ಸಾಗುವಳಿ:

ಸಮಪಾತಳಿ ರೇಖೆಗಳಿಗೆ ಅನುಗುಣವಾಗಿ ಹೊಲದಲ್ಲಿ ಉಳುಮೆಯ ಬಿತ್ತನೆ ಹಾಗೂ ಅಂತರ ಬೇಸಾಯದ ಕ್ರಮಗಳನ್ನು ಅನುಸರಿಸುವುದಕ್ಕೆ ಸಮಪಾತಳಿ ಸಾಗುವಳಿ ಎನ್ನುತ್ತಾರೆ. ಈ ಪದ್ಧತಿಯ ಅಳವಡಿಕೆಯಿಂದ ಭೂಮಿಯಲ್ಲಿ ಹೆಚ್ಚಿಗೆ ನೀರು ಇಂಗಿ ಹಾಗೂ ಶೇಖರಣೆಯಾಗಿ ಭೂಮಿಯಲ್ಲಿಯ ತೇವಾಂಶವು ಹೆಚ್ಚಾಗುವುದರಿಂದ ಬೆಳೆಯ ಇಳುವರಿ ಕೂಡ ಹೆಚ್ಚಾಗುತ್ತದೆ.

ಕೃಷಿ ಪದ್ಧತಿ ಅಂತರ ಬೆಳೆ ಹಾಗೂ ಪಟ್ಟಿ ಬೇಸಾಯ:

ಈ ಪದ್ಧತಿಯಲ್ಲಿ ಏಕದಳ ಬೆಳೆಗಳಾದ ಜೋಳ, ಗೋಧಿ, ಮೆಕ್ಕೆಜೋಳ, ರಾಗಿ, ಸಜ್ಜೆ ಇತ್ಯಾಧಿ ಇವುಗಳನ್ನು ಅಂತರ ಬೆಳೆಗಳಾಗಿ (ಅಕ್ಕಡಿಯ ರೂಪದಲ್ಲಿ) ಹಾಗೂ ಬೇರೆ ಬೇರೆ ಪಟ್ಟಿಗಳಲ್ಲಿ ಬೆಳೆಯಬೇಕು. ಈ ಪದ್ಧತಿಗಳಿಂದ ಮಣ್ಣಿನ ಸವಕಳಿ ಕಡಿಮೆಯಾಗಿ ಫಲವತ್ತತೆ ಹೆಚ್ಚುತ್ತದೆ. ಕೃಷಿ ಪದ್ಧತಿಯೆಂದರೆ ಮೇಲ್ಮೈ ಹೊದಿಕೆ ಭೂಮಿಯ ಮೇಲೆ ಬೆಳೆಗಳ ಪಳಿಯುಳಿಕೆಗಳ ಹೊದಿಕೆಯಿಂದ ಮಣ್ಣು ಹಾಗೂ ನೀರಿನ ಸವಕಳಿಯನ್ನು ನಿಯಂತ್ರಿಸಬಹುದು.

ಕೃಷಿ ಪದ್ಧತಿಯೆಂದರೆ ಮಣ್ಣಿನ ಗುಣಧರ್ಮಗಳನ್ನು ಸುಧಾರಿಸುವುದು. ಸಾವಯವ ಗೊಬ್ಬರಗಳಾದ ದನದ ಸಗಣಿ ಗೊಬ್ಬರ, ಕಾಂಪೋಸ್ಟ್ ಹಾಗೂ ಎರೆಹುಳು ಗೊಬ್ಬರಗಳ ಬಳಕೆ. ಇವುಗಳನ್ನು ರಾಸಾಯನಿಕ ಗೊಬ್ಬರಗಳ ಜತೆಗೆ ಕಲಸಿ, ಬಿತ್ತುವುದಕ್ಕಿಂತ ಮುಂಚೆ ರೆಂಟೆ ಸಾಲುಗಳಲ್ಲಿ ಹಾಕುವುದರಿಂದ ಮಣ್ಣಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳು ಸುಧಾರಿಸುತ್ತವೆ. ಈ ಪದ್ಧತಿಯಿಂದ ತೊಗರಿಯ ಬೆಳೆಯಲ್ಲಿ ಇಳುವರಿ ಹೆಚ್ಚಾಗಿರುವುದನ್ನು ಕೃಷಿ ವಿಶ್ವವಿದ್ಯಾಲಯಗಳು ಸಾಬೀತುಪಡಿಸಿವೆ. ಇದೇ ರೀತಿಯಾಗಿ ಸಸ್ಬೇನಿಯಾ, ಸೆಣಬು, ಡೆಂಚಾ, ಹೊಂಗೆ, ಗ್ಲೀರಿಸಿಡಿಯಾ ಮುಂತಾದ ಹಸಿರೆಲೆ ಗೊಬ್ಬರಗಳ ಬಳಕೆಯಿಂದ ಮಣ್ಣು ಮತ್ತು ನೀರಿನ ಸಂರಕ್ಷಣೆಯಾಗಿ ಬೆಳೆಗಳ ಇಳುವರಿ ಹೆಚ್ಚಾದದ್ದು ದೃಢಪಟ್ಟಿದೆ.

ಯಾಂತ್ರಿಕ ರಚನೆಗಳು:

ಯಾಂತ್ರಿಕ ರಚನೆಗಳು ಮಳೆ ನೀರನ್ನು ಭೂಮಿಯಲ್ಲಿ ಇಂಗಲು ಮತ್ತು ಹರಿಯುವ ನೀರಿನ ವೇಗವನ್ನು ಕಡಿಮೆಮಾಡಲು ಸಹಾಯವಾಗುತ್ತವೆ. ಸಮಪಾತಳಿ ಬದುಗಳು 10 ರಿಂದ 15 ಮೀಟರಿಗೆ ಒಂದರಂತೆ ಸಮಪಾತಳಿ ರೇಖೆಯ ಗುಂಟ ಈ ಬದುಗಳನ್ನು ನಿರ್ಮಿಸಲಾಗುವುದು. ಇವುಗಳು ಭೂ ತೇವಾಂಶವನ್ನು ಹೆಚ್ಚಿಸಿ ಶೇ.25ರಷ್ಟು ಇಳುವರಿ ಹೆಚ್ಚಾಗಲು ಕಾರಣವಾಗುತ್ತವೆ.

ಇಳಿಜಾರು ಬದುಗಳು:

ಈ ಬದುಗಳನ್ನು ಸಹ ಸಮಪಾತಳಿ ರೇಖೆಯ ಗುಂಟ ನಿರ್ಮಿಸುತ್ತಾರೆ. ಆದರೆ ನಿರ್ಮಿಸುವಾಗ ಶೇ.1 ರಷ್ಟು ಇಳಿಜಾರು ನೀಡುವುದರಿಂದ ಹೆಚ್ಚಾದ ಮಳೆಯ ನೀರು ಹೊಲದಿಂದ ಹೊರಗೆ ಹೋಗಲು ಅನುಕೂಲವಾಗುವುದು.

ಜೀವಂತ ಬದುಗಳು:

ವಿವಿಧ ಜಾತಿಯ ಹುಲ್ಲುಗಳು ಮತ್ತು ಸುಬಾಬುಲ್ ಮುಂತಾದ ಸಸ್ಯಗಳನ್ನು ಬೆಳಸಿ ಜೀವಂತ ಬದುಗಳನ್ನು ನಿರ್ಮಿಸಬಹುದಾಗಿದೆ. ಇಂತಹ ಬದುಗಳು ಮಣ್ಣಿನ ಹಾಗೂ ನೀರಿನ ಸಂರಕ್ಷಣೆಯಲ್ಲಿ ಹೆಚ್ಚು ಉಪಯುಕ್ತವಾಗಿವೆ.

ಕೃಷಿ ಹೊಂಡಗಳು:

ಈ ಮೇಲೆ ತಿಳಿಸಿದ ಎಲ್ಲಾ ಪದ್ಧತಿಗಳನ್ನು ಕೈಕೊಂಡಾಗಲು ಸಹ ಶೇ. 25 ರಿಂದ 45 ರಷ್ಟು ಪ್ರಮಾಣದ ಮಳೆಯ ನೀರು ಹರಿದು ನಷ್ಟವಾಗುತ್ತದೆ. ಅಂದಾಜು ನಾಲ್ಕರಿಂದ ಐದು ಹೆಕ್ಟೇರಿಗೆ ಒಂದರಂತೆ 30 ಮೀಟರ್ ಉದ್ದ 10 ಮೀಟರ್ ಅಗಲ ಮತ್ತು ಮೂರು ಮೀಟರ್ ಆಳದ ಕೃಷಿ ಹೊಂಡ ನಿರ್ಮಿಸುವುದು ಲಾಭದಾಯಕ ಎಂದು ತಿಳಿದು ಬಂದಿದೆ.

ಈ ನಿಟ್ಟಿನಲ್ಲಿ ಸರಕಾರದ ಪ್ರಯತ್ನಗಳು ಉತ್ತೇಜನಕಾರಿಯಾವೆ. ಕಳೆದ ಎರಡು ದಶಕಗಳಿಂದ ಅನುಷ್ಠಾನಗೊಳ್ಳುತ್ತಿರುವ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ಒಣಬೇಸಾಯ ಅಭಿವೃದ್ಧಿ ಯೋಜನೆ, ಕೃಷಿ ಭಾಗ್ಯ, ಕೃಷಿ ಸಿಂಚನ, ಭೂ ಚೇತನ, ಭೂ ಸಮೃದಿ ಹಾಗೂ ಸಾಮಾಜಿಕ ಅರಣ್ಯೀಕರಣ ಮುಂತಾದ ಸರಕಾರದ ಯೋಜನೆಗಳು ಉತ್ತಮ ಫಲಿತಾಂಶವನ್ನು ನೀಡುತ್ತಿವೆ.

ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿರುವ ಸುಸ್ಥಿರ ಕೃಷಿ ಪದ್ಧತಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಗಾಗಿ ಇಳುವರಿಯ ಪ್ರಮಾಣವು ಒಂದೇ ತೆರನಾಗಿ ಬಹಳ ವರ್ಷಗಳವರೆಗೆ ಪಡೆಯಬಹುದು. ಸುಸ್ಥಿರ ಕೃಷಿಯ ತತ್ವಗಳನ್ನು ನಮ್ಮ ರೈತರು ಪುರಾತನ ಕಾಲದಿಂದಲೂ ಅನುಸರಿಸುತ್ತಾ ಬಂದಿದ್ದಾರೆ. ಇದರಲ್ಲಿ ಪ್ರಮುಖವಾಗಿ ಎಲ್ಲಾ ರೈತರೂ ಬೆಳೆಯುತ್ತಿದ್ದರು ಹಾಗೂ ಸಾವಯವಗಳನ್ನು ಭೂಮಿಗೆ ಯಥೇಚ್ಚವಾಗಿ ಹಾಕುತ್ತಿದ್ದರು. ಆದರೆ ಈಗ ರೈತರು ಈ ಕ್ರಮಗಳನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಇದರಿಂದ ಭೂಮಿಯ ಫಲವತ್ತತೆ ಕುಂಠಿತಗೊಳ್ಳುತ್ತಾ ನಡೆದಿದೆ. ಸುಸ್ಥಿರ ಕೃಷಿಯಲ್ಲಿ ಸಾವಯವಗಳನ್ನು ಬಳಸಿ ಚೀನಾ ದೇಶ ಗಮಾರ್ನಾಹ ಪ್ರಗತಿ ಸಾಧಿಸಿದೆ. ಚೀನಾ ದೇಶ ಕೇವಲ 125 ಮಿಲಿಯನ್ ಹೇಕ್ಟರ ಪ್ರದೇಶದಿಂದ 400 ಮಿಲಿಯನ್ ಟನ್ ಆಹಾರ ಉತ್ಪಾದಿಸುತ್ತಿದ್ದು ಅದಕ್ಕೆ ಹೋಲಿಸಿದಲ್ಲಿ ಭಾರತದ ಉತ್ಪನ್ನ ಕೇವಲ 275 ಮಿಲಯನ್ ಟನ್ ಅದೂ ಕೂಡ 142 ಮಿಲಿಯನ್ ಹೆಕ್ಟೇರು ಪ್ರದೇಶದಲ್ಲಿ ಬೆಳೆಗಳ ಕೊಯಿಲು (ಅವಶೇಷ) ಗಳನ್ನು ಆರಿಸಿ ಸುಟ್ಟು ಹಾಕದೇ ಹೊಲದಲ್ಲಿಯೇ ಮುಗ್ಗು ಹೊಡೆಯುವುದರಿಂದ ಭೂಮಿಯ ಗುಣಧರ್ಮಗಳು ಗಣನೀಯವಾಗಿ ಉತ್ತಮಗೊಂಡು ಉತ್ಪಾದನೆ ಹೆಚ್ಚಾಗುವುದು.

ಅಮೇರಿಕದಲ್ಲಿ ಬೆಳೆ ಕೊಯಿಲುಗಳನ್ನು ಭೂಮಿಯ ಮೇಲೆ ಹಾಗೇ ಬಿಡುತ್ತಾರೆ. ಈ ಪದ್ಧತಿಗೆ ಸಂರಕ್ಷಿತ ಉಳುಮೆ ಅನ್ನುತ್ತಾರೆ. ಇಂಥ ಉಪಯುಕ್ತ ತಂತ್ರಜ್ಞಾನಗಳನ್ನು ನಮ್ಮ ದೇಶದಲ್ಲಿಯೂ ಕೂಡ ಅಳವಡಿಸಿ ಇಳುವರಿಯನ್ನು ಹೆಚ್ಚಿಸಲು ಸಾಧ್ಯ. ಈ ದಿಶೆಯಲ್ಲಿ ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನೆಯ ಪ್ರಕಾರ ಹತ್ತಿ ಕಟ್ಟಿಗೆ, ಸಣಬು ಮುಂತಾದವುಗಳನ್ನು, ಮಣ್ಣಿನಲ್ಲಿ ಮುಗ್ಗು ಹೊಡೆಯುವುದರಿಂದ ಬೆಳೆಗಳ ಇಳುವರಿಯಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದೆ. ಇದೇ ರೀತಿಯಾಗಿ ಕಬ್ಬಿನ ರವದಿ (ಸಿಪ್ಪೆ)ಯನ್ನು ಸುಡದೇ ಭೂಮಿಯಲ್ಲಿ ಹಾಗೇ ಬೀಡುವುದು ಉತ್ತಮ ಪದ್ಧತಿಯಾಗಿದೆ. ಇಂತಹ ಹಲವಾರು ಪದ್ಧತಿಗಳನ್ನು ನಮ್ಮ ರಾಜ್ಯದ ಪ್ರಗತಿಪರ ರೈತರು ಈಗಾಗಲೇ ಅನುಸರಿಸಿ ಸುಸ್ಥಿರ ಕೃಷಿಯತ್ತ ದಿಟ್ಟ ಹೆಜ್ಜೆಯನ್ನಿಡುತ್ತಿದ್ದಾರೆ.

ಸವಳು ಭೂಮಿಯ ಸಮಸ್ಯೆ ಅಧಿಕ ನೀರಿನ ಬಳಕೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಜಲಾಶಯಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಸಾವಿರಾರು ಹೆಕ್ಟೇರ ಸವಳು ಭೂಮಿ ನಿರ್ಮಾಣವಾಗುತ್ತದೆ. ಅಧಿಕ ನೀರಿನಿಂದ ಭೂಮಿಯಲ್ಲಿನ ಹವೆಯ ಪ್ರಮಾಣ ಕಡಿಮೆಯಾಗಿ ಬೆಳೆಗಳು ಕುಂಠಿತವಾಗಿ ಇಳುವರಿಯ ಪ್ರಮಾಣ ಇಳಿಮುಖವಾಗುತ್ತದೆ.

ಈ ಸಮಸ್ಯೆಗಳಿಗೆ ಪರಿಹಾರಗಳೆಂದರೆ ಮಿತವಾದ ನೀರಿನ ಬಳಕೆ, ಬಸಿಗಾಲುವೆಗಳ ನಿರ್ಮಾಣ, ಹಸಿರೆಲೆ ಗೊಬ್ಬರಗಳು ಹಾಗೂ ಜಿಪ್ಸಮ್ ಬಳಕೆ, ಸಮಸ್ಯೆಯು ಉಂಟಾಗದಂತೆ ನೋಡಿಕೊಳ್ಳುವುದು ಬಹಳ ಸೂಕ್ತ. ಮಿತವಾದ ನೀರಿನ ಬಳಕೆಯಿಂದ ಶೇ.50 ರಷ್ಟು ನೀರಿನ ಉಳಿತಾಯವಾಗುವುದಲ್ಲದೇ ಬೆಳೆಗಳ ಇಳುವರಿಯಲ್ಲಿ ಶೇ.30 ರಿಂದ 60 ರಷ್ಟು ಹೆಚ್ಚಳವಾಗುವುದು. ಮಿತವಾದ ನೀರಿನ ಬಳಕೆಯು ತುಂತುರು ಹಾಗೂ ಹನಿ ನೀರಾವರಿ ಪದ್ಧತಿಗಳಿಂದ ಸಾಧ್ಯ. ಇದರಿಂದ ದಿನ ನಿತ್ಯವೂ ಅನುಭವಿಸುವ ನೀರಿನ ಪದ್ಧತಿಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ. ಈ ದಿಸೆಯಲ್ಲಿ ನಾವೆಲ್ಲರೂ ಚಿಂತನೆ

ಹಾಗೂ ಪ್ರಯತ್ನಮಾಡುವ ಅವಶ್ಯಕತೆಯಿದೆ. ಮಣ್ಣು ಮತ್ತು ನೀರು ಈ ಸಂಪನ್ಮೂಲಗಳ ಸಮರ್ಪಕ ಬಳಕೆಯಿಂದ ಬೆಳೆಗಳ ಉತ್ಪಾದನೆ ಹೆಚ್ಚಿಸಲು ಸಾಧ್ಯ ಅಲ್ಲದೇ, ಭೂಮಿಯ ಉತ್ಪಾದಕತೆಯನ್ನು ಕೂಡ ನಿರಂತರವಾಗಿ ಕಾಪಾಡಬಹುದು. ಈ ದಿಶೆಯಲ್ಲಿ ರೈತ ಸಮುದಾಯವು ದೂರದೃಷ್ಠಿಯುಳ್ಳವರಾಗಿ ಸಂಘಟನಾತ್ಮಕ ಪ್ರಯತ್ನವನ್ನು ಮಾಡಿದಲ್ಲಿ ವಿಶಾಲ ವ್ಯಾಪ್ತಿಯುಳ್ಳ ಈ ಕಾರ್ಯ ಸಫಲವಾಗುವುದು. ಆಗ ಮಾತ್ರ ಮಣ್ಣು ಮತ್ತು ನೀರಿನ ಸಂರಕ್ಷಣೆ ಸಾಧ್ಯವಾಗಿ ಮುಂದಿನ ಪೀಳಿಗೆಗೆ ಈ ಸಂಪನ್ಮೂಲಗಳು ಸುಸ್ಥಿತಿಯಲ್ಲಿ ದೊರಕುತ್ತವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಮಂಜಸ ಗಾದೆ ಮಾತಿದೆ, ಭೂಮಿಯನ್ನು ನಾವು ನಮ್ಮ ಪೂರ್ವಜರಿಂದ ಪಡೆದಿಲ್ಲ, ಇದನ್ನು ನಮ್ಮ ಮುಂದಿನ ಪೀಳಿಗೆಯಿಂದ ಎರವಲಾಗಿ ಪಡೆದಿದ್ದೇವೆ. ಈ ಮಾತನ್ನು ನಾವು ಎಂದಿಗೂ ಮರೆಯಬಾರದು.

ಕೃಪೆ: ಕೃಷಿ ಮುನ್ನಡೆ

✍ ಹರೀಶ ಎನ್. ಮತ್ತು ವಿಜಯಲಕ್ಷ್ಮಿ ಸೋಮನಟ್ಟಿ
ಕೃಷಿ ವಿಸ್ತರಣಾ ಶಿಕ್ಷಣ ವಿಭಾಗ, ಎಎನ್‌ಜಿಆರ್‌ಯು, ಬಾಪಟ್ಲ – 522 101

ರೇಷ್ಮೆ ಕೃಷಿ ಅನೇಕರಿಗೆ ಮುಖ್ಯ ಕಸುಬಾಗಿದೆ. ಸೂಕ್ಷ್ಮ ಹುಳುಗಳೊಂದಿಗೆ, ತಿಂಗಳುಗಟ್ಟಲೆ ಕಣ್ಣಲ್ಲಿ ಕಣ್ಣಿಟ್ಟು ಸಾಕಾಣಿಕೆ ಮಾಡಿದ ರೇಷ್ಮೆ ಕೃಷಿಕರಿಗೆ ಶ್ರಮಕ್ಕೆ ತಕ್ಕಂತೆ ಆದಾಯ ಬರಬೇಕು ಮತ್ತು ಉತ್ಪನ್ನಗಳಿಗೆ ಬೆಲೆ ಬರಬೇಕು. ಇದುವರೆಗೂ ಇದ್ದ ಸಾಂಪ್ರದಾಯಿಕ ಮಾರಾಟ ವ್ಯವಸ್ಥೆಗೆ ಪರ್ಯಾಯವಾಗಿ ನೂತನ ವ್ಯವಸ್ಥೆಗಳು ಇತ್ತೀಚೆಗೆ ಚಾಲ್ತಿಯಲ್ಲಿ ಬರುತ್ತಿರುವುದು ಆಶಾದಾಯಕ. ಮೊಬೈಲ್ ಬಳಸುವ ರೇಷ್ಮೆ ಬೇಸಾಯಗಾರರು ಅಂತರ್ಜಾಲದ ಸಹಾಯದಿಂದ ಮಾರಾಟದಲ್ಲಿ ಯಶಸ್ಸು ಕಾಣಬಹುದು.

ರೇಷ್ಮೆ ಗೂಡಿಗೆ ಡಿಜಿಟಲ್ ಮಾರುಕಟ್ಟೆ!

ಭಾರತವು ಒಂದು ಕೃಷಿ ಪ್ರಧಾನ ದೇಶವಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಕೃಷಿಯು ಆದಾಯವಲ್ಲದ ಕಸುಬು ಎಂದು ಭಾವಿಸಿ ದಿನೇ ದಿನೇ ರೈತ ಸಮುದಾಯವು ಟಾಟಾ ಬಾಯ್ ಬಾಯ್ ಹೇಳುತ್ತಿದ್ದಾರೆ. ಅದರಲ್ಲೂ ಗ್ರಾಮೀಣ ಯುವ ಸಮುದಾಯವನ್ನು ಕೃಷಿ ಕ್ಷೇತ್ರಕ್ಕೆ ಸೆಳೆಯಲು ಸರ್ಕಾರಗಳು ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಕೃಷಿ ಕ್ಷೇತ್ರವನ್ನು ಆದಾಯ ಕ್ಷೇತ್ರವನ್ನಾಗಿ ಪರಿವರ್ತಿಸಲು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಈ ಮೇಲಿನ ಸವಾಲುಗಳನ್ನು ಮೆಟ್ಟಿ ನಿಲ್ಲಬಹುದು. ಇದರಿಂದ ಬೆಳೆ ವೈವಿಧ್ಯ ಸೇರಿದಂತೆ, ರೇಷ್ಮೆ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಮೊಲ ಸಾಕಾಣಿಕೆ, ಮಣ್ಣು ಮತ್ತು ನೀರು ಸಂರಕ್ಷಣೆ, ಇತ್ಯಾದಿ ಉಪಕಸುಬುಗಳನ್ನು ಅಳವಡಿಸಿಕೊಂಡಲ್ಲಿ, ವರ್ಷ ಪೂರ್ತಿ ನಿರಂತರ ಆದಾಯವನ್ನು ಪಡೆಯಬಹುದು.

ಸಮಗ್ರ ಕೃಷಿ ಪದ್ಧತಿಯಲ್ಲಿ ರೇಷ್ಮೆ ಕೃಷಿಯು ಒಂದು ಉತ್ತಮ ಆದಾಯ ತರುವ ಕಸುಬಾಗಿದೆ. ಕರ್ನಾಟಕದಲ್ಲಿ ಲಕ್ಷಾಂತರ ರೈತರು ಮುಖ್ಯ ಕಸುಬಾಗಿ ಪರಿವರ್ತಿಸಿಕೊಂಡಿದ್ದಾರೆ. ರಾಜ್ಯದಲ್ಲಿ 2017–19 ನೇ ಸಾಲಿನಲ್ಲಿ 7670.85 ಮಿಲಿಯನ್ ಟನ್ ಮಿಶ್ರತಳಿ ರೇಷ್ಮೆ ಹಾಗೂ 1650 ಮಿಲಿಯನ್ ಟನ್ ದ್ವಿತಳಿ ರೇಷ್ಮೆ ಉತ್ಪಾದಿಸಲಾಗಿದೆ. ರೇಷ್ಮೆ ಉತ್ಪಾದನೆ ಎಷ್ಟು ಮುಖ್ಯವೋ, ಹಣ ಗಳಿಸುವ ಮಾರುಕಟ್ಟೆ ವ್ಯವಸ್ಥೆ ಕೂಡ ಬಹಳ ಮುಖ್ಯ. ಸರ್ಕಾರಿ ರೇಷ್ಮೆ ಮಾರುಕಟ್ಟೆಯ ಬಹಿರಂಗ ಹರಾಜು ಪದ್ಧತಿಯ ವೈಫಲ್ಯಗಳನ್ನು ಹೊಗಲಾಡಿಸಲು ಹಾಗೂ ವ್ಯವಹಾರಗಳಲ್ಲಿ ಪಾರದರ್ಶಕತೆ ಮತ್ತು ವೈಜ್ಞಾನಿಕ ಬೆಲೆ ನಿರ್ಣಯ ಮಾಡಿ ರೈತರಲ್ಲಿ ಉತ್ತಮ ಆರ್ಥಿಕವಾಗಿ ಸದೃಢರನ್ನಾಗಿಸಲು ಕರ್ನಾಟಕ ಸರ್ಕಾರ ಹಾಗೂ ರೇಷ್ಮೆ ಇಲಾಖೆಯು 2015–2016 ನೇ ಸಾಲಿನಲ್ಲಿ ಇ–ಹರಾಜು ಪದ್ಧತಿಯನ್ನು ಸರ್ಕಾರಿ ರೇಷ್ಮೆ ಮಾರುಕಟ್ಟೆ, ರಾಮನಗರದಲ್ಲಿ ಪ್ರಯೋಗಿಕವಾಗಿ ಅನುಷ್ಠಾನಗೊಳಿಸಿ, ಯಶಸ್ವಿಯಾದ ನಂತರ ರಾಜ್ಯದ ರೇಷ್ಮೆ ಗೂಡು ಮಾರುಕಟ್ಟೆಗಳಾದ ಶಿಡ್ಲಘಟ್ಟ, ಕೊಳ್ಳೆಗಾಲ, ಎಚ್. ಕ್ರಾಸ್, ವಿಜಯಪುರ, ಕೋಲಾರ ಇತ್ಯಾದಿ. ಇ–ಹರಾಜು ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದೆ.

ಬಹಿರಂಗ ಹರಾಜು ಪದ್ಧತಿ

- ಜಾಲರಿಗಳನ್ನು ಖಾಯ್ದಿರಿಸಲು ಒಂದೆರಡು ದಿನ ಮುಂಚಿತವಾಗಿ ಬರಬೇಕಾಗಿದ್ದು, ಇದಕ್ಕಾಗಿ ರೈತರು ಹೆಚ್ಚಿನ ಸಮಯ ವ್ಯರ್ಥವಾಗುತ್ತಿತ್ತು.
- ಎಲ್ಲಾ ರೈತರಿಗೆ ಸಮವಾಗಿ ಜಾಲರಿಗಳು ಸಮನಾಗಿ ಸಿಗದಿರುವುದು.

- ರೇಷ್ಮೆ ಗೂಡು ಹರಾಜು ಸಮಯದಲ್ಲಿ ರೀಲರ್‌ಗಳ ಹಾವಳಿಯಿಂದ ರೈತರಲ್ಲಿ ನಿರ್ಣಯವಾಗುತ್ತಿರುವ ಬೆಲೆಯಲ್ಲಿ ಗೊಂದಲ
- ಹರಾಜು ನಂತರ ಪಾಸ್ ಪುಸ್ತಕ ನೊಂದಣಿಗೆ, ರೇಷ್ಮೆ ಅಧಿಕಾರಿಗಳು ಪ್ರತಿ ರೈತನ ಬಳಿ ರೂ. 20 ರಂತೆ ಹಣ ಪಡೆಯುವುದು.
- ರೈತರಿಗೆ ಹಣಪಾವತಿ ಮಾಡುವಾಗ, ಚಿಲ್ಲರೆಯನ್ನು ತಮ್ಮಲ್ಲೇ ಇಟ್ಟುಕೊಳ್ಳುವುದು.
- ರೈತರಿಗೆ ಮಾರುಕಟ್ಟೆಯ ಆವಕ ಮತ್ತು ಬೆಲೆ ಮಾಹಿತಿ ಇಲ್ಲದಿರುವುದು.
- ರೀಲರಗಳು 10–15 ದಿನ ತಡವಾಗಿ ಹಣವನ್ನು ರೈತರಿಗೆ ಪಾವತಿಸುವುದು.
- ಹೆಚ್ಚಾಗಿ ನಗದು ಹಣ ಪಾವತಿಸುವುದರಿಂದ, ರೀಲರ್‌ಗಳು ರೈತರ ಹಣದಲ್ಲಿ ಕಡಿತಗೊಳಿಸುವುದು.

ಎಲ್ಲಾ ವೈಫಲ್ಯಗಳನ್ನು ಸರಿದೂಗಿಸಲು ರೇಷ್ಮೆ ಗೂಡು ಮಾರುಕಟ್ಟೆಗಳಿಗೆ ಡಿಜಿಟಲ್ ಸ್ಪರ್ಶ ನೀಡಿದೆ.

ಇ–ಹರಾಜು ವ್ಯವಸ್ಥೆಯ ಕಾರ್ಯ ವೈಖರಿ

1. ಮುಖ್ಯ ದ್ವಾರ ನೊಂದಣಿ

- ರೇಷ್ಮೆ ಗೂಡು ಮುಖ್ಯ ದ್ವಾರಕ್ಕೆ ತರುತ್ತಿದ್ದಂತೆ, ರೈತರ ಹೆಸರು, ವಿಳಾಸ, ರೇಷ್ಮೆ ತಳಿ, ರೇಷ್ಮೆ ಗೂಡಿನ ಅಂದಾಜು ತೂಕ ಇತ್ಯಾದಿ ಮಾಹಿತಿಗಳನ್ನು ಕಛೇರಿಯಲ್ಲಿ ನೋಂದಣಿ ಮಾಡಿಸತಕ್ಕದ್ದು.
- "ಮೊದಲು ಬಂದವರಿಗೆ ಆದ್ಯತೆ" ಮೇರೆಗೆ ಕ್ರಮಾನುಸಾರವಾಗಿ 100 ಕಿ.ಗ್ರಾಂ ಅಥವಾ 50 ಕಿ.ಗ್ರಾಂ ಗೂಡು ತುಂಬಬಹುದಾದ ಜಾಲರಿಗಳನ್ನು ಹಂಚಿಕೆ ಮಾಡುತ್ತಾರೆ.
- ಹರಾಜು ಚೀಟಿ ಮುದ್ರಣದಲ್ಲಿ ರೈತನ ಹೆಸರು, ರೇಷ್ಮೆ ತಳಿ, ಜಾಲರಿ/ಲಾಟ್ ಸಂಖ್ಯೆ ಮತ್ತು ಗೊಡೌನ್ ಹೆಸರು ನಮೂದಿಸಿರುತ್ತಾರೆ.

2. ಗೂಡು ಹರಡುವಿಕೆ:

ರೈತರು ತಮಗೆ ಹಂಚಿಕೆಯಾಗಿರುವ ಲಾಟ್ ಸಂಖ್ಯೆಯ ಜಾಲರಿಯಲ್ಲಿ ರೇಷ್ಮೆಗೂಡನ್ನು ಹರಡಬೇಕು.

3. ರೀಲರ್‌ಗಳ ಆಗಮನ

- ಮುಂಜಾನೆ 9:00 ಘಂಟೆಗೆ ರೀಲರ್‌ಗಳು ರೇಷ್ಮೆ ಗೂಡು ಮಾರುಕಟ್ಟೆಯ ಕಛೇರಿಯಲ್ಲಿ ರೂ. 2000/– ಠೇವಣಿ ಮಾಡಬೇಕು.
- ನಂತರ ಮೊಬೈಲ್ ಅಪ್ಲಿಕೇಶನ್ ಅಕ್ಟಿವೇಟ್ ಮಾಡಿಕೊಡಲಾಗುವುದು.
- ರೀಲರ್‌ಗಳು ಮೊದಲ ಇ–ಹರಾಜು ಪ್ರಕ್ರಿಯೆ ಪ್ರಾರಂಭವಾಗುವ ಮುಂಚೆಯೇ, ತಮಗೆ ಬೇಕಾದ ರೇಷ್ಮೆ ಗೂಡಿನ ಲಾಟ್/ ಜಾಲರಿ ಬಳಿ ಬಂದು ಗುಣಮಟ್ಟವನ್ನು ಪರೀಕ್ಷಿಸುತ್ತಾರೆ.



4. ಇ–ಹರಾಜು–1

- ಇ–ಹರಾಜು–1 ಪ್ರಕ್ರಿಯೆ ಪ್ರಾರಂಭವಾಗುವ ಮುನ್ನ ಎಚ್ಚರಿಕೆ ಘಂಟೆ (ಸೈರನ್) ಬಾರಿಸುತ್ತಾರೆ.
- ಮೊದಲನೆ ಹರಾಜು ಸರಿಯಾಗಿ ಬೆಳಗ್ಗೆ 10.20ಕ್ಕೆ ಪ್ರಾರಂಭವಾಗಿ 10.45 ಕ್ಕೆ ಮುಕ್ತಾಯವಾಗುತ್ತದೆ.
- ರೈತರು ಮೊದಲನೆ ಹರಾಜು ಸಮಯದಲ್ಲಿ ಹರಾಜು ಚೀಟಿಯನ್ನು ಜಾಲರಿಯಲ್ಲಿರುವ ರೇಷ್ಮೆ ಗೂಡಿನ ಮಧ್ಯದಲ್ಲಿಡಬೇಕು.
- ರೀಲರ್‌ಗಳು ರೇಷ್ಮೆ ಗೂಡು ಮಾರುಕಟ್ಟೆಯ ವೈಫೈ ಅನ್ನು ಉಪಯೋಗಿಸುಕೊಂಡು ಮೊಬೈಲ್ ಆಫ್ ತೆರೆದು, ತಮಗೆ ಬೇಕಾದ ಲಾಟ್ ಮತ್ತು ಗುಣಮಟ್ಟಕ್ಕನುಸಾರವಾಗಿ ಬೆಲೆ ನಿರ್ಧಾರ ಮಾಡುತ್ತಾರೆ.
- ರೈತರಿಗೆ ತಮ್ಮ ರೇಷ್ಮೆ ಗೂಡಿನ ಲಾಟ್ /ಜಾಲರಿಯ ಸಂಖ್ಯೆ ಅನುಸಾರವಾಗಿ ನಿರ್ಣಯವಾಗುತ್ತಿರುವ ಬೆಲೆಯನ್ನು ತಿಳಿಯಲು ಡಿಜಿಟಲ್ ಪರದೆಯ ಮೂಲಕ ನೋಡಬಹುದು.
- ರೀಲರ್ ಬೆಲೆ ನಿಗದಿ ಮಾಡುವ ಪ್ರಕ್ರಿಯ ಮೊಬೈಲ್‌ನಲ್ಲಿ ಲಾಟ್ ಸಂಖ್ಯೆ ಮತ್ತು ದರವನ್ನು ನಮೂದಿಸಿ ಅಪ್ಲೋಡ್ ಮಾಡಬೇಕು.
- ಹಾಗೆಯೇ ಮೊಬೈಲ್‌ನಲ್ಲಿ ಹಸಿರು ಬಣ್ಣ ಬಂದಲ್ಲಿ, ಆ ಲಾಟ್ ಗೂಡು ಆತನ ಪಾಲಾಗಿದೆ ಎಂದರ್ಥ ಮತ್ತು ಕೆಂಪು ಬಣ್ಣ ಬಂದಲ್ಲಿ, ಆ ಲಾಟ್‌ನ್ನು ಕೊಳ್ಳಲು ಸರ್ಧೆ ಇದೆ ಎಂದರ್ಥ.

5. ಮೊದಲು ಹರಾಜು ನಂತರ ಮತ್ತು ಎರಡನೇ ಹರಾಜು ನಡುವೆ

- ಮೊದಲನೆ ಹರಾಜು ನಂತರ ಮಾರುಕಟ್ಟೆ ಅಧಿಕಾರಿಗಳು ರೈತರ ಜಾಲರಿ ಬಳಿ ಬಂದು ಹರಾಜಿನಲ್ಲಿ ನಿರ್ಣಯವಾದ ಬೆಲೆಯ ಸ್ವೀಕಾರ ಅಥವಾ ತಿರಸ್ಕರಿಸಿ, ಎರಡನೇ ಹರಾಜಿಗೆ ಹೋಗುತ್ತಾರೆ ಎಂಬುದನ್ನು ಖಾತರಿ ಮಾಡುಕೊಳ್ಳುತ್ತಾರೆ.

6. ಇ–ಹರಾಜು–2

- ಇ–ಹರಾಜು–2 ಬೆಳಗ್ಗೆ 11:15 ಘಂಟೆಗೆ ಪ್ರಾರಂಭವಾಗುತ್ತದೆ.
- ಇ–ಹರಾಜು–2 ಯಲ್ಲಿ ನಿರ್ಣಯವಾದ ರೇಷ್ಮೆಗೂಡಿನ ಬೆಲೆಯು ಅಂತಿಮವಾಗಿರುತ್ತದೆ.
- ಎರಡನೇ ಹರಾಜಿನಲ್ಲೂ ಸಹ ಮೊದಲನೇ ಹರಾಜಿನ ಪ್ರಕ್ರಿಯೇ ನಡೆಯುತ್ತದೆ.

7. ಇ–ತೂಕ

- ಇ–ತೂಕ ಮಾಡಲು ರೇಷ್ಮೆ ಗೂಡನ್ನು ತುಂಬಲು ಪ್ಲಾಸ್ಟಿಕ್ ಬುಟ್ಟಿಗಳನ್ನು ಉಪಯೋಗಿಸುತ್ತಾರೆ.
- ಒಂದು ಪ್ಲಾಸ್ಟಿಕ್ ಬುಟ್ಟಿ 9–10 ಕಿ.ಗ್ರಾಂ ತೂಕ ತುಂಬಬಹುದು.
- ಇ–ತೂಕದ ನಂತರ, ಮೂರು ಇ–ತೂಕದ ರಶೀದಿಗಳನ್ನು ರೈತನಿಗೆ, ರೀಲರ್‌ಗೆ ಮತ್ತು ಮಾರುಕಟ್ಟೆಗೆ ನೀಡುತ್ತಾರೆ.
- ರೈತರು ಮತ್ತು ರೀಲರ್‌ಗಳು ಕ್ರಮವಾಗಿ ಶೇ. 1 ಹಾಗೂ 2 ನಂತೆ ಮಾರುಕಟ್ಟೆ ಶುಲ್ಕ ಪಾವತಿಸಬೇಕು.

8. ಡಿಜಿಟಲ್ ಹಣಪಾವತಿ

- ರೇಷ್ಮೆ ಗೂಡು ಮಾರಾಟದಿಂದ ಸಂಪಾದನೆ ಮಾಡಿದ ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಡಿಜಿಟಲ್ ಪಾವತಿ ಮಾಡುತ್ತಿದ್ದಾರೆ.

ರೇಷ್ಮೆಯಲ್ಲಿ ಇ–ಹರಾಜು ವ್ಯವಸ್ಥೆ ಯಶಸ್ವಿಯಾಗಿ ಅತಿ ಸಣ್ಣ ಮತ್ತು ಸಣ್ಣ ರೈತರನ್ನು ರೇಷ್ಮೆ ಪ್ರಪಂಚಕ್ಕೆ ಬರಮಾಡಿಕೊಳ್ಳುತ್ತಿದೆ. ಕರ್ನಾಟಕ ಸರ್ಕಾರವು ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಇ–ಹರಾಜು ಪದ್ಧತಿಯನ್ನು ಅಳವಡಿಸಿ, ಇತರ ರಾಜ್ಯಗಳಿಗೆ ಮಾದರಿಯಾಗಿದೆ. ರೇಷ್ಮೆ ಕೃಷಿಯನ್ನು ಅಳವಡಿಸಿಕೊಂಡು ಕೃಷಿಯಲ್ಲಿನ ಸವಾಲುಗಳನ್ನು ಹೋಗಲಾಡಿಸುವುದರೊಂದಿಗೆ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿ ಉತ್ತಮಗೊಳಿಸಿ, ಆತ್ಮಹತ್ಯೆಗಳನ್ನು ತಡೆಯಬಹುದು. ಮುಂದಿನ ದಿನಗಳಲ್ಲಿ ಸರ್ಕಾರಗಳು, ಕೃಷಿ ವಿಶ್ವವಿದ್ಯಾಲಯಗಳು, ವಿಸ್ತರಣಾ ಸಂಸ್ಥೆಗಳು ಇನ್ನೂ ಹೆಚ್ಚು ರೈತ ಸ್ನೇಹಿ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಿದೆ.

ಕೃಪೆ: ಕೃಷಿ ಮುನ್ನಡೆ

✍ ಪವನ ಶಿಂಧೆ ಮತ್ತು ಹರ್ಷವರ್ಧನ ಹಿಳ್ಳಿ
ಐಸಿಎಆರ್–ಐಐಪಿಆರ್, ಆರ್‌ಆರ್‌ಸಿ, ಧಾರವಾಡ – 580 005

ಬೀಜ ಗ್ರಾಮ ಯೋಜನೆ: ವಿನೂತನ ಪರಿಕಲ್ಪನೆ

ದೇಶದ ಒಕ್ಕಲಿಗರಿಗೆ ಕಾಡುವ ಪ್ರಮುಖ ಸಮಸ್ಯೆ ಎಂದರೆ ಉತ್ತಮ ಬೀಜಗಳದ್ದು. ಶ್ರೇಷ್ಠ ಗುಣಮಟ್ಟದ ಬೀಜಗಳೇ ರೈತರ ಆರ್ಥಿಕತೆಯನ್ನು ನಿರ್ಧರಿಸುತ್ತವೆ. ಕಾಲದಿಂದ ಕಾಲಕ್ಕೆ ಅನುಭವದ ಮೇಲೆ ಕೃಷಿ ತಜ್ಞರು ಈ ದಿಶೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುತ್ತಿದ್ದಾರೆ. ಇದೀಗ ಬೀಜ ಗ್ರಾಮ ಯೋಜನೆಯ ಸರದಿ. ಏನೀ 'ಬೀಜ ಗ್ರಾಮ ಯೋಜನೆ' ಪರಿಕಲ್ಪನೆ ? ಕೃಷಿಕರಿಗೆ ಹೇಗೆ ನೆರವಾಗುತ್ತದೆ ಎಂಬ ಪ್ರಶ್ನೆಗಳಿಗೆ ಈ ಲೇಖನ ಉತ್ತರ ನೀಡುತ್ತದೆ.

ಬೀಜವು ಕೃಷಿಯ ಪ್ರಾರಂಭದ ಹಂತವಾಗಿದೆ ಮತ್ತು ಇತರ ಒಳಹರಿವಿನ ಅಂತಿಮ ಉತ್ಪಾದಕತೆಯನ್ನು ನಿರ್ದೇಶಿಸುತ್ತದೆ. ಕೇವಲ ಉತ್ತಮ ಗುಣಮಟ್ಟದ ಬೀಜದಿಂದ ಶೇ. 15–20 ರಷ್ಟು ಇಳುವರಿಯನ್ನು ಹೆಚ್ಚಿಸಬಹುದು. 2025 ರ ಹೊತ್ತಿಗೆ ಭಾರತವು 1.4 ಶತಕೋಟಿ ಜನರಿಗೆ ಆಹಾರವನ್ನು ಪೂರೈಸಬೇಕಾಗುತ್ತದೆ. ಆದ್ದರಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು ತುಂಬಾ ಅವಶ್ಯಕವಾಗಿದೆ, ಅದಕ್ಕಾಗಿ ಕೃಷಿ ಸಮುದಾಯಕ್ಕೆ ಸುಧಾರಿತ ತಳಿಗಳ / ಮಿಶ್ರತಳಿಗಳ ಉತ್ತಮ ಗುಣಮಟ್ಟದ ಬೀಜಗಳ ಉತ್ಪಾದನೆ ಮತ್ತು ವಿತರಣೆ ಹೆಚ್ಚು ಮಹತ್ವದ್ದಾಗಿದೆ. ಬೀಜ ಉತ್ಪಾದನೆಯ ಕಾರ್ಯಕ್ರಮವು ರಾಜ್ಯ ಸರಕಾರ, ರಾಜ್ಯ ಕೃಷಿ ವಿಶ್ವವಿದ್ಯಾಲಯ ವ್ಯವಸ್ಥೆ, ಸಾರ್ವಜನಿಕ ವಲಯ, ಸಹಕಾರಿ ಮತ್ತು ಖಾಸಗಿ ವಲಯದ ಸಂಸ್ಥೆಗಳ ಭಾಗವಹಿಸುಕೆಯನ್ನು ಒಳಗೊಂಡಿದೆ. ಈ ಎಲ್ಲಾ ಸಂಘಟಿತ ವಲಯಗಳ ಉತ್ತಮ ಹಾಗೂ ನಿರಂತರ ಪ್ರಯತ್ನದಿಂದ, ಗುಣಮಟ್ಟದ ಬೀಜದ ಒಟ್ಟು ಅಗತ್ಯತೆಯ ಶೇ. 15–20 ರಷ್ಟು ಮಾತ್ರ ಪೂರೈಸಲಾಗುತ್ತಿದೆ.

ಹೆಚ್ಚಿನ ರೈತರು ಕೊಯ್ಲು ಮಾಡಿದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲಾಗುತ್ತದೆ ಮತ್ತು ಮುಂದಿನ ಬಿತ್ತನೆಯ ಕಾಲದಲ್ಲಿ ತಾವೇ ಸಂಗ್ರಹಿಸಿದ ತಮ್ಮ ಬೀಜಗಳನ್ನು ಉಪಯೋಗಿಸುತ್ತಾರೆ. ಇಂತಹ ಬೀಜವು ನಿರೀಕ್ಷಿಸಿದ ಗುಣಮಟ್ಟದ್ದಾಗಿರುವುದಿಲ್ಲ. ಜೊತೆಗೆ, ಸಸ್ಯಗಳು ಅಶಕ್ತವಾಗಿ ಬೆಳೆದು ಮತ್ತು ಅಂತಿಮವಾಗಿ ಕಡಿಮೆ ಇಳುವರಿ ನೀಡುತ್ತವೆ. ಇದಕ್ಕಾಗಿ ಬಿತ್ತನೆಗಾಗಿ ಉತ್ತಮ ಬೀಜಗಳನ್ನು ಆಯ್ಕೆ ಮಾಡುವ ಕೆಲವು ಸುಧಾರಿತ ಪದ್ಧತಿಗಳನ್ನು ಅನುಸರಿಸಬೇಕಾಗುತ್ತದೆ. ಸಂಭಾವ್ಯ ಉತ್ಪಾದಕತೆಯನ್ನು ಅರಿತುಕೊಳ್ಳಲು ಗುಣಮಟ್ಟದ ಬೀಜವು ಪ್ರಮುಖ ಆದ್ಯತೆಯಾಗಿದೆ. ನಂತರದ ಪೀಳಿಗೆಗಳಲ್ಲಿ ಗುಣಮಟ್ಟ ಹದಗೆಡುತ್ತಿದ್ದಂತೆ ಹಳೆಯ ಬೀಜವನ್ನು ತಾಜಾ ಗುಣಮಟ್ಟದ ಬೀಜಗಳೊಂದಿಗೆ ಬದಲಾಯಿಸಬೇಕು. ಅದರಂತೆ ಬೀಜವನ್ನು ಪ್ರತಿವರ್ಷ ಮಿಶ್ರತಳಿಗೆ ಮತ್ತು ಪ್ರತಿ ಮೂರರಿಂದ ನಾಲ್ಕು ವರ್ಷಗಳಿಗೊಮ್ಮೆ ಸುಧಾರಿತ ತಳಿಗಳಿಗೆ ಬದಲಿಸಬೇಕು. ಆದ್ದರಿಂದ "ಬೀಜ ಬದಲು" ಪ್ರಮಾಣವನ್ನು ಹೆಚ್ಚಿಸಲು ಗುಣಮಟ್ಟದ ಬೀಜಗಳ ಲಭ್ಯತೆಯನ್ನು ಸುಧಾರಿಸುವುದು ಬಹಳ ಅವಶ್ಯಕವಾಗಿದೆ.

ಸಂಘಟಿತ ಬೀಜ ಕಾರ್ಯಕ್ರಮದ ಅನುಷ್ಠಾನದ ಹೊರತಾಗಿಯೂ, ಬೀಜ ಬದಲಿ ಪ್ರಮಾಣವು ಕೆಲವು 15 ಪ್ರತಿಶತವನ್ನು ತಲುಪಿದೆ ಮತ್ತು ಗುಣಮಟ್ಟದ ಬೀಜಗಳ ಬೇಡಿಕೆ ಮತ್ತು ಪೂರೈಕೆಯ ನಡುವೆ ಆತಂಕಕಾರಿ ಅಂತರವಿದೆ. ಗುಣಮಟ್ಟದ ಬೀಜಗಳ ಉತ್ಪಾದನೆ ಮತ್ತು ವಿತರಣೆಯಲ್ಲಿ ಖಾಸಗಿ ಬೀಜ ಉದ್ಯಮದ ಪಾತ್ರವು ಭಾರತದ

ಬೀಜ ಉದ್ಯಮದಲ್ಲಿ ಉತ್ತಮವಾಗಿ ಗುರುತಿಸಲ್ಪಟ್ಟಿದೆ. ಆದಾಗಿಯೂ, ಅವು ಸಾಮಾನ್ಯವಾಗಿ ಕಡಿಮೆ ಗಾತ್ರದ ಹೆಚ್ಚಿನ ಮೌಲ್ಯದ ಬೀಜಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿವೆ. ಇದು ಕೆಲವೇ ಆಯ್ದ ರೈತರ ಅಗತ್ಯಗಳನ್ನು ಪೂರೈಸುತ್ತದೆ. ಹೆಚ್ಚಿನ ಪ್ರಮಾಣದ ಕಡಿಮೆ ಮೌಲ್ಯದ ಬೀಜಗಳಾದ ಭತ್ತ, ಎಣ್ಣೆಕಾಳುಗಳು ಮತ್ತು ಬೇಳೆಕಾಳುಗಳ ವಿತರಣೆ ಇನ್ನೂ ಸಾರ್ವಜನಿಕ ವಲಯದ ಸಂಸ್ಥೆಯಲ್ಲಿದೆ. ಎಣ್ಣೆಕಾಳುಗಳು ಮತ್ತು ಬೇಳೆಕಾಳುಗಳು ಮತ್ತು ಬೇಳೆಕಾಳುಗಳಲ್ಲಿ ಗುಣಮಟ್ಟದ ಬೀಜಗಳು ಲಭ್ಯವಿಲ್ಲದಿರುವುದು ಅದರ ಬೀಜ ಬದಲಿ ದರವನ್ನು ಕಡಿಮೆ ಮಾಡಲು ಒಂದು ಮುಖ್ಯ ಕಾರಣವಾಗಿದೆ. ಹೊಸ ಮತ್ತು ಹೆಚ್ಚಿನ ಇಳುವರಿ ನೀಡುವ ತಳಿಗಳ ಗುಣಮಟ್ಟದ ಬೀಜಗಳ ಹೆಚ್ಚಿನ ವಿತರಣೆಯಿಂದ ಈ ಬೆಳೆಗಳ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಹೆಚ್ಚಿಸಬಹುದು. ಈ ಬೆಳೆಗಳಲ್ಲಿ ಗುಣಮಟ್ಟದ ಬೀಜಗಳನ್ನು ಉತ್ಪಾದಿಸಲು ಮತ್ತು ವಿತರಿಸಲು ಸಾಕಷ್ಟು ಅವಕಾಶವಿದೆ, ಇದಕ್ಕಾಗಿ ಬೀಜ ಗ್ರಾಮ ಯೋಜನೆಯ ಪರಿಕಲ್ಪನೆಯು ಹೊಸದಾದ ಮತ್ತು ಹೆಚ್ಚು ಪ್ರಾಯೋಗಿಕ ವಿಧಾನವಾಗಿದೆ ಮತ್ತು ಗ್ರಾಮ ಮಟ್ಟದಲ್ಲಿ ಅಪೇಕ್ಷಿತ ಪ್ರಭೇದಗಳ ಗುಣಮಟ್ಟದ ಬೀಜಗಳ ಉತ್ಪಾದನೆ ಮತ್ತು ಸಮಯೋಚಿತ ವಿತರಣೆಗೆ ಅನುಕೂಲವಾಗುವಂತೆ ಉತ್ತೇಜಿಸಬೇಕಾಗಿದೆ. ಈ ಸಂದರ್ಭದಲ್ಲಿ, ಗುಣಮಟ್ಟದ ಬೀಜಗಳ ಉತ್ಪಾದನೆ ಮತ್ತು ವಿತರಣೆಯಲ್ಲಿ ಗ್ರಾಮದ ಸ್ವಾವಲಂಬನೆಯನ್ನು ಪ್ರತಿಪಾದಿಸುವ "ಬೀಜ ಗ್ರಾಮ ಯೋಜನೆ" ಎಂಬ ಪರಿಕಲ್ಪನೆಯು ವೇಗವನ್ನು ಪಡೆಯುತ್ತಿದೆ. ಒಂದು ಗ್ರಾಮದಲ್ಲಿ ಈ ತರಬೇತಿ ಪಡೆದ ರೈತರ ಗುಂಪುಯಿದ್ದು ವಿವಿಧ ಬೆಳೆಗಳ ಬೀಜಗಳ ಉತ್ಪಾದನೆಯಲ್ಲಿ ತೊಡಗಿದ್ದು, ತಮ್ಮ ಅಗತ್ಯಗಳನ್ನು ಹಳ್ಳಿಯ ರೈತರ ಮತ್ತು ನೆರೆಹೊರೆಯ ಹಳ್ಳಿಗಳ ರೈತರ ಅಗತ್ಯಗಳನ್ನು ಸೂಕ್ತ ಸಮಯದಲ್ಲಿ ಮತ್ತು ಕೈಗೆಟುಕುವ ದರದಲ್ಲಿ ಪೂರೈಸುವ ಪರಿಕಲ್ಪನೆಯನ್ನು "ಬೀಜ ಗ್ರಾಮ ಯೋಜನೆ" ಎನ್ನುತ್ತಾರೆ.

ಪರಿಕಲ್ಪನೆ

1. ಜನ ಸಾಂದ್ರತೆ ಹೆಚ್ಚಿರುವ ಪ್ರದೇಶದಲ್ಲಿ ಬೀಜೋತ್ಪಾದನೆಯನ್ನು ಸಂಘಟಿಸುವದು.
2. ಅಸ್ತಿತ್ವದಲ್ಲಿರುವ ಸ್ಥಳೀಯ ತಳಿಗಳು ಹೊಸ ಹೆಚ್ಚಿನ ಇಳುವರಿ ನೀಡುವ ತಳಿಗಳೊಂದಿಗೆ ಬದಲಾಯಿಸುವದು.
3. ಬೀಜ ಉತ್ಪಾದನೆಯನ್ನು ಹೆಚ್ಚಿಸುವುದು.
4. ಸ್ಥಳೀಯ ಬೇಡಿಕೆ ಮತ್ತು ಸಮಯೋಚಿತ ಪೂರೈಕೆಯನ್ನು ಕೈಗುಟುಕುವ ದರದಲ್ಲಿ ಪೂರೈಸುವದು.
5. ಗ್ರಾಮದ ಸ್ವಾವಲಂಬನೆ ಹೆಚ್ಚಿಸುವದು.
6. ಬೀಜ ಬದಲಿ ಪ್ರಮಾಣವನ್ನು ಹೆಚ್ಚಿಸುವುದು.

ವೈಶಿಷ್ಟ್ಯಗಳು

1. ಸೂಕ್ತ ಸಮಯದಲ್ಲಿ ಬೀಜಗಳನ್ನು ದೊರೆಯುವಂತೆ ಮಾಡುವುದು.
2. ಬೀಜವು ಮಾರುಕಟ್ಟೆಯ ಬೆಲೆಗಿಂತಲೂ ಕಡಿಮೆ ದರದಲ್ಲಿ ಕೈಗುಟುಕುವ ವೆಚ್ಚದಲ್ಲಿ ಲಭ್ಯವಾಗುವಂತೆ ಮಾಡುವುದು.
3. ಉತ್ಪಾದನೆಯ ಮೂಲ ತಳಿದಿರುವ ಕಾರಣ ಗುಣಮಟ್ಟದ ಬಗ್ಗೆ ರೈತರಲ್ಲಿ ವಿಶ್ವಾಸ ಹೆಚ್ಚಿಸುವುದು.
4. ಉತ್ಪಾದಕರು ಮತ್ತು ಗ್ರಾಹಕರು ಪರಸ್ಪರ ಲಾಭ ಪಡೆಯುತ್ತಾರೆ.
5. ವಿವಿಧ ರೀತಿಯ ಹೊಸ ತಳಿಗಳನ್ನು ವೇಗವಾಗಿ ಹರಡಲು ಅನುಕೂಲವಾಗುತ್ತದೆ.

ಬೀಜ ಗ್ರಾಮಗಳ ಸ್ಥಾಪನೆ: ಬೀಜ ಗ್ರಾಮ ಯೋಜನೆಯ ಪ್ರಸ್ತುತ ಕಾರ್ಯಕ್ರಮವು ಎರಡು ಹಂತಗಳನ್ನು ಹೊಂದಿದೆ, ಅವುಗಳೆಂದರೆ...

1. ವಿವಿಧ ಬೆಳೆಗಳ ಬೀಜೋತ್ಪಾದನೆ

ಗುಣಮಟ್ಟವಾದ ಪ್ರಮಾಣೀಕರಿಸಿದ ಬೀಜಗಳ ಉತ್ಪಾದನೆಯನ್ನು ಉತ್ತೇಸಿಸುವುದು ಬೀಜ ಗ್ರಾಮ ಪರಿಕಲ್ಪನೆ. ನಿರ್ದಿಷ್ಟ ಬೆಳೆ ಬೆಳೆಯಲು ಸೂಕ್ತವಾದ ಪ್ರದೇಶವನ್ನು ಆಯ್ಕೆ ಮಾಡಿ ಒಂದೇ ರೀತಿಯ ವೈವಿಧ್ಯದೊಂದಿಗೆ ಬೆಳೆಸಲಾಗುತ್ತದೆ.

i. ಪ್ರದೇಶದ ಆಯ್ಕೆ

ಕೆಳಗಿನ ಸೌಲಭ್ಯಗಳನ್ನು ಹೊಂದಿರುವ ಪ್ರದೇಶವನ್ನು ಆಯ್ಕೆ ಮಾಡಲಾಗುತ್ತದೆ.

1. ನೀರಾವರಿ ಸೌಲಭ್ಯಗಳು
2. ಒಂದಕ್ಕಿಂತ ಹೆಚ್ಚು ಕಾಲ ಬೆಳೆ ಬೆಳೆಯಲು ಹವಾಮಾನ ಪರಿಸ್ಥಿತಿಗಳ ಸೂಕ್ತತೆ
3. ಕಾರ್ಮಿಕರ ಲಭ್ಯತೆ
4. ನಿರ್ದಿಷ್ಟ ಬೆಳೆಯ ಬಗ್ಗೆ ಸ್ಥಳೀಯ ರೈತರ ಜ್ಞಾನ
5. ಕೀಟ ಮತ್ತು ರೋಗಗಳ ಹರಡುವಿಕೆಯ ಪ್ರಮಾಣ
6. ಬೀಜದ ಬೆಳೆ ಹೆಚ್ಚಿಸಲು ಸೂಕ್ತತೆಗಾಗಿ ಪ್ರದೇಶದ ಹಿಂದಿನ ಇತಿಹಾಸ

7. ಸರಾಸರಿ ಮಳೆ ಮತ್ತು ವಿತರಣೆ

8. ಬೀಜ ಮತ್ತು ಇತರ ಒಳಹರಿವು ಸುಲಭವಾಗಿ ಚಲಿಸಲು ನಗರ ಪ್ರದೇಶಕ್ಕೆ ಸಂಪರ್ಕಿಸಿ

ii. ಬೀಜ ಪೂರೈಕೆ

1. ಬೀಜ ಉತ್ಪಾದನೆಗೆ ಸೂಕ್ತವಾದ ಪ್ರದೇಶವನ್ನು ವಿಜ್ಞಾನಿಗಳು ಗುರುತಿಸುತ್ತಾರೆ.
2. ಅಡಿಪಾಯ / ಪ್ರಮಾಣೀಕೃತ ಬೀಜಗಳು ಅಥವಾ ಕೃಷಿ ವಿಶ್ವವಿದ್ಯಾಲಯ ಲೇಬಲ್ ಮಾಡಿದ ಬೀಜಗಳನ್ನು ಕೃಷಿ ವಿಜ್ಞಾನ ಕೇಂದ್ರಗಳು (ಕೆ.ವಿ.ಕೆ.ಗಳು) ಮತ್ತು ಸಂಶೋಧನಾ ಕೇಂದ್ರಗಳ ಮೂಲಕ ಶೇ. 50 ಸಬ್ಸಿಡಿ ವೆಚ್ಚದಲ್ಲಿ ಗುರುತಿಸಲ್ಪಟ್ಟ ಪ್ರದೇಶದ ರೈತರಿಗೆ ಪೂರೈಸಲಾಗುತ್ತದೆ.
3. ರೈತರು ಈ ಗುಣಮಟ್ಟದ ಬೀಜಗಳನ್ನು ಬಳಸುತ್ತಾರೆ ಮತ್ತು ತಮ್ಮದೇ ಆದ ಬೀಜೋತ್ಪಾದನೆಯನ್ನು ಸಣ್ಣ ಪ್ರದೇಶದಲ್ಲಿ (1 ಎಕರೆ) ತಮ್ಮ ಸ್ವಂತ ಬಳಕೆಗಾಗಿ ತೆಗೆದುಕೊಳ್ಳುತ್ತಾರೆ. ಅವರು ಬಳಸುವ ಬೆಳೆಗಳು ಭತ್ತ, ಬೇಳೆಕಾಳುಗಳು ಮತ್ತು ಎಣ್ಣೆಕಾಳುಗಳು ಇತ್ಯಾದಿ.

iii. ಸಾಮರ್ಥ್ಯ ಹೆಚ್ಚಿಸುವುದು:

ತಂತ್ರಜ್ಞಾನಗಳು ಮತ್ತು ಸಮುದಾಯದ ಸಹಭಾಗಿತ್ವದ ನಡುವಿನ ಹೊಂದಾಣಿಕೆಯನ್ನು ಸುಧಾರಿಸುವ ಸಲುವಾಗಿ, ಗುಣಮಟ್ಟದ ಬೀಜಗಳನ್ನು ಉತ್ಪಾದಿಸುವ ರೈತರ ಸಾಮರ್ಥ್ಯವನ್ನು ಹೆಚ್ಚಿಸಲು ವಿಶೇಷ ಒತ್ತು ನೀಡಲಾಗುತ್ತಿದೆ. ಹಳ್ಳಿಗಳಲ್ಲಿ ಬೀಜ ಬೆಳೆಗಳಿಗೆ ಗುರುತಿಸಲಾದ ರೈತರಿಗೆ ಬೀಜ ಉತ್ಪಾದನೆ ಮತ್ತು ಬೀಜ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡಿ ರೈತರನ್ನು ತಂತ್ರಜ್ಞಾನ ಸಬಲರನ್ನಾಗಿ ಮಾಡುವುದು.

ತರಬೇತಿಯ ಅವಧಿ : 3 ದಿನಗಳು

ಮೊದಲ ಒಂದು ದಿನದ ತರಬೇತಿ : ಬಿತ್ತನೆ ಸಮಯದಲ್ಲಿ

ತರಬೇತಿ : ಪ್ರತ್ಯೇಕ ದೂರ, ಬಿತ್ತನೆ ಪದ್ಧತಿ, ಬೀಜ ಸಂಸ್ಕರಣೆ ಮತ್ತು ಇತರ ಕೃಷಿ ಪದ್ಧತಿಗಳ ಬಗ್ಗೆ ತಿಳಿಸುವುದು.

ಎರಡನೇ ಒಂದು ದಿನದ ತರಬೇತಿ : ಹೂಬಿಡುವ ಸಮಯದಲ್ಲಿ

ತರಬೇತಿ : ಬಿನ್ನ ಜಾತಿಯ ತಳಿಗಳು ಗುರುತಿಸುವುದು ಮತ್ತು ತೆಗೆಯುವುದು, ಬೀಜ ತಾಕುಗಳ ನಿರ್ವಹಣೆ, ಸಸ್ಯ ಸಂರಕ್ಷಣಾ ಕ್ರಮಗಳು ಮತ್ತು ಕೊಯ್ಲು ವಿಧಾನಗಳು.

ಮೂರನೇ ಒಂದು ದಿನದ ತರಬೇತಿ : ಕೊಯ್ಲು ನಂತರ

ತರಬೇತಿ : ಬೀಜ ಸ್ವಚ್ಛ ಗೊಳಿಸುವಿಕೆ, ಶ್ರೇಣೀಕರಣ, ಬೀಜ ಸಂಸ್ಕರಣೆ, ಪೊಟ್ಟಣೀಕರಣ ಮತ್ತು ಶೇಖರಣಾ ಅಂಶಗಳು, ಬೀಜ ಮಾದರಿ ಮತ್ತು ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ಪ್ರಮಾಣೀಕರಣಕ್ಕಾಗಿ ಕಳುಹಿಸುವುದು.

ತಂತ್ರಜ್ಞಾನ ಮತ್ತು ಮಾರುಕಟ್ಟೆ ಮತ್ತಷ್ಟು ಸಬಲೀಕರಣಕ್ಕಾಗಿ ಬೀಜ ಬೆಳೆಗಾರರ ವೇದಿಕೆಯನ್ನು ಆಯೋಜಿಸಲಾಗುವುದು.

2. ಬೀಜ ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದು

ಕೊಯ್ಲು ನಂತರದ ಬೀಜ ನಿರ್ವಹಣೆ, ಸುಧಾರಿತ ಪ್ರಭೇದಗಳ ಉತ್ತಮ ಗುಣಮಟ್ಟದ ಬೀಜಗಳನ್ನು ಮಾರಾಟ ಮಾಡುವಲ್ಲಿ

ತಂತ್ರಜ್ಞಾನದ ಪ್ರಮುಖ ಪಾತ್ರವಹಿಸುತ್ತದೆ. ಬೀಜಗಳನ್ನು ಸಂಸ್ಕರಿಸಿ ಸರಿಯಾಗಿ ನಿರ್ವಹಿಸದಿದ್ದರೆ, ಉತ್ಪಾದನೆಯಲ್ಲಿ ಹಿಂದಿನ ಎಲ್ಲಾ ಪ್ರಯತ್ನಗಳನ್ನು ಕಳೆದುಕೊಳ್ಳಬಹುದು. ಆದ್ದರಿಂದ ಬೀಜ ಉತ್ಪಾದನೆಯಲ್ಲಿ ಬೀಜ ಸಂಸ್ಕರಣೆ ಮತ್ತು ಪ್ಯಾಕೇಜಿಂಗ್ ಬಹಳ ಮುಖ್ಯವಾದ ಅಂಶವಾಗಿದೆ. ಸಂಸ್ಕರಣಾ ಕೇಂದ್ರಗಳ ಸ್ಥಳವು ಲಭ್ಯವಿರುವ ಮೂಲ ಸೌಕರ್ಯ ಮತ್ತು ಅನುಕೂಲತೆಯನ್ನು ಆಧರಿಸಿದೆ. ಅಂತಹ ಸ್ಥಳವು ರಸ್ತೆಗಳು ಮತ್ತು ಸಾರಿಗೆ ಸೌಲಭ್ಯಗಳೊಂದಿಗೆ ಉತ್ತಮವಾಗಿ ಸಂಪರ್ಕಗೊಳ್ಳುತ್ತದೆ. ಪ್ರತಿಯೊಂದು ಬೀಜ ಸಂಸ್ಕರಣಾ ಕೇಂದ್ರವು ಈ ಕೆಳಗಿನ ಮೂಲ ಸೌಕರ್ಯಗಳನ್ನು ಹೊಂದಿರುತ್ತದೆ.

ಸೀಡ್ ಗ್ರೇಡರ್ ಕಮ್ ಕ್ಲೀನರ್, ಚೀಲದ ಹೊಲಿಗೆಯ ಉಪಕರಣಗಳು, ಟ್ರಾಲಿಗಳು, ಮಾಪಕಗಳು ಮತ್ತು ಪೀಠೋಪಕರಣಗಳು, ಬೀಜ ಸಂಗ್ರಹ ರಚನೆ ಮತ್ತು ಬೀಜ ನೂಲು ಮತ್ತು ಒಣಗಿಸುವ ಅಂಗಳ.

ಮಾಹಿತಿ ಕೇಂದ್ರ : ಬೀಜ ಬೇಡಿಕೆ ಮತ್ತು ಮಾರುಕಟ್ಟೆ ಪ್ರವೃತ್ತಿಗಳು, ಕೃಷಿ ಮಾರುಕಟ್ಟೆ ಸೂಚ್ಯಂಕ, ಹವಾಮಾನ ಮುನ್ಸೂಚನೆ, ಸಸ್ಯ ಸಂರಕ್ಷಣಾ ಕ್ರಮಗಳು ಇತ್ಯಾದಿಗಳ ಮಾಹಿತಿಯನ್ನು ತಿಳಿದುಕೊಳ್ಳಲು ಮಾಹಿತಿ ಕೇಂದ್ರವು ಇಂಟರ್ನೆಟ್ ಸೌಲಭ್ಯವನ್ನು ಹೊಂದಿರುತ್ತದೆ.

ಪ್ರಯೋಜನಗಳು

1. ಪ್ರತ್ಯೇಕತೆಯ ಸಮಸ್ಯೆಯನ್ನು ಪರಿಹರಿಸುವುದು ಮುಖ್ಯವಾಗಿ ಮೆಕ್ಕೆಜೋಳ, ಸೂರ್ಯಕಾಂತಿಗಳಂತಹ ಅಡ್ಡ ಪರಾಗಸ್ಪರ್ಶದ ಬೆಳೆಗಳಲ್ಲಿ ಹೆಚ್ಚಿನ ಪ್ರತ್ಯೇಕತೆಯ ಅಂತರ ಬೇಕಾದಾಗ ದೊಡ್ಡ ಪ್ರದೇಶದಲ್ಲಿ ಒಂದೇ ತಳಿ ಬೆಳೆಸುವ ಮೂಲಕ ಸಮಸ್ಯೆಯನ್ನು ಪರಿಹರಿಸಲಾಗುತ್ತದೆ. ಬಿತ್ತನೆಯಿಂದ ಕೊಯ್ಲಿಗೆ ಯಾಂತ್ರೀಕರಣ ಸಾಧ್ಯ.
2. ಸುಗ್ಗಿಯ ನಂತರದ ಬೀಜದ ನಿರ್ವಹಣೆ ಸುಲಭ.
3. ಒಂದೇ ತಳಿಯ ಕಾರಣ, ಸಂಸ್ಕರಣೆ, ಒಣಗಿಸುವಿಕೆಯ ಸಮಯದಲ್ಲಿ ವೈವಿಧ್ಯಮಯ ಮಿಶ್ರಣದ ಸಮಸ್ಯೆ ತಪ್ಪಿಸುತ್ತದೆ.
4. ಬೀಜ ಪ್ರಮಾಣೀಕರಣ ಅಧಿಕಾರಿ ಪ್ರತಿ ಯೂನಿಟ್ ಸಮಯಕ್ಕೆ ದೊಡ್ಡ ಪ್ರದೇಶವನ್ನು ಒಳಗೊಂಡಿರುತ್ತದೆ.
5. ಸಂಪೂರ್ಣವಾಗಿ ಇದು ಕೃಷಿ ವೆಚ್ಚವನ್ನು ಕಡಿಮೆ ಮಾಡುತ್ತದೆ.
6. ಬೀಜವು ಹೆಚ್ಚಿನ ಅನುವಂಶಿಕ, ದೈಹಿಕ ಶುದ್ಧತೆಯೊಂದಿಗೆ ಇರುತ್ತದೆ.

ಕೃಪೆ: ಕೃಷಿ ಮುನ್ನಡೆ

✍ ಮೌನೇಶ್ವರಿ ರಮಾನಂದ ಕಮ್ಮಾರ ಮತ್ತು ಸಿದ್ದಪ್ಪ ಚ. ಅಂಗಡಿ
ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆ – 587 101

ರೈತರ ಆದಾಯ ದ್ವಿಗುಣಗೊಳಿಸಲು ಸಾಧ್ಯ !

ಸರ್ಕಾರಗಳ ಸರಿಯಾದ ಯೋಜನೆಗಳು ಅನುಷ್ಠಾನಗೊಂಡಲ್ಲಿ ರೈತರಿಗೆ ಹಲವಾರು ರೀತಿಯ ಪ್ರಯೋಜನಗಳಾಗುತ್ತವೆ. ಯಶಸ್ವಿ ಅನುಷ್ಠಾನಕ್ಕೆ ಅಧಿಕಾರಿಗಳು ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ವಿಜ್ಞಾನಿಗಳ ಮಾರ್ಗದರ್ಶನವು ಮೌಲಿಕವಾಗುತ್ತದೆ. ಈ ದಿಶೆಯಲ್ಲಿ 2022ರ ಒಳಗಾಗಿ ಕೃಷಿಕನ ಆದಾಯ ಎರಡು ಪಟ್ಟು ಹೆಚ್ಚಾಗಬೇಕೆಂಬ ಆಶಯದ ಸರ್ಕಾರಿ ಯೋಜನೆಯ ಕುರಿತಾದ ಕಿರು ಚರ್ಚೆಯಿಲ್ಲಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಕೃಷಿಕರ ಮತ್ತು ಕೃಷಿಯೇತರ ಮೂಲದಿಂದ ಬರುವ ಆದಾಯದ ಮಟ್ಟವನ್ನು ನೋಡಿದರೆ ಆದಾಯದಲ್ಲಿ ಅಜಗಜಾಂತರ ವ್ಯತ್ಯಾಸವಿರುವುದನ್ನು ನಾವು ನೋಡುತ್ತೇವೆ. ಈ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 2022ರೊಳಗೆ ರೈತರ ಆದಾಯ ದ್ವಿಗುಣಗೊಳಿಸುವುದು ಎಂಬುದು ಈಗ ಬಹು ಚರ್ಚಿತ ವಿಷಯ.

ಕೇಂದ್ರ ಸರ್ಕಾರದ ನೀತಿ ಆಯೋಗವು 2022–23ರ ಹೊತ್ತಿಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಅನೇಕ ತಾಂತ್ರಿಕತೆಗಳನ್ನು ಹಮ್ಮಿಕೊಂಡಿದೆ. ಕೃಷಿಕರ ಆದಾಯವೃದ್ಧಿಯಿಂದ ಬಡತನ ರೇಖೆಗಿಂತ ಕಡಿಮೆಯಿರುವ ಅನೇಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿಯೂ ಒಂದು ಲಾಭದಾಯಕ ಉದ್ಯೋಗ ಎಂಬ ಭರವಸೆ ಮೂಡಬೇಕು. ಅಂದರೆ ಮಾತ್ರ ಕೃಷಿಯಿಂದ ವಿಮುಖರಾಗುತ್ತಿರುವ ರೈತರು, ಯುವಕರು ಮತ್ತೆ ತಮ್ಮ ಜಮೀನಿಗೆ ಮರಳಿ ಬರಬಹುದು. ಈ ಪರಿಕಲ್ಪನೆಯು ಸಾಕಾರಗೊಳ್ಳಲು ಅನೇಕ ಅಡೆತಡೆಗಳಿದ್ದರೂ ಸಹ, ಅಡೆತಡೆಗಳು ಯಾವುವು ಎಂಬುದನ್ನು ಮೊದಲು ನೋಡೋಣ. ನಮ್ಮ ದೇಶದಲ್ಲಿ ಅತಿ ಸಣ್ಣ ರೈತರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅವರಿಗೆ, ತಂತ್ರಜ್ಞಾನ ಅರಿವು, ಮಾರುಕಟ್ಟೆಯ ಲಭ್ಯತೆ, ಮಣ್ಣು ಪರೀಕ್ಷೆಯಾಧಾರಿತ ರಸಗೊಬ್ಬರಗಳ ಬಳಕೆ, ಸ್ಥಳೀಯ ಮಾರುಕಟ್ಟೆಯಲ್ಲಿ ರೈತರ ಉತ್ಪನ್ನಗಳಿಗೆ ಬೇಡಿಕೆ, ಬೇಡಿಕೆಯಾಧಾರಿತ (ಒಪ್ಪಂದ ಕೃಷಿ) ಕೃಷಿ, ಸಾಲ ಸೌಲಭ್ಯ, ಹೆಚ್ಚು ಮೌಲ್ಯದ ಉತ್ಪನ್ನಗಳನ್ನು ಬೆಳೆಯುವುದು, ಮಾರುಕಟ್ಟೆಯಲ್ಲಿ ಹೊಸ ಅನ್ವೇಷಣೆಗಳ ಮುಖಾಂತರ ಮಾರಾಟ ಹೆಚ್ಚಿಸುವುದು. ಆದರೆ ವಾಸ್ತವದಲ್ಲಿ ರೈತರ ಕ್ರೋಢೀಕೃತ ಅಭಿಪ್ರಾಯವೆಂದರೆ, ಬೆಂಬಲ ಬೆಲೆಯ ಸಕಾಲಿಕ ಘೋಷಣೆಯಿಂದ ರೈತರು ತಮ್ಮ ಬೆಳೆ ಪದ್ಧತಿಯನ್ನು ನಿರ್ಧರಿಸಬಹುದು. ಕಾರಣ ಕೃಷಿಗೆ ಹವಾಮಾನ ವೈಪರೀತ್ಯದ ಬಿಸಿ ಬಹಳೇ ತಟ್ಟುತ್ತಿದೆ. ಸತತ ಬರಗಾಲ, ಸತತ ಮಳೆ, ಬೆಲೆಯಲ್ಲಿ ಧಿಡೀರ ಏರಿಳಿತ ಇವುಗಳ ನಡುವೆ ಕೃಷಿಕರು ಕಂಗಾಲಾಗುತ್ತಿದ್ದಾರೆ. ಆದ್ದರಿಂದ ರೈತರು ತಾವು ಬೆಳೆದ ಉತ್ಪನ್ನಕ್ಕೆ ತಾವೇ ಬೆಲೆಯನ್ನು ನಿರ್ಧರಿಸುವಂತಾಗಬೇಕು, ಮಾರುಕಟ್ಟೆಯಲ್ಲಿ ಸರಿಯಾದ ಮೂಲಭೂತ ಸೌಕರ್ಯಗಳಿದ್ದು ರೈತರ ಉತ್ಪನ್ನಕ್ಕೆ ಸರಿಯಾದ ಬೆಲೆ ಸಿಗಬೇಕು.

ಇನ್ನೊಂದು ಮುಖ್ಯವಾದ ಅಂಶವೆಂದರೆ, ಉತ್ಪಾದನಾ ಮಟ್ಟವನ್ನು ಹೆಚ್ಚಿಸುವುದು. ನಮ್ಮ ಭಾಗದ ಅನೇಕ ಬೆಳೆಗಳಲ್ಲಿ ಉತ್ಪಾದನಾ ಮಟ್ಟವು ರಾಜ್ಯದ, ರಾಷ್ಟ್ರದ ಉತ್ಪಾದನಾ ಮಟ್ಟಕ್ಕಿಂತ ಕಡಿಮೆಯಿದ್ದು

ಹೊಸ ತಳಿಗಳ, ನೀರಿನ ಬಳಕೆಯ ಮಿತವ್ಯಯದಿಂದ, ಸೂಕ್ತ ಗೊಬ್ಬರಗಳ, ಕೀಟ ಮತ್ತು ರೋಗಗಳ ಸಕಾಲಿಕ ನಿರ್ವಹಣೆಯಿಂದ, ಕೊಯ್ಲೋತ್ತರ ನಿರ್ವಹಣೆಯಿಂದ ಉತ್ಪಾದನಾ ಮಟ್ಟದಲ್ಲಿ ಚೇತರಿಕೆ ಸಾಧ್ಯ. ಅಲ್ಲದೇ ಪ್ರಸ್ತುತ ಕೃಷಿ ನೀತಿಗಳಲ್ಲಿ ಬದಲಾವಣೆಗಳಾಗಬೇಕು. ಕೃಷಿ ಉತ್ಪನ್ನ ಮಾರುಕಟ್ಟೆಗಳು ರೈತರಿಗೆ ಇನ್ನೂ ಹತ್ತಿರವಾಗಬೇಕು. ಮಧ್ಯವರ್ತಿಗಳು, ದಲ್ಲಾಳಿಗಳು ರೈತರಿಗೆ ಬೀಜ ಗೊಬ್ಬರ ಮತ್ತಿತರ ಪರಿಕರಗಳನ್ನು ಬಿತ್ತುವ ಸಮಯದಲ್ಲಿ ಒದಗಿಸಿ ಬೆಳೆ ಬಂದ ತಕ್ಷಣ ವಸೂಲಾತಿಗೆ ಆತುರಪಡುವ ವ್ಯವಸ್ಥೆಯಿಂದ ರೈತರು ಕೃಷಿ ಉತ್ಪನ್ನ ಮಾರುಕಟ್ಟೆಗೆ ಹೋಗುತ್ತಿಲ್ಲ. ಬದಲಾಗಿ ಇ–ನಾಮ್ ಎಂಬ ಯೋಜನೆಯಲ್ಲಿ ರೈತರು ತಮ್ಮ ಉತ್ಪನ್ನವನ್ನು ಆನ್‌ಲೈನ್ ಮಾರಾಟ ಮಾಡಲು ಸಾಧ್ಯವಿದ್ದರೂ ಇದರ ಪ್ರಚಾರ ಎಲ್ಲ ರೈತರನ್ನೂ ಮುಟ್ಟುವಂತಾಗಬೇಕು. ಫಸಲು ವಿಮೆ, ರೈತರ ಪಿಂಚಣಿ ಯೋಜನೆ ಇವುಗಳೂ ಸಹ ರೈತರಿಗೆ ಅನುಕೂಲವಾಗಲಿವೆ ಎಂದು ಜಾಗೃತಿ ಮೂಡಿಸುವ ಕಾರ್ಯವುಂಟಾಗಬೇಕು.

ನೆಲ ಮತ್ತು ಜಲ ಎರಡೂ ಸಂಪನ್ಮೂಲಗಳು ರೈತರಿಗೆ ದುಬಾರಿಯಾಗುವ ಈ ಹೊತ್ತಿನಲ್ಲಿ ಹೆಚ್ಚು ಬೆಲೆಯ ಉತ್ಪನ್ನಗಳನ್ನು ಬೆಳೆಯುವುದು ಮತ್ತು ಬೆಳೆ ವೈವಿಧ್ಯವನ್ನು ಅಳವಡಿಸಿಕೊಳ್ಳುವುದು ಈಗಿನ ತುರ್ತು ಅವಶ್ಯಕತೆಗಳಾಗಿವೆ. ಕಾರಣ ಒಂದೇ ಬೆಲೆಯನ್ನು ನೆಚ್ಚಿ ಕುಳಿತು ಮಾರುಕಟ್ಟೆಯಲ್ಲಿ ಬೆಲೆಯ ಏರಿಳಿತಗಳಾದಾಗ ರೈತರು ಕಷ್ಟಪಡುವುದನ್ನು ನಾವಿಂದು ನೋಡುತ್ತಿದ್ದೇವೆ. ಸಂಘಟನಾ ರೂಪದಲ್ಲಿ ರೈತರ ಉತ್ಪಾದಕ ಕಂಪನಿಗಳು ಇಂದು ಸ್ವಲ್ಪ ಮಟ್ಟಿಗೆ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಿರುವ ಹೊತ್ತಿನಲ್ಲಿ ರೈತರು ಸಂಘಟಿತರಾಗಿ ತಮ್ಮ ಉತ್ಪನ್ನಗಳಿಗೆ ಬೆಲೆಯನ್ನು ನಿರ್ಧರಿಸುವ, ಪರಿಕರಗಳನ್ನು ಬಳಸುವ ಹಾಗೂ ಹೊರಗಿನ ಮಾರುಕಟ್ಟೆಗಳಿಗೆ ತಮ್ಮ ಉತ್ಪನ್ನಗಳನ್ನು ಕಳುಹಿಸುವ ಚಟುವಟಿಕೆಗಳು ಗರಿಗೆದರುತ್ತಿವೆ. ಇಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತಾಗ ರೈತರ ಆದಾಯ ಹೆಚ್ಚಿಸಬಹುದು. ಹೀಗೆ ಸಂಘಟಿತರಾದಾಗ ರೈತರಿಗೆ ಮೋಸ ಹೋಗುವ ಪ್ರಸಂಗಗಳು ಕಡಿಮೆ ಹಾಗೂ ತಮಗೆ ಬೇಕಾದ ಪರಿಕರಗಳೆಲ್ಲವೂ ಒಂದೇ ಸೂರಿನಡಿ ಸಿಗುವಂತಾಗುತ್ತದೆ. ತಂತ್ರಜ್ಞಾನಗಳ ಪ್ರಸರಣೆಯೂ ಸಹ ಪರಿಣಾಮಕಾರಿಯಾಗುತ್ತದೆ. ಹೊರ ಜಿಲ್ಲೆಗಳ, ಹೊರ ರಾಜ್ಯಗಳ ರೈತರೊಂದಿಗೆ ಮುಕ್ತವಾಗಿ ಚರ್ಚಿಸಲು ಅವಕಾಶ ದೊರೆತಾಗ ಹೊಸ ವಿಚಾರಗಳ ಅಳವಡಿಕೆ ಹೆಚ್ಚುತ್ತದೆ. ಕೃಷಿಯಲ್ಲಿ ವೈವಿಧ್ಯತೆಯ ಬಗ್ಗೆ ನಾವು ಮಾತನಾಡುತ್ತೇವೆ. ಮಳೆಯಾಶ್ರಿತ ಪ್ರದೇಶದಲ್ಲಿ ಸಮಗ್ರ ಕೃಷಿ ಪದ್ಧತಿ, ಮಳೆ ನೀರು ಕೊಯ್ಲು ಮತ್ತು ಹವಾಮಾನ ಆಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರಿಂದ ಹೆಚ್ಚಿನ ಲಾಭ ಪಡೆಯಬಹುದು. ಉದಾ. ಆಡು ಸಾಕಾಣಿಕೆ, ಕುರಿ ಸಾಕಾಣಿಕೆ, ಹೈನು, ತೋಟಗಾರಿಕೆ, ಜೇನು, ಮೀನು, ಮೇವು ಇವೆಲ್ಲವೂ ಒಂದೇ ಸರಪಳಿಯಲ್ಲಿ ಸರಾಗವಾಗಿ ಒಂದನ್ನೊಂದು ಅವಲಂಬಿತವಾಗಿ ಸಾಗುವುದರಿಂದ ಸಮಗ್ರ ಕೃಷಿ ಪದ್ಧತಿಯಲ್ಲಿ ರೈತರಿಗೆ ಆತಂಕ ಕಡಿಮೆ. ಕಾರಣ ಒಂದಿಲ್ಲೊಂದು ಮೂಲದ ಆದಾಯ ವರ್ಷವಿಡೀ ಬರುತ್ತಿರುತ್ತದೆ. ತಮ್ಮ ಸ್ಥಳೀಯ ಸಂಪನ್ಮೂಲಗಳಿಗೆ ತಕ್ಕಂತೆ ಈ ಘಟಕಗಳನ್ನು ಅಳವಡಿಸಿಕೊಳ್ಳಲು ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ವಿಸ್ತರಣಾ ಶಿಕ್ಷಣ ಘಟಕಗಳು ಮಾರ್ಗದರ್ಶನ ನೀಡುತ್ತವೆ. ಏಕಬೆಳೆ ಪದ್ಧತಿಯಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವ ರೈತರು ಉದಾ; ಕಬ್ಬು ಮತ್ತು ಭತ್ತ ಬೆಳೆಯುವ ರೈತರು ಸ್ವಲ್ಪ ಜಮೀನನ್ನು ಬೆಳೆ ವೈವಿಧ್ಯಕ್ಕೆ ಮೀಸಲಿಟ್ಟು, ಅಲ್ಲಿ ವಿವಿಧ ಬೆಳೆಗಳನ್ನು ಬೆಳೆಯುವ ವ್ಯವಸ್ಥೆಯಾಗಬೇಕು. ಅಂತರಬೆಳೆ, ಮಿಶ್ರ ಬೆಳೆ, ಅರಣ್ಯ ಕೃಷಿ, ತೋಟಗಾರಿಕೆಯಾದಾರಿತ ಕೃಷಿ, ಎರೆಗೊಬ್ಬರ, ಎರೆಜಲ ಇತ್ಯಾದಿಗಳ ಅಳವಡಿಕೆ ವೈವಿಧ್ಯವನ್ನು ಹೆಚ್ಚಿಸುತ್ತದೆ.

ರೈತರ ಜಮೀನಿನ ಹಿಡುವಳಿಗಳ ಪ್ರಕಾರ ನೀತಿಗಳು ರೂಪುಗೊಳ್ಳಬೇಕು. ಉದಾ ಹತ್ತು ಹೆಕ್ಟೇರ್ ಮತ್ತು ಒಂದು ಹೆಕ್ಟೇರ್ ಜಮೀನುಳ್ಳ ರೈತರನ್ನು ಒಂದೇ ತಕ್ಕಡಿಯಲ್ಲಿ ತೂಗುವ ಪದ್ಧತಿ ಕಾಣೇಯಾಗಬೇಕು. ಸಣ್ಣ ಹಿಡುವಳಿಗೆ ತಕ್ಕ ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿಯಾಗಬೇಕು. ಕಾರಣ ನಮ್ಮ ದೇಶದ ಪ್ರತಿಶತ 70 ರೈತರು ಸಣ್ಣ ಮತ್ತು ಅತಿ ಸಣ್ಣ ರೈತರಿದ್ದಾರೆ.

ಕೃಷಿ ಯಾಂತ್ರೀಕರಣದ ಅಳವಡಿಕೆ, ಮಣ್ಣು ಮತ್ತು ನೀರು ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುವ ಸಾವಯವ ಕೃಷಿಯ ಅಳವಡಿಕೆ, ನೀರಿನ ಮಿತವ್ಯಯಕ್ಕಾಗಿ ಅಳವಡಿಸಿಕೊಳ್ಳಬಹುದಾದ ಅನೇಕ ತಾಂತ್ರಿಕತೆಗಳು ಉದಾ: ಹನಿ ನೀರಾವರಿ, ತುಂತುರು ನೀರಾವರಿ, ಏರುಮಡಿ ತಂತ್ರಜ್ಞಾನ, ಸಾಲು ಬಿಟ್ಟು ಸಾಲು ನೀರು ಹಾಯಿಸುವ ತಾಂತ್ರಿಕತೆಗಳು, ಶೂನ್ಯ ಬಂಡವಾಳ ಕೃಷಿಯ ತತ್ವಗಳ ಅಳವಡಿಕೆ, ಮೇವಿಗಾಗಿ, ಅರಣ್ಯ ಸಸಿಗಳಿಗಾಗಿ ಬದುಗಳ ಸದ್ಬಳಕೆ, ಹೆಚ್ಚು ಹಾಲು ನೀಡುವ ಹಸುಗಳ ಸಾಕಾಣಿಕೆ, ಹೆಚ್ಚು ಉತ್ಪಾದಕತೆಯನ್ನು ಹೊಂದಿರುವ ಆಡು/ಕುರಿ ತಳಿಗಳ ಸಾಕಾಣಿಕೆ, ಸರ್ಕಾರಿ ಸೌಲಭ್ಯಗಳ ಸಂಪೂರ್ಣ ಉಪಯೋಗ, ಹವಾಮಾನ ಆಧರಿತ ಕೃಷಿ, ಒಪ್ಪಂದದ ಕೃಷಿ, ಕೃಷಿಗೆ ಪೂರಕವಾದ ಮಾಹಿತಿ ಸಂವಹನ ತಂತ್ರಜ್ಞಾನಗಳ ಅಳವಡಿಕೆ, ರೈತರ ಸಂಘಟನೆಗಳು, ಗೊಬ್ಬರ ಮಿತವ್ಯಯ ಬಳಕೆ ಇವೇ ತತ್ವಗಳನ್ನು ಅಳವಡಿಸಿಕೊಂಡರೆ ರೈತರ ಆದಾಯ ದ್ವಿಗುಣವಾಗುವಲ್ಲಿ ಸಂಶಯವಿಲ್ಲ.

ಕೃಪೆ: ಕೃಷಿ ಮುನ್ನಡೆ

✍ ಎಸ್.ಕೆ.ಪಾಟೀಲ್

ಬಂಪರ್ ಬದನೆ

ಬದನೆಕಾಯಿ ಬೆಳೆಯಬೇಕೆಂದರೆ ಒಂದು ಕ್ರಿಮಿನಾಶಕ ಕ್ಯಾನ್ ಕಾಯಮ್ಮಾಗಿ ಜಮೀನಿನಲ್ಲಿ ಇರಲೇ ಬೇಕು ಎಂಬ ಮಾತು ರೈತವಲಯದಲ್ಲಿದೆ. ಅಷ್ಟೊಂದು ಕೀಟಗಳ ಕಾಟ ಆ ಬೆಳೆಗೆ. ಅದರಿಂದ ಬರುವ ಆದಾಯದಲ್ಲಿ ಸಿಂಹಪಾಲು ಔಷಧಿ ಖರ್ಚಿಗೇ ಹೋಗಿಬಿಡುತ್ತದೆ. ಚೆನ್ನಾಗಿ ನೋಡಿಕೊಂಡರೆ ಒಂದು ವರ್ಷದವರೆಗೆ ಇಳುವರಿ ನೀಡಬಲ್ಲ ಬದನೆಕಾಯಿಗೆ ಮಾರುಕಟ್ಟೆಯ ದರದಲ್ಲಿ ತುಂಬಾ ಏರುಪೇರು ಆಗುವುದಿಲ್ಲ. ಹೀಗಿರುವಾಗ ಬದನೆಯಿಂದ ಲಕ್ಷಗಟ್ಟಲೆ ಆದಾಯ ತೆಗೆಯುವುದು ನಿಜಕ್ಕೂ ಸಾಧನೆಯೇ. ಅಂಥ ಸಾಧನೆ ಮಾಡಿದವರು ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕಲಕೇರಿ ಗ್ರಾಮದ ರೈತ ಮಲ್ಲಪ್ಪ ರಾಮಪ್ಪರಡ್ಡೇರ.

ಭೂಮಿ ಫಲವತ್ತಾಗಿರಬೇಕು

ಮಲ್ಲಪ್ಪನವರದು ಒಟ್ಟು ಆರು ಎಕರೆ ಜಮೀನು. ಬೋರ್‌ವೆಲ್ ಹಾಗೂ ಕಾಲುವೆಯ ನೀರಿನಿಂದ ಅಷ್ಟೂ ಜಮೀನಿಗೆ ನೀರುಣಿಸುತ್ತಾರೆ. ಒಂದು ಕಾಲದಲ್ಲಿ ಇವರೂ ಕೂಡ ಉಳಿದವರಂತೆ ರಾಸಾಯನಿಕ ಕೃಷಿ ಮಾಡುತ್ತಾ ಹಾಕಿದ ಖರ್ಚು ಕಳೆದು, ಅದರ ಮೇಲೆ ಐವತ್ತು ಸಾವಿರವಷ್ಟೇ ಲಾಭ ಪಡೆಯುತ್ತಿದ್ದರು. ನಂತರ ಭೈಫ್ ಸಂಸ್ಥೆಯವರ ಮಾರ್ಗದರ್ಶನದಂತೆ ಸಾವಯವ ಕೃಷಿಗಿಳಿದು ಇಂದು ಉತ್ತಮ ಆದಾಯ ಪಡೆಯುತ್ತಿದ್ದಾರೆ.

ತುಂಬಾ ಬೇಗವಾಗಿ ಇಳುವರಿ ನೀಡುವ ಬದನೆಕಾಯಿ, ಟೊಮೆಟೊ, ಮೆಣಸಿನಕಾಯಿ ಮುಂತಾದವುಗಳಿಗೆ ಸಾಕಷ್ಟು ಪೋಷಕಾಂಶ ಬೇಕು. ಹೊಲ ಫಲವತ್ತಾಗಿರಬೇಕು. ಭೂಮಿಯಲ್ಲಿ ಸಾಕಷ್ಟು ಸಾವಯವ ಅಂಶ ಇರಬೇಕು. ಹಾಗೆಯೇ ಬೇರಿನ ಮೂಲಕ ಮತ್ತು ಎಲೆಗಳ ಮೂಲಕ ನಿರಂತರವಾಗಿ ಪೋಷಕಾಂಶ ಒದಗಿಸುತ್ತಲೇ ಇರಬೇಕು. ಆಗ ಮಾತ್ರ ಗರಿಷ್ಠ ಇಳುವರಿ ತೆಗೆಯಲು ಸಾಧ್ಯ. ಕಲಕೇರಿಯ ಮಲ್ಲಪ್ಪನವರು ಮಾಡಿದ್ದು ಇದನ್ನೇ.



ಮನೆಯಲ್ಲೇ ಟಾನಿಕ್

ಅವರು ವಾರ, ಹತ್ತು ದಿನ, ಹದಿನೈದು ದಿನಕ್ಕೊಮ್ಮೆ ಜೀವಾಮೃತ, ಬೆಣ್ಣೆ ಮಿಶ್ರಿತ ಮಜ್ಜಿಗೆ, ಎಳನೀರು, ಗೋಮೂತ್ರ

> “ಸತತ ಮೂರು ವರ್ಷದಿಂದ ನನಗೆ ಮುಳ್ಳುಗಾಯಿ ಬದನೆಯಿಂದ 6 ಲಕ್ಷದಿಂದ 7.5 ಲಕ್ಷದವರೆಗೆ ಆದಾಯ ಸಿಕ್ಕಿದೆ. ಒಂದು ಎಕರೆಯಲ್ಲಿ ಬೆಳೆದ ಬದನೆಯಿಂದ ಇಷ್ಟೊಂದು ಆದಾಯ ಸಿಗುತ್ತೆ ಅಂದುಕೊಂಡಿರಲಿಲ್ಲ. ಮೊನ್ನೆ ತೆಗೆದ ಬದನೆ ಒಟ್ಟು ರೂ.78,000.00 ಖರ್ಚು ಮಾಡಿದ್ದೆ. ಅಂದಾಜು ರೂ.6 ಲಕ್ಷ ಸಿಕ್ಕಿದೆ. ಸಾವಯವ ಕೃಷಿ, ಬೆಣ್ಣೆ ಮಿಶ್ರಿತ ಮಜ್ಜಿಗೆಯ ಸಿಂಪಡಣೆ, ಗೋಮೂತ್ರ ಎಳನೀರಿನ ಬಳಕೆಯಿಂದ ಇದು ಸಾಧ್ಯವಾಗಿದೆ. ಸಾವಿರಾರು ರೂಪಾಯಿ ಖರ್ಚು ಮಾಡಿ ಮಾರುಕಟ್ಟೆಯಿಂದ ಕ್ರಿಮಿನಾಶಕ-ಟಾನಿಕ್ ತರುವ ಬದಲು ರೈತರು ಇಂಥವೆಲ್ಲ ಬಳಸಬೇಕು ಎಂಬುದು ನನ್ನ ಸಲಹೆ.
>
> – ಮಲ್ಲಪ್ಪ ರಾಮಪ್ಪ ರಡ್ಡೇರ್, ರೈತ

ಮುಂತಾದವನ್ನು ನಿರಂತರವಾಗಿ ಸಿಂಪಡಿಸಿದ ಪರಿಣಾಮ ಅವರ ಬದನೆ ಬೆಳೆ (ಮುಳ್ಳಗಾಯಿ) ದೀರ್ಘಕಾಲದವರೆಗೆ ಹೆಚ್ಚು ಇಳುವರಿ ಕೊಡಲು ಸಾಧ್ಯವಾಯಿತು. ಖಾಸಗಿ ಕಂಪೆನಿಯ ಮಂಜರಿ ಬೀಜವನ್ನು ನರ್ಸರಿಯಲ್ಲಿ ಸಸಿ ಮಾಡಿಸಿ ನಾಟಿ ಮಾಡುವ ಮಲ್ಲಪ್ಪನವರು, ಸತತ ಮೂರು ವರ್ಷದಿಂದ ಅತ್ಯಂತ ಯಶಸ್ವಿಯಾಗಿ ಬದನೆ ಬೆಳೆಯುತ್ತಿದ್ದಾರೆ. ಸಾವಯವ ಗೊಬ್ಬರದ ಜೊತೆ ಬೇವಿನ ಹಿಂಡಿ ಬಳಸುವುದರಿಂದ ಮಣ್ಣಿನಿಂದ ಬರುವ ಹಲವು ಕಾಯಿಲೆ-ಕೀಟಗಳು ದೂರವಾಗುತ್ತವೆ. ನಾಟಿ ಮಾಡಿದ ಎರಡೂವರೆ ತಿಂಗಳಿಗೆ ಆರಂಭವಾಗುವ ಕೊಯ್ಲು, ಒಂಭತ್ತು ತಿಂಗಳವರೆಗೆ ಮುಂದುವರೆಯುತ್ತದೆ. ಬೆಳೆ ಎಷ್ಟು ಚೆನ್ನಾಗಿ ಬಂದಿತೆಂದರೆ ನಿರಂತರವಾಗಿ ಐದು ತಿಂಗಳ ಕಾಲ ಪ್ರತಿದಿನ 80 ಬಾಕ್ಸ್ ಬದನೆಕಾಯಿ ಕೊಯ್ಲು ಮಾಡಿದ್ದರು!

ದುಬಾರಿ ಬೆಲೆಯ ರಾಸಾಯನಿಕ ಗೊಬ್ಬರ-ಕ್ರಿಮಿನಾಶಕದ ಹಿಂದೆ ಬೀಳದೆ ತಾವೇ ತಯಾರಿಸಿದ ಹಲವಾರು ಟಾನಿಕ್ ಬಳಸಿ ಲಾಭ ಕಂಡುಕೊಂಡರು. ಜವಾರಿ ಹಸುಗಳ ಹಾಲನ್ನು ಹೆಪ್ಪ ಹಾಕಿ, ಕಡಿದು ಮಜ್ಜಿಗೆ ಮಾಡಿ, ಬೆಣ್ಣೆ ತೆಗೆಯದ ಮಜ್ಜಿಗೆಯನ್ನು ಒಂದು ದಿನ ಬಿಸಿಲಿಗೆ, ಮತ್ತೊಂದು ದಿನ ನೆರಳಿಗೆ ಹೀಗೆ ಇಟ್ಟು ನಾಲ್ಕು ದಿನದ ನಂತರ ಒಂದು ಕೈನಿಗೆ ಒಂದು ಲೀಟರ್ ಈ ಮಜ್ಜಿಗೆ ದ್ರಾವಣ ಸಿಂಪಡಿಸಿದ್ದಾರೆ.

ಬೆಣ್ಣೆಲೇಪಿತ ಎಲೆಗಳು

ಗೋಮೂತ್ರ, ಸಕ್ಕರೆ, ಎಳನೀರು ಈ ಮೂರನ್ನೇ ಬೆರೆಸಿ ಸಿಂಪಡಿಸಿದ್ದಾರೆ. ಜೀವಾಮೃತವನ್ನಂತೂ ನಿರಂತರವಾಗಿ ಸ್ಪ್ರೇ ಮಾಡುತ್ತಲೇ ಇದ್ದರು. ಮಜ್ಜಿಗೆ ಶಿಲೀಂದ್ರನಾಶಕ, ಬೆಣ್ಣೆ ಪೋಷಕಾಂಶಭರಿತ, ಎಳನೀರು ಟಾನಿಕ್, ಗೋಮೂತ್ರವಂತೂ ಔಷಧಿಯ ಆಗರ. ಇವೆಲ್ಲದರಿಂದ ರೋಗ-ಕೀಟಗಳ ಕಾಟ ಕಾಡಲೇ ಇಲ್ಲ. ಇವರು ಗಮನಿಸಿದಂತೆ, ಮಜ್ಜಿಗೆಯಲ್ಲಿ ಬೆಣ್ಣೆ ತೆಗೆಯದಿದ್ದರಿಂದ ಅದು ಎಲೆಗೆ ಲೇಪಿತವಾಗಿರುತ್ತಿತ್ತು. ರಸ ಹೀರುವ ಅಥವಾ ಇತರೆ ಸಣ್ಣ ಕೀಟಗಳು ಈ ಬೆಣ್ಣೆಯ ಜಿಡ್ಡಿಗೆ ಅಂಟಿಕೊಂಡು ರೆಕ್ಕೆ ಕಳೆದಿಕೊಂಡು ಸಾಯುತ್ತಿದ್ದವು. ಪ್ರತಿ ಸಲ ಬದನೆ ಬೆಳೆದಾಗಲೂ ಇವರಿಗೆ ನಷ್ಟ ಆಗಿದ್ದೇ ಇಲ್ಲ. ಬೈಫ್ ಸಂಸ್ಥೆಯ ದೊಡ್ಡನಗೌಡ ಪಾಟೀಲ್‌ರವರ ಮಾರ್ಗದರ್ಶನವೂ ಇವರ ಯಶಸ್ಸಿನ ಹಿಂದಿದೆ.

ಕೃಪೆ: ಉದಯವಾಣಿ

ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯಲಿಕ್ಕೆ ತಗಲುವ ಖರ್ಚು (ರೂ.)



1. ನೆಲ ತಯಾರಿಸಲಿಕ್ಕೆ	4500
2. ಬೀಜದ ಖರ್ಚು (1 ಟನ್) ಸಾಗಣೆ	4000
3. ಕಬ್ಬು ಹಚ್ಚುವುದು ಮತ್ತು ಬೀಜೋಪಚಾರ	3000
4. ಸಾವಯವ ಗೊಬ್ಬರ + ಹಸಿರೆಲೆ ಗೊಬ್ಬರ	15000
5. ರಸಾಯನಿಕ ಗೊಬ್ಬರಗಳು	14000
6. ಹನಿ ನೀರಾವರಿ ಘಟಕ	12000
7. ಕಳೆ ನಿರ್ವಹಣೆ	10000
8. ನೀರು ನಿರ್ವಹಣೆ ಹಾಗೂ ಕಾವಲು	7000
9. ಬೋದು ಏರಿಸುವುದು	2000
10. ಪೀಡೆ ನಿರ್ವಹಣೆ	3000
11. ಕಟಾವು ಮತ್ತು ಲಗಾಣಿ	3000
ಒಟ್ಟು ಖರ್ಚು	77,500

ಆದಾಯ: 2,50,000 ಖರ್ಚು: 77,500
ನಿವ್ವಳ ಲಾಭ (18 ತಿಂಗಳಿಗೆ) : 1,72,500
ವರ್ಷಕ್ಕೆ: 1,15,000

(ಆಕರ: ಎಕರೆಗೆ "100" ಟನ್ ಕಬ್ಬು ಬೆಳೆಯಲು-ಬೇಸಾಯ ತಾಂತ್ರಿಕತೆಗಳು, 2019)

ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ. ಮಂಜುನಾಥಗೌಡರವರು ಬೆಟ್ಟಹಲಸೂರು ರೈತರ ಸೇವಾ ಸಹಕಾರ ಸಂಘ ನಿ. ಇದರ ಆಡಳಿತ ಮಂಡಳಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಇವರನ್ನು ಕಾರ್ಯಕಾರಿ ಸಮಿತಿ ಸದಸ್ಯರುಗಳು ಅಭಿನಂದಿಸಿದರು.

ಜಿಲ್ಲಾ ಕೃಷಿಕ ಸಮಾಜ ಹಾಗೂ ಕೃಷಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆಯಲಿರುವ ಕೃಷಿಮೇಳ–2020 ಇದರ ಪೂರ್ವ ಭಾವಿ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು.

26.02.2020ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ವಿಜಯಪುರ ಜಿಲ್ಲಾ ಕೃಷಿಕ ಸಮಾಜಕ್ಕೆ ಭೇಟಿ ಮಾಡಿದ ಸಂದರ್ಭದಲ್ಲಿ ಜಿಲ್ಲಾ ಕೃಷಿಕ ಸಮಾಜದ ಕಟ್ಟಡಗಳನ್ನು ವೀಕ್ಷಿಸಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್, ವಿಜಯಪುರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಬಿ.ಎಲ್.ಪಾಟೀಲ್, ರಾಜ್ಯ ಪ್ರತಿನಿಧಿಗಳಾದ ಶ್ರೀ ಶಿವಪ್ಪ ಭೋ. ಬಿರಾದಾರ, ಶ್ರೀ ಬಿ.ಅರ್.ರವಿ ಹಾಗೂ ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

25.02.2020ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಬಾಗಲಕೋಟ ಜಿಲ್ಲಾ ಕೃಷಿಕ ಸಮಾಜಕ್ಕೆ ಭೇಟಿ ಮಾಡಿದ ಸಂದರ್ಭದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೃಷಿಕ ಸಮಾಜದ ಕಟ್ಟಡಗಳನ್ನು ವೀಕ್ಷಿಸಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್‌ರವರು, ರಾಜ್ಯ ಪ್ರತಿನಿಧಿಗಳಾದ ಶ್ರೀ ಶಶಿಕಾಂತ್ ಪಾಟೀಲ್‌ರವರು, ಶ್ರೀ ಬಿ.ಅರ್.ರವಿರವರು ಹಾಗೂ ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

18.01.2020ರಂದು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕೃಷಿಮೇಳ–2020ರ ವಸ್ತು ಪ್ರದರ್ಶನವನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್. ಮಹೇಂದ್ರನಾಥ್‌ರವರು, ಮಾಜಿ ಆಡಳಿತ ಅಧ್ಯಕ್ಷರುಗಳಾದ ಶ್ರೀ ಡಿ.ಎಲ್.ನಾಗರಾಜರವರು, ಶ್ರೀ ಬಿ.ಕೆ ಮಂಜುನಾಥಗೌಡ ರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್, ಬೀದರ್ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ರಾಜ್‌ಕುಮಾರ್ ಎನ್ ಹಜಾರಿ ಹಾಗೂ ಬೀಜ ನಿಗಮದ ನಿರ್ದೇಶಕರಾದ ಶ್ರೀ ಐ.ಎಸ್.ಪಾಟೀಲ್ ವೀಕ್ಷಿಸಿದರು.

24.10.2019ರಂದು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ನಡೆದ 'ಕೃಷಿಮೇಳ–2019' ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಹಾಗೂ ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು ಭಾಗವಹಿಸಿ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು.

ಗುಜರಾತ್ ಕೃಷಿ ಅಧ್ಯಯನ ಪ್ರವಾಸದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರುಗಳು ವೀಕ್ಷಣೆ.

27.02.2020ರಂದು ತೋಟಗಾರಿಕೆ ಇಲಾಖೆ, ಜಿಲ್ಲಾ ಉದ್ಯಾನ ಕಲಾ ಸಂಘ, ವಿವಿಧ ಕೃಷಿ ಸಂಬಂಧಿತ ಇಲಾಖೆಗಳು ಹಾಗೂ ಹಾಪ್‌ಕಾಮ್ಸ್, ಶಿವಮೊಗ್ಗ ಇವರ ಸಂಯುಕ್ತ ಅಶ್ರಯದಲ್ಲಿ ಗಣರಾಜ್ಯೋತ್ಸವದ ಪ್ರಯುಕ್ತ 60ನೇ ಫಲಪುಷ್ಪ ಪ್ರದರ್ಶನ–2020 ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರೈತ ಹಾಗೂ ಸ್ಥಳೀಯ ಮುಖಂಡರುಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

ಪ್ರಗತಿ ಪರ ರೈತರು ಹಾಗೂ ಉತ್ತಮ ರೈತ ಪ್ರಶಸ್ತಿ ವಿಜೇತರಾದ ಶ್ರೀ ಎನ್.ಸಿ.ಪಾಟೇಲ್‌ರವರ ತೋಟಕ್ಕೆ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು, ಮಾಜಿ ಆಡಳೀತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್‌ರವರು ಹಾಗೂ ಪ್ರಗತಿ ಪರ ರೈತರಾದ ಶ್ರೀ ಮುನೇಗೌಡರವರು ಮತ್ತು ಶ್ರೀ ಕೆ.ಎನ್.ಅಶ್ವಥ್‌ರವರು ಭೇಟಿ ಮಾಡಿ ವೀಕ್ಷಿಸಿದರು.

ಹಾವೇರಿ ಜಿಲ್ಲಾ ಕೃಷಿಕ ಸಮಾಜದ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ರೈತ ದಿನಾಚರಣೆ ಹಾಗೂ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್. ಮಹೇಂದ್ರನಾಥ್‌ರವರು ಪ್ರಗತಿ ಪರ ರೈತರನ್ನು ಸನ್ಮಾನಿಸಿದರು. ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡ, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್, ರಾಜ್ಯ ಪ್ರತಿನಿಧಿಗಳಾದ ಶ್ರೀ ಜಿ.ಶಿವನಗೌಡರು, ಬೀದರ್ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ರಾಜ್‌ಕುಮಾರ್ ಎನ್ ಹಜಾರಿ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ವಿವಿದ ಇಲಾಖೆಯ ಅಧಿಕಾರಿಗಳು, ಸ್ಥಳೀಯ ರೈತ ಮುಖಂಡರುಗಳು ಇದ್ದರು.

ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್. ಮಹೇಂದ್ರನಾಥ್‌ರವರು ತರೀಕೆರೆ ತಾಲ್ಲೂಕು ಕೃಷಿಕ ಸಮಾಜಕ್ಕೆ ಭೇಟಿ ನೀಡಿ ಕಟ್ಟಡದ ಕಾಮಗಾರಿಯನ್ನು ವೀಕ್ಷಿಸಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಂದರ್ಭದಲ್ಲಿ ರಾಜ್ಯ ಪ್ರತಿನಿಧಿಗಳಾದ ಶ್ರೀ ಬಿ.ಆರ್.ರವಿರವರು ಹಾಗೂ ತಾಲ್ಲೂಕು ಕೃಷಿಕ ಸಮಾಜದ ಸದಸ್ಯರು ಉಪಸ್ಥಿತರಿದ್ದರು.

23.12.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಹಾಗೂ ಯುವಕ ರೈತ ಸಮಾಜದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಅಂತರಾರಾಷ್ಟ್ರೀಯ ರೈತರ ದಿನಾಚರಣೆ ಅಂಗವಾಗಿ ಯುವ ಕೃಷಿಮೇಳ–2019ರ ಕಾರ್ಯಕ್ರಮದಲ್ಲಿ ಮಾಜಿ ಸಂಸದರಾದ ಶ್ರೀ ಸಿ.ನಾರಾಯಣಸ್ವಾಮಿರವರು, ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡರವರು, ಬೀದರ್ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ರಾಜ್‌ಕುಮಾರ್ ಎನ್ ಹಜಾರಿರವರು, ಯುವಕ ರೈತ ಸಮಾಜದ ಅಧ್ಯಕ್ಷರಾದ ಶ್ರೀ ಬಿ.ವಿ.ಮಂಜುನಾಥ ಗೌಡರವರು, ಕೃಷಿ ಪಂಡಿತರು, ವಿವಿಧ ಇಲಾಖೆ ಅಧಿಕಾರಿಗಳು, ವಕೀಲರುಗಳು, ರೈತ ಮುಖಂಡರುಗಳು ಉಪಸ್ಥಿತರಿದ್ದರು.

16.10.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಬೆಂಗಳೂರು ನಗರ ಜಿಲ್ಲಾ ಕೃಷಿಕ ಸಮಾಜದ ನೂತನ ಕಟ್ಟಡಕ್ಕೆ ಭೇಟಿ ಮಾಡಿ ಕಟ್ಟಡವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಾಜಿ ಆಡಳಿತ ಅಧ್ಯಕ್ಷರು ಹಾಗೂ ಹಾಲಿ ಬೆಂಗಳೂರು ನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

05.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಕೊಳ್ಳೇಗಾಲ ತಾಲ್ಲೂಕು ಕೃಷಿಕ ಸಮಾಜಕ್ಕೆ ಭೇಟಿ ಮಾಡಿ ನಿವೇಶನವನ್ನು ವೀಕ್ಷಿಸಿದರು. ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡ, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್, ಚಾ.ರಾ.ನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಚಿಕ್ಕಸ್ವಾಮಿ, ತಾ.ಕೃ.ಸದ ಅಧ್ಯಕ್ಷರಾದ ಶ್ರೀ ರಾಘವೇಂದ್ರನಾಯ್ಡು ಹಾಗೂ ಜಿಲ್ಲಾ ಪ್ರತಿನಿಧಿಗಳು, ಸಹಾಯಕ ಕೃಷಿ ನಿರ್ದೇಶಕರು ಉಪಸ್ಥಿತರಿದ್ದರು.

05.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಮೈಸೂರು ಜಿಲ್ಲಾ ಕೃಷಿಕ ಸಮಾಜಕ್ಕೆ ಭೇಟಿ ಮಾಡಿ ನಿವೇಶನವನ್ನು ವೀಕ್ಷಿಸಿದರು. ಮಾಜಿ ಆಡಳಿತ ಅಧ್ಯಕ್ಷರು ಶ್ರೀ ಬಿ.ಕೆ.ಮಂಜುನಾಥಗೌಡ, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್, ಚಾ.ರಾ.ನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಚಿಕ್ಕಸ್ವಾಮಿ, ಮೈಸೂರು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಕೆ.ಎಸ್.ಶಿವಕುಮಾರ್, ರಾಜ್ಯಪ್ರತಿನಿಧಿಗಳಾದ ಶ್ರೀ ರೇವಣ್ಣ ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

04.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಶ್ರೀರಂಗಪಟ್ಟಣ ತಾಲ್ಲೂಕು ಕೃಷಿಕ ಸಮಾಜಕ್ಕೆ ಭೇಟಿ ಮಾಡಿ ನಿವೇಶನವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಾಜಿ ಆಡಳಿತ ಅಧ್ಯಕ್ಷರುಗಳಾದ ಶ್ರೀ ಡಿ.ಎಲ್.ನಾಗರಾಜರವರು, ಶ್ರೀ ಬಿ.ಕೆ.ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು ಹಾಗೂ ಸಹಾಯಕ ಕೃಷಿ ನಿರ್ದೇಶಕರು ಉಪಸ್ಥಿತರಿದ್ದರು.

16.10.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೃಷಿಕ ಸಮಾಜದ ನೂತನ ಕಟ್ಟಡಕ್ಕೆ ಭೇಟಿ ಮಾಡಿ ಕಟ್ಟಡವನ್ನು ವೀಕ್ಷಿಸಿದರು. ಮಾಜಿ ಆಡಳಿತ ಅಧ್ಯಕ್ಷರು ಶ್ರೀ ಬಿ.ಕೆ.ಮಂಜುನಾಥಗೌಡರವರು, ಬೆಂಗಳೂರು (ಗ್ರಾ) ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಆರ್.ರವಿಕುಮಾರ್‌ರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

04.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಮಂಡ್ಯ ಜಿಲ್ಲಾ ಕೃಷಿಕ ಸಮಾಜಕ್ಕೆ ಭೇಟಿ ಮಾಡಿ ಕಟ್ಟಡವನ್ನು ವೀಕ್ಷಿಸಿದರು. ಮಾಜಿ ಆಡಳಿತ ಅಧ್ಯಕ್ಷರುಗಳಾದ ಶ್ರೀ ಡಿ.ಎಲ್.ನಾಗರಾಜ, ಶ್ರೀ ಬಿ.ಕೆ.ಮಂಜುನಾಥಗೌಡ, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್, ಮಂಡ್ಯ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಕೆ.ಬಿ.ಈಶ್ವರಪ್ರಸಾದ್, ರಾಜ್ಯಪ್ರತಿನಿಧಿಗಳಾದ ಶ್ರೀ ಕೆಂಪೇಗೌಡ ಉ॥ ತಮ್ಮಯ್ಯ ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

16.10.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಹಾಗೂ ಮಾಜಿ ಆಡಳಿತ ಅಧ್ಯಕ್ಷರು ಶ್ರೀ ಬಿ.ಕೆ.ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್. ಪಾಟೀಲ್‌ರವರು ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ಜಾಲಾ ಹೋ, ತಿಮ್ಮಸಂದ್ರ ಗ್ರಾಮದ ಪ್ರಗತಿ ಪರ ರೈತರಾದ ಶ್ರೀ ಶಿವಣ್ಣನವರ ತೋಟಕ್ಕೆ ಭೇಟಿ ನೀಡಿ ದಾಳಿಂಬೆ ಬೆಳೆಯನ್ನು ವೀಕ್ಷಿಸಿದರು.

06.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಚಾಮರಾಜನಗರ ಜಿಲ್ಲಾ ಕೃಷಿಕ ಸಮಾಜಕ್ಕೆ ಭೇಟಿ ಮಾಡಿ ಕಟ್ಟಡವನ್ನು ವೀಕ್ಷಿಸಿದರು. ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ. ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು, ಚಾ.ರಾ.ನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಚಿಕ್ಕಸ್ವಾಮಿರವರು, ರಾಜ್ಯಪ್ರತಿನಿಧಿಗಳಾದ ಶ್ರೀ ಕೆ.ಎಂ.ನಾಗಮಲ್ಲಪ್ಪ ರವರು ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

07.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡರವರ ತೋಟಕ್ಕೆ ಭೇಟಿ ನೀಡಿ ಜೋಳ, ಹೂಕೋಸ್, ಮೆಣಸಿನಕಾಯಿ ಬೆಳೆಗಳನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಂ.ಹೆಚ್.ಪಾಟೀಲ್‌ರವರು ಹಾಗೂ ಪ್ರಗತಿ ಪರ ರೈತರಾದ ಶ್ರೀ ರವೀಂದ್ರನಾಥಗೌಡರವರು ಉಪಸ್ಥಿತರಿದ್ದರು.

06.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಯಳಂದೂರು ತಾಲ್ಲೂಕು ಕೃಷಿಕ ಸಮಾಜಕ್ಕೆ ಭೇಟಿ ಮಾಡಿ ಸಭೆಯಲ್ಲಿ ಪಾಲ್ಗೊಂಡರು. ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ. ಮಂಜುನಾಥಗೌಡ, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್, ಚಾ.ರಾ.ನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಚಿಕ್ಕಸ್ವಾಮಿ, ಕೊಳ್ಳೇಗಾಲ ತಾ.ಕೃ.ಸದ ಅಧ್ಯಕ್ಷರಾದ ಶ್ರೀ ರಾಘವೇಂದ್ರನಾಯ್ಡು, ಯಳಂದೂರು ತಾ.ಕೃ.ಸದ ಅಧ್ಯಕ್ಷರಾದ ಶ್ರೀ ಎಂ.ಮದೇಶ ಹಾಗೂ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

12.11.2019ರಂದು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಚನ್ನಗಿರಿ ತಾಲ್ಲೂಕು ಕೃಷಿಕ ಸಮಾಜಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ದಾವಣಗೆರೆ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಜಿ.ಹನುಮಂತಪ್ಪನವರು ಹಾಗೂ ಚನ್ನಗಿರಿ ತಾಲ್ಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

12.11.2019ರಂದು ಭದ್ರಾವತಿ ತಾಲ್ಲೂಕು ಕೃಷಿಕ ಸಮಾಜದಲ್ಲಿ ಏರ್ಪಡಿಸಿದ್ದ ಅಡಿಕೆ ಬೆಳೆ ವಿಚಾರ ಸಂಕಿರಣ ಕಾರ್ಯಕ್ರಮ ಹಾಗೂ ಆಡಳಿತ ಅಧ್ಯಕ್ಷರ ಅಭಿನಂದನಾ ಸಮಾರಂಭದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷರು, ಸದಸ್ಯರುಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

18.01.2020ರಂದು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕೃಷಿಮೇಳ–2020ರ ಕಾರ್ಯಕ್ರಮವನ್ನು ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ್ ಸವದಿರವರು ಉದ್ಘಾಟಿಸಿದರು. ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್. ಮಹೇಂದ್ರನಾಥ್‌ರವರು, ಧಾರವಾಡ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಬಿ.ಎಂ.ಕುಂದಗೋಳರವರು, ಬೆಳಗಾವಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಸ್.ಎಫ್.ದೊಡ್ಡಗೌಡ್ರುರವರು, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು, ಸ್ಥಳೀಯ ಮುಖಂಡರುಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಳಗಾವಿ ಜಿಲ್ಲೆಯಲ್ಲಿ ಆಯೋಜಿಸಿದ್ದ ಸಾವಯವ ಸಿರಿಧಾನ್ಯ ಮೇಳ ಹಾಗೂ ಫಲಪುಷ್ಪ ಪ್ರದರ್ಶನ–2020 ಕಾರ್ಯಕ್ರಮವನ್ನು ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ್ ಸವದಿರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಶಾಸಕರು, ಬೆಳಗಾವಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಎಸ್.ಎಫ್.ದೊಡ್ಡಗೌಡ್ರರವರು, ಕೊಪ್ಪಳ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಶಿವಣ್ಣ ಮೂಲಿಮನಿರವರು, ರೈತ ಮುಖಂಡರುಗಳು ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

24.10.2019ರಂದು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ನಡೆದ 'ಕೃಷಿ ಮೇಳ–2019' ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಹಾಗೂ ಮಾಜಿ ಆಡಳಿತ ಅಧ್ಯಕ್ಷರಾದ ಶ್ರೀ ಬಿ.ಕೆ.ಮಂಜುನಾಥಗೌಡರವರು, ಹಾವೇರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಮುರುಗೇಂದ್ರಪ್ಪ ಹೆಚ್.ಪಾಟೀಲ್‌ರವರು ಭಾಗವಹಿಸಿದ್ದರು.

ಕರ್ನಾಟಕ ವ್ಯವಸಾಯ ಪತ್ರಿಕೆ

ಒಟ್ಟು ಪುಟಗಳು: **32+4=36** ಮಾರ್ಚ್ **2020**

KARNATAKA VYAVASAYA PATRIKE

Kannada Monthly

R.N.I. No. 13256/58, permitted to post on pre-payment of postage in cash at Bengaluru GPO, Bengaluru- 560 001, under PMG, Bengaluru HQ Region. Licence No. BGR/KN/BP/21649/2020
Date of Posting : 27-03-2020 to 07-04-2020 Postage: Rs. 7/- (Rupees Seven Only)

13.02.2020ರಂದು ವಿಧಾನ ಸೌಧದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ರೈತ ಸಂಘಗಳ ಪ್ರತಿನಿಧಿಗಳು ಹಾಗೂ ರೈತ ಮುಖಂಡರುಗಳೊಂದಿಗೆ 2020–21ನೇ ಸಾಲಿನ ಆಯವ್ಯಯ ಪೂರ್ವಭಾವಿ ಚರ್ಚೆಯ ಸಭೆಯಲ್ಲಿ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಗಳಿಗೆ ಆಡಳಿತ ಅಧ್ಯಕ್ಷರಾದ ಶ್ರೀ ಎಂ.ಎಸ್.ಮಹೇಂದ್ರನಾಥ್‌ರವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು ರೈತರ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿದರು.

Published by : Karnataka Pradesh Krushik Samaj
Edited & Printed by: Sri. G.S. Jayaswamy, Official Secretary, at Karnataka Agricultural Publishing House, Nrupathunga Road, Bangalore - 560 001.